ಚಿಂತನ ಬಯಲು

ತ್ರೈಮಾಸಿಕ

ISSN 2278-2192

ಸಂಪುಟ : 8, ಸಂಚಿಕೆ : 3 ಜನವರಿ – ಮಾರ್ಚ್ 2020

Volume : 8, Issue : 3 January - March 2020

ಚಿಂತನ ಬಯಲು

ಸಂಪಾದಕಿ
ರೇಶ್ಮಾ ಜಿ. ಭಟ್

ಸಂಪಾದಕೀಯ ಸಲಹೆ
ಡಾ. ಅಜಕ್ಕಳ ಗಿರೀಶ ಭಟ್
ಡಾ. ಶ್ರೀಧರ್ ಎಚ್.ಜಿ.
ಡಾ. ವರದರಾಜ ಚಂದ್ರಗಿರಿ
ಡಾ. ಜಿ.ಬಿ. ಹರೀಶ್
ಶ್ರೀ ಎಂ.ಎ. ಸುಬ್ರಹ್ಮಣ್ಯ

ಚಿಂತನ ಬಯಲು
ನಂ. 15–109, ಮೊಡಂಕಾಪು ಅಂಚೆ
ಬಂಟ್ವಾಳ ತಾಲೂಕು, ದಕ್ಷಿಣ ಕನ್ನಡ – 574 219

CHINTHANA BAYALU
Kannada Quarterly; A Peer Reviewed Journal
Volume 8, Issue 3, January - March 2020

Edited, Published, Printed & Owned by
Reshma G. Bhat
Door No. 15-109, Modankapu Post
Bantwal Taluk, Dakshina Kannada - 574 219
Karnataka
Phone : 9449772651
Email : chinthanabayalu@gmail.com

© : Reserved

Size : Dy 1/8

Paper Used : 70 GSM

Pages : 64

Price : Rs. 50

ಮುಖಪುಟ ಚಿತ್ರ : **ಕ್ರಿ.ಶ. 400–500ರ ಭೂ ವರಾಹ ಶಿಲ್ಪ (ಲಂಡನ್ ಮ್ಯೂಸಿಯಂ)**

Cover Photo by : **Girisha Bhat**

Cover Design : **Kallur Nagesh**

Designed & Printed at :
Aakrithi Prints
Maximus Complex
Light House Hill Road
Mangaluru - 575 001
Tel. : 0824 2443002

ಸೂಚನೆ : ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳ ಹಕ್ಕು ಆಯಾ ಲೇಖಕರದ್ದಾಗಿರುತ್ತದೆ. ಇಲ್ಲಿಯ ಲೇಖನಗಳಲ್ಲಿ ವ್ಯಕ್ತವಾಗುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತವೆ. ಅವುಗಳು ಪತ್ರಿಕೆಯ ಅಭಿಪ್ರಾಯಗಳಾಗಿರಬೇಕೆಂದೇನಿಲ್ಲ.

ಪುಟನೋಟ

1. **ವಿದ್ಯಾರ್ಥಿಗಳಲ್ಲಿ ಪುಸ್ತಕ ಪ್ರೀತಿ ಬೆಳೆಸುವ ಕ್ರಮಗಳು ಮತ್ತು ಜೀವನಚರಿತ್ರೆ – ಆತ್ಮಕಥೆಗಳನ್ನು ಓದಲು ಪ್ರೋತ್ಸಾಹಿಸುವುದು**
❖ ಅಶೋಕ ಕಾಮತ್ / 5

2. **ಕನ್ನಡ ಗಜಲ್‌ಗಳ ನಿರೀಕ್ಷೆಗಳು ಮತ್ತು ಸವಾಲುಗಳು**
❖ ಹಳೆಮನೆ ರಾಜಶೇಖರ / 15

3. **ಪಕ್ಷನಿಷ್ಠೆ ಮತ್ತು ಪಕ್ಷಾಂತರ**
❖ ಅಜಕ್ಕಳ ಗಿರೀಶ ಭಟ್ / 25

4. **ಭಗವತಿ ಆರಾಧನೆ ಮತ್ತು ಪ್ರಾಣಿ ಜಾನಪದ**
❖ ಅರುಣ್ / 29

5. **ಭರತನಾಟ್ಯದ 'ದಶವಿಧ ಅಡವು' ವರ್ಗೀಕರಣಕ್ಕೊಂದು ಪುನರ್‌ಸ್ಪರ್ಶ**
❖ ಡಾ.ಮನೋರಮಾ ಬಿ.ಎನ್ / 36

6. **ಪಂಚತಂತ್ರ ಕಥೆಗಳಲ್ಲಿ ವ್ಯಕ್ತವಾಗುವ ಪ್ರಾಣಿ ಬೇಟೆಯ ನಿರಾಕರಣೆಯನಿಲುವುಗಳು**
❖ ರವಿಶಂಕರ ಜಿ.ಕೆ. / 44

7. **ಸಂಸ್ಕೃತ–ಕನ್ನಡ ಭಾಷಾಂತರ ಪ್ರಕ್ರಿಯೆ**
❖ ಡಾ. ಮೋಹನ ಕುಂಟಾರ್ / 50

8. **ಪುಸ್ತಕ ಪರಿಚಯ – ನವೆ ನವೋನ್ಮೇಷಶಾಲಿನೀ**
❖ ಬಿ.ಎಂ. ರೋಹಿಣಿ / 60

ಸಂಪಾದಕೀಯ

ಓದುವವರ ಸಂಖ್ಯೆ ಕಡಿಮೆಯಾಗುತ್ತಿದೆ ಎಂದು ಸಾಮಾನ್ಯವಾಗಿ ಈಗ ಎಲ್ಲರೂ ಹೇಳುವುದನ್ನು ಕೇಳುತ್ತೇವೆ. ಕಂಪ್ಯೂಟರ್, ಮೊಬೈಲುಗಳು ಬಂದುದರಿಂದ ಮಾಹಿತಿಗಳನ್ನು ದೃಶ್ಯ ಮಾಧ್ಯಮದ ಮೂಲಕವೇ ಪಡೆಯುವವರ ಪ್ರಮಾಣ ಹೆಚ್ಚಾಗುತ್ತಿದೆ. ಆದರೆ ದೃಶ್ಯ ಮಾಧ್ಯಮಗಳು ಪುಸ್ತಕ–ಪತ್ರಿಕೆಗಳಂತೆ ಶಾಂತ ಅಥವಾ ವಿಶ್ರಾಂತ ಮನಸ್ಥಿತಿಯಲ್ಲಿ ವಿಷಯಗಳನ್ನು ಗ್ರಹಿಸಲು ಅನುಕೂಲಕರವಾಗಿವೆಯೇ ಎಂಬ ಪ್ರಶ್ನೆಯಿದೆ. ಬದುಕಿನ ವೇಗವನ್ನು ಕಡಿಮೆಗೊಳಿಸಿ ಆಗಾಗ ನಮ್ಮ ಅನುಭವ ಮತ್ತು ನಾವು ಬದುಕಿದ ರೀತಿಯನ್ನು ಅವಲೋಕನ ಮಾಡುವ ಅವಕಾಶವನ್ನು ಓದುವ ಪ್ರಕ್ರಿಯೆಯು ಒದಗಿಸುತ್ತದೆ. ಅಂಥ ಓದಿಗೆ, ವಿಮರ್ಶೆಗೆ ಇಲ್ಲಿರುವ ಲೇಖನಗಳು ಪ್ರೇರಣೆಯಾಗಲಿ ಎಂಬುದು ನಮ್ಮ ಆಶಯ. ಎಂದಿನಂತೆ ಓದುಗರ ಅಭಿಪ್ರಾಯಗಳಿಗೆ ಸ್ವಾಗತ. ಓದುಗರ ಅಭಿಪ್ರಾಯಗಳು ಪತ್ರಿಕೆಯನ್ನು ಬೆಳೆಸುತ್ತವೆ ಎಂದು ಬೇರೆ ಹೇಳಬೇಕಾಗಿಲ್ಲ.

ಸಂ.

ವಿದ್ಯಾರ್ಥಿಗಳಲ್ಲಿ ಪುಸ್ತಕ ಪ್ರೀತಿ ಬೆಳೆಸುವ ಕ್ರಮಗಳು ಮತ್ತು ಜೀವನಚರಿತ್ರೆ – ಆತ್ಮಕಥೆಗಳನ್ನು ಓದಲು ಪ್ರೋತ್ಸಾಹಿಸುವುದು

ಅಶೋಕ ಕಾಮತ್
ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕುಂದಾಪುರ

ಗಾಜಿನ ಕಪಾಟಿನಲ್ಲಿದ್ದರೂ ಪ್ರದರ್ಶನದ
ವಸ್ತುಗಳಲ್ಲ ನಾವು; ಬೇಡಿ ಬಯಸಿರಲಿಲ್ಲ
ಈ ಬಗೆಯ ವಿಶ್ರಾಂತಿ, ಹರಿದರೂ ಚಿಂತೆಯಿಲ್ಲ
ಹರಿಯುತ್ತಿರಬೇಕು ಕೈಯಿಂದ ಕೈಗೆ.

ಚೆನ್ನವೀರಕಣವಿಯವರ ಗ್ರಂಥ ವೇದನೆ ಎಂಬ ಕವನದ ಸಾಲುಗಳಿವು. ಗ್ರಂಥಾಲಯದ ಕಪಾಟಿನಲ್ಲಿಟ್ಟಿರುವ ಪುಸ್ತಕಗಳ ವೇದನೆಯ ಈ ಮಾತುಗಳಿಗೆ ಕಿವಿಯಾಗಬೇಕಾದವರು ಯಾರು? ಸ್ಪಂದಿಸಿ ಸಾಂತ್ವನ ಹೇಳಬೇಕಾದವರು ಯಾರು? ಎಂಬುದೇ ಇಂದಿನ ಪ್ರಮುಖ ಪ್ರಶ್ನೆ.

ಇಂದಿನ ವಿದ್ಯಾರ್ಥಿಗಳಲ್ಲಿ ಟಿವಿ ವೀಕ್ಷಣೆ ಮತ್ತು ಸಮೂಹ ಮಾಧ್ಯಮಗಳ ಪ್ರಭಾವದಿಂದ ಓದುವ ಗುಣವೇ ಕಡಿಮೆಯಾಗುತ್ತಿದೆ ಎಂದು ಹಿರಿಯರು ದೂರು ಹೇಳಿದ ಕುರಿತು ಆಗಾಗ್ಗೆ ಪತ್ರಿಕೆಗಳಲ್ಲಿ ವರದಿ ಬರುತ್ತಿರುತ್ತದೆ. ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಲ್ಲಿ ಓದುವ ಕೌಶಲದ ಕೊರತೆ ಇದೆ ಎಂಬುದು ಅಸರ್ ಅಧ್ಯಯನದ ವರದಿ. ವಿಶ್ವವಿದ್ಯಾನಿಲಯಗಳಲ್ಲಿ ಗ್ರಂಥಾಲಯದ ಬಳಕೆಗಿಂತ ಇ–ಪುಸ್ತಕಗಳ ಕುರಿತು ಬೇಡಿಕೆ ಹೆಚ್ಚಾಗುತ್ತಿದೆ ಎಂದು ಮತ್ತೊಂದು ಸಂಶೋಧನೆ ಹೇಳುತ್ತದೆ.

"ಓದು ಆನಂದದಾಯಕ ಕ್ರಿಯೆ ಮಾತ್ರವಲ್ಲ ಶಿಕ್ಷಣದ ಮೂಲಭೂತ ಆಕರ ಕೂಡಾ ಹೌದು. ಓದು ಬದುಕಿನ ಕುರಿತಂತೆ ವ್ಯಕ್ತಿಯೊಬ್ಬನ ಚಿಂತನೆಗಳನ್ನು ವಿಶಾಲಗೊಳಿಸುತ್ತದೆ. ಮತ್ತು ಇಡೀ ಸಮಾಜದಲ್ಲಿ ಪರಿವರ್ತನೆಯನ್ನು ಉಂಟುಮಾಡುವ ಸಾಧ್ಯತೆಗಳು ಓದಿಗೆ ಇದೆ. ಆತನಲ್ಲಿ ಚಿಂತನೆ ಮತ್ತು ತಾರ್ಕಿಕತೆಯನ್ನು ಬೆಳೆಸುವ ಮೂಲಕ ಆತನ ವ್ಯಕ್ತಿಗತ ಬೆಳವಣಿಗೆಗೆ ಸಹಕಾರಿಯಾಗುತ್ತದೆ"[1]

ಓದುವ ಆಸಕ್ತಿಯನ್ನು ಹುಟ್ಟಿಸುವಲ್ಲಿ ಆಂತರಿಕ ಪ್ರೇರಣೆಯ ಪಾಲೆಷ್ಟು? ಬಾಹ್ಯ ಪ್ರೇರಣೆಯ ಪ್ರಭಾವವೆಷ್ಟು ಎಂಬುದು ಸದಾ ಕುತೂಹಲದ ವಿಷಯವಾಗಿದೆ. ಪಠ್ಯಪುಸ್ತಕಗಳನ್ನು ಹೊರತುಪಡಿಸಿ ಇತರ ಪುಸ್ತಕಗಳನ್ನು ಓದಿದರೆ ಅಪರಾಧವೆಂಬಂತೆ ಕಾಣುವ ಪೋಷಕರು, ಸ್ವಯಂ ಓದುವ ಹವ್ಯಾಸವೇ ಇಲ್ಲದ ಶಿಕ್ಷಕರು, ಪುಸ್ತಕಗಳ ಓದನ್ನು ಹೀಯಾಳಿಸುವಂತ ಗೆಳೆಯರ ಬಳಗ–ಈ ಸಂದರ್ಭಗಳು ಕೆಲವು ವಿದ್ಯಾರ್ಥಿಗಳಿಗೆ ಎದುರಾಗಬಹುದು. ತಂದೆಯೋ, ತಾಯಿಯೋ ಪ್ರತಿ ದಿನ ಮಲಗುವ ಮುನ್ನ ಪುಸ್ತಕವನ್ನು ಓದುತ್ತಿರುವುದನ್ನು ಗಮನಿಸುವ ಮಗು, ಮಕ್ಕಳ ಹುಟ್ಟಿದ ಹಬ್ಬಕ್ಕೆ ಅವರ ವಯಸ್ಸಿಗೆ ಒಪ್ಪಿಗೆಯಾಗುವ ಪುಸ್ತಕಗಳನ್ನೇ ಉಡುಗೊರೆಯಾಗಿ ನೀಡುವ ಬಂಧುಗಳು, ಪಾಠ ಮಾಡುವ

ಸಂದರ್ಭದಲ್ಲಿ ತಾವು ಓದಿದ ಪುಸ್ತಕದ ಕಥೆಯನ್ನು ಹೇಳುವ ಶಿಕ್ಷಕರು, ಓದಿ ನನಗೆ ತುಂಬ ಖುಷಿ ಕೊಟ್ಟ ಪುಸ್ತಕವಿದು 'ನೀನೂ ಓದು' ಎಂದು ಹೇಳುವ ಸ್ನೇಹಿತರು. ಇದು ಭಿನ್ನವಾದ ಸಂದರ್ಭವನ್ನು ಹೇಳುತ್ತದೆ. ಪುಸ್ತಕ ಓದಿಗೆ ಆಂತರಿಕ ಮತ್ತು ಬಾಹ್ಯ ಪ್ರೇರಣೆಗಳು ಪರಸ್ಪರ ಪೂರಕವಾಗಿರುತ್ತವೆ.

ಇಂದು ಪುಸ್ತಕಗಳಿಂದ ದೂರ ಸಾಗುತ್ತಿರುವವರನ್ನು ಅದಕ್ಕೆ ಕಾರಣ ಕೇಳಿದರೆ ಅವರು 'ಪುರುಸೊತ್ತಿಲ್ಲ' ಎಂದು ಹೇಳುವುದು ಸಿದ್ಧ. ಸಮೂಹ ಮಾಧ್ಯಮಗಳು ಸಾಮಾಜಿಕ ಜಾಲತಾಣಗಳು ಸಮಯದ(ಅಪ?)ವ್ಯಯಕ್ಕೆ ದೊಡ್ಡ ಕಾರಣಗಳಾಗಿ ಪರಿಣಮಿಸಿವೆ. ಮೊಬೈಲ್‌ನಲ್ಲಿ ಪುಸ್ತಕ/ ಲೇಖನ ಓದುವವರಿಗೆ ಅಕ್ಷರಗಳಿಗೆ ಹಿಮ್ಮೇಳದಲ್ಲಿ ಬೆಳಕು ಇರುತ್ತದೆ. ಆದರೆ ಮುದ್ರಿತ ಪುಸ್ತಕ ಓದುವಾಗ ಬೆಳಕು ಕಡಿಮೆಯೆನಿಸಿ ಓದುವುದೇ ಬೇಡವೆನಿಸಿ ಬಿಡುವ ಸಾಧ್ಯತೆಗಳಿವೆ. (ಇ–ಪುಸ್ತಕಗಳ ಓದು ಮುದ್ರಿತ ಪುಸ್ತಕಗಳ ಓದಿಗೆ ಸರ್ವಸಮ). ಪುಸ್ತಕ ಓದಿಗೆ ದೊಡ್ಡ ಶತ್ರು ಎಂಬುದಿದ್ದರೆ ಅದು ಏಕಾಗ್ರತೆಯ ಕೊರತೆ ಎನ್ನಬಹುದು. ಟಿ.ವಿ. ಧಾರಾವಾಹಿ, ಜಾಹಿರಾತುಗಳಲ್ಲಿ ನಿಮಿಷವೊಂದರಲ್ಲಿ ಹತ್ತಾರು ಬಾರಿ ಬದಲಾಗುವ ಸೀನ್‌ಗಳಿರುತ್ತವೆ. ಪುಸ್ತಕ ಓದುವಾಗ ಅದಿಲ್ಲದೇ ಏಕತಾನತೆ ಎನಿಸುವ ಸಾಧ್ಯತೆಗಳಿವೆ ಎನ್ನುತ್ತವೆ ಮನೋವೈಜ್ಞಾನಿಕ ಸಂಶೋಧನೆಗಳು.

ರಾಮಾಯಣದ ಟಿವಿ ಧಾರಾವಾಹಿ ಅಥವಾ ಸಿನೆಮಾ ವೀಕ್ಷಿಸುವುದಕ್ಕೂ, ರಾಮಾಯಣ ಪುಸ್ತಕವನ್ನು ಓದುವುದಕ್ಕೂ ಇರುವ ವ್ಯತ್ಯಾಸಗಳ ಕುರಿತು ವಿದ್ಯಾರ್ಥಿಗಳೊಂದಿಗೆ ಚರ್ಚೆಯೊಂದು ನಡೆದಿತ್ತು. ಸಂಗೀತ, ಅಭಿನಯ, ದೃಶ್ಯ ಮಾಧ್ಯಮಗಳ ಕಾರಣದಿಂದ ತುಂಬ ಧಾರಾವಾಹಿ ಅಥವಾ ಸಿನೆಮಾ ಆಕರ್ಷಣೀಯ ಎಂದು ಕೆಲವು ವಿದ್ಯಾರ್ಥಿಗಳು ಹೇಳಿದರೆ, ಓದು ಅತ್ಯಂತ ವೈಯಕ್ತಿಕ ಆನಂದದ ಅನುಭವವನ್ನು ನೀಡುತ್ತದೆ. ಅದು ರಜತ ಪರದೆಯ ವೀಕ್ಷಣೆಗೆ ಮೀರಿದ ಸಂತಸವನ್ನು ತರುತ್ತದೆ ಎಂಬುದು ಮಿಕ್ಕವರ ಅನಿಸಿಕೆ.

ಸಾಹಿತ್ಯದಲ್ಲಿ ಕಥೆ, ಕಾದಂಬರಿ, ಕವನ, ಚುಟುಕ ಮುಂತಾದ ಹಲವಾರು ಪ್ರಕಾರಗಳಿವೆ. ಅಂತೆಯೇ ಜೀವನಚರಿತ್ರೆ ಮತ್ತು ಆತ್ಮಕಥೆಗಳು ಎಂಬ ಅವಳಿ ಪ್ರಕಾರಗಳಿವೆ. ಬೇರೆಯವರ ಬದುಕನ್ನು ತಿಳಿಯುವ ಕುತೂಹಲ ಸಹಜವಾಗಿ ಮಾನವನಿಗೆ ಇರುವುದರಿಂದಲೋ ಏನೋ ಅಥವಾ ಯಶಸ್ವಿ ವ್ಯಕ್ತಿಯಬ್ಬರು ಜೀವನದಲ್ಲಿ ಎದುರಾದ ಸವಾಲುಗಳಿಗೆ ಹೇಗೆ ಪ್ರತಿಕ್ರಿಯೆ ನೀಡುತ್ತಾರೆ ಎಂಬುದನ್ನು ತಿಳಿಯುವ ಅವಕಾಶ ಈ ಜೀವನಚರಿತ್ರೆಗಳ ಓದಿನಿಂದ ದೊರಕುವ ಕಾರಣದಿಂದ ಇದರ ಓದಿಗಾಗಿ ಹಪಾಹಪಿಸುವವರಿದ್ದಾರೆ. ಜೀವನಚರಿತ್ರೆ ಹಾಗೂ ಆತ್ಮಕಥೆಗಳ ಓದು ಓದುಗನ ಜೀವನದ ಕೆಲವು ಸಮಸ್ಯೆಗಳಿಗೆ ಉತ್ತರವನ್ನು ಸರಳವಾಗಿ ನೀಡಿದ ಸನ್ನಿವೇಶಗಳಿವೆ. ಈ ಎರಡು ಪ್ರಕಾರಗಳ ಕುರಿತು ಕೆಲವು ಉಲ್ಲೇಖಗಳನ್ನು ಗಮನಿಸೋಣ.

"ಇಂದು ನಾವು ಜೀವನಚರಿತ್ರೆ ಎಂದು ಕರೆಯುವ ಪ್ರಕಾರ ಭಾರತೀಯ ಭಾಷೆಗಳಲ್ಲಿ ಗಣನೀಯ ಪ್ರಮಾಣದಲ್ಲಿತ್ತು. ಮಹಾಧಾರ್ಮಿಕ ಗುರುಗಳ ಸಂತರ ಜೀವನವನ್ನು ಕುರಿತು ಬರೆಯುವ ಸಂಪ್ರದಾಯ ಸಂಸ್ಕೃತದಲ್ಲಿರುವ(ಕ್ರಿ.ಶ 2ನೇ ಶತಮಾನ) ಅಶ್ವಘೋಷನ 'ಬುದ್ಧಚರಿತ'ದಷ್ಟೇ ಹಳೆಯದು."[2]

ಆ ಬಳಿಕ ಅದೆಷ್ಟು ಜೀವನಚರಿತ್ರೆಗಳು ಪ್ರಕಟಗೊಂಡಿವೆ. ಒರ್ವ ಸಾಧಕರ ಕುರಿತು ಒಬ್ಬರಿಗಿಂತ ಹೆಚ್ಚು ಮಂದಿ ಜೀವನಚರಿತ್ರೆಗಳನ್ನು ಬರೆದಿರುವುದಿದೆ. ಆರಂಭದಲ್ಲಿ ರಾಜ ಮಹಾರಾಜರ ಜೀವನಚರಿತ್ರೆಗಳು, ನಂತರ ಧಾರ್ಮಿಕ ಚಿಂತಕರ ಆತ್ಮಕಥೆಗಳು,

ರಾಜಕಾರಣಿಗಳ ಜೀವನಚರಿತ್ರೆಗಳು ಅಲ್ಲದೇ ಸಾಹಿತಿ, ಶಿಲ್ಪಿ, ಕಲಾವಿದ, ಸಂಗೀತಕಾರ, ಪರ್ವತಾರೋಹಿ, ಅಡುಗೆ ಭಟ್ಟ ಹೀಗೆ ವೈವಿಧ್ಯಮಯ ಹಿನ್ನೆಲೆಯುಳ್ಳವರ ಜೀವನ ಚರಿತ್ರೆಗಳು ಪ್ರಕಟಗೊಂಡಿವೆ.

"ಸಾಹಿತ್ಯಕ್ಷೇತ್ರದಲ್ಲಿ ಅತ್ಯಂತ ಸರಳವೂ ನೇರವೂ ಪರಿಣಾಮಕಾರಿಯೂ ಆದ ಪ್ರಕಾರವೆಂದರೆ ಜೀವನಚರಿತ್ರೆ. ಅದರ ಆಕರ್ಷಣೆಗೆ ಮುಖ್ಯವಾದ ಕಾರಣ ಅದರ ವಾಸ್ತವತೆ ಮತ್ತು ಅಮೂರ್ತತ್ವದ ಅಭಾವ. ಅದರಲ್ಲಿ ಬರುವ ವ್ಯಕ್ತಿಗಳೆಲ್ಲ ನೆರೆಹೊರೆಯವರಾದ್ದರಿಂದ ಅವರ ಸುಖದುಃಖಗಳು, ಭಾವಾಲೋಚನಗಳು, ಕಳವಳ ಕಾತರಗಳು, ಸಾಧನೆ ಸಿದ್ಧಿಗಳು, ಕಷ್ಟಕಾರ್ಪಣ್ಯಗಳು, ಆಟಪಾಟಗಳು ಪ್ರತಿಯೊಂದು ಬದುಕಿನಲ್ಲಿಯೂ ಸಂಭವಿಸಬಹುದಾದ ವಾದ್ದರಿಂದ ಮನುಕುಲದ ಸಹಾನುಭೂತಿಗೆ ಪಾತ್ರವಾಗುತ್ತವೆ; ಪ್ರತಿಯೊಬ್ಬ ವ್ಯಕ್ತಿಯ ಅಂತರಂಗವನ್ನು ಮುಟ್ಟಿ ತಟ್ಟುತ್ತವೆ. ಅಷ್ಟೇ ಅಲ್ಲ, ಆ ವ್ಯಕ್ತಿಗಳ ಜೀವನ ವ್ಯವಹಾರಗಳಲ್ಲಿ ಓದುಗನೂ ಭಾಗಿಯಾಗುತ್ತಾನೆ. ತನ್ನವನ್ನು ಅವನೊಂದಿಗೆ ಹೋಲಿಸಿಕೊಂಡು ತನ್ನ ಓರೆ ಕೋರೆಗಳನ್ನು ತಿದ್ದಿಕೊಳ್ಳುತ್ತಾನೆ. ಆ ವಿಚಾರವೇ ಮಾನವನ ವಿಚಾರಕ್ಕೆ ಪ್ರೇರಕವಾಗುತ್ತದೆ. ಆತನ ಬಾಳಿನಲ್ಲಿ ಅಗೋಚರವಾಗಿ ಪ್ರವಹಿಸುತ್ತಿರುವ ರಾಗಭಾವಗಳನ್ನು ಬಡಿದೆಬ್ಬಿಸಿ ಉದಾತ್ತಗೊಳಿಸಿ ಊರ್ಧ್ವದ ಕಡೆಗೆ ತಿರುಗಿಸುತ್ತದೆ. ಎಲ್ಲಕ್ಕಿಂತ ಮಿಗಿಲಾಗಿ ಲೋಕವೇದಿಕೆಯ ಜೀವನ ನಾಟಕ ಎಂಥವರನ್ನಾದರೂ ರಮಿಸುತ್ತದೆಂಬುಂತು ಸತ್ಯ."[3]

ಜೀವನಚರಿತ್ರೆಯ ಪ್ರಮುಖ ಅಂಶವೆಂದರೆ ಓದುಗನ ಆಧ್ಯಾತ್ಮಿಕ ಹಾಗೂ ಮಾನಸಿಕ ವಿಕಾಸ. ವ್ಯಕ್ತಿತ್ವದ ವಿಕಾಸಕ್ಕೆ ಅಲ್ಲಿ ಒತ್ತು ಹೆಚ್ಚಾಗಿರುತ್ತದೆ. ಕೆಲವೊಮ್ಮೆ ಚರಿತ್ರೆಯಲ್ಲಿ ಅನಾವಶ್ಯಕವೆಂದು ತೋರುವ ಉಲ್ಲೇಖಗಳು ಜೀವನಚರಿತ್ರೆಯಲ್ಲಿ ರಸವಾಹಿನಿಗಳಾಗಿ ಪರಿಣಮಿಸುತ್ತವೆ. ನಾಯಕನ ವ್ಯಕ್ತಿತ್ವಕ್ಕೆ ಮೆರಗುಕೊಡುತ್ತವೆ. ಹಾಸ್ಯಕ್ಕೆ, ಕಟಕಿಗೆ, ಶೃಂಗಾರಕ್ಕೆ ಎಲ್ಲ ರಸಗಳಿಗೂ ಇಲ್ಲಿ ಸ್ಥಾನವಿದ್ದು, ಕಾದಂಬರಿಯ ಪಾತ್ರರಚನೆ, ನಾಟಕದ ನಾಟಕಿಯತೆಕತೆಯ ನಿರೂಪಣಾ ಕೌಶಲ ಇವು ಜೀವನ ಚರಿತ್ರೆಗಳಲ್ಲಿ ಪ್ರಮುಖ ಲಕ್ಷಣಗಳು ಎನ್ನುವ ನಿಲುವು ದೇಜಗೌ ಅವರದ್ದು.

ಭಾರತೀಯ ಪರಂಪರೆಯಲ್ಲಿ ಕಲಾವಿದನ ವ್ಯಕ್ತಿತ್ವಕ್ಕಿಂತ ಅವನು ರಚಿಸಿದ ಕೃತಿಯೇ ಮುಖ್ಯವಾಗಿತ್ತು. ಕಲಾವಿದನ ವ್ಯಕ್ತಿತ್ವವನ್ನು ಪರಿಚಯಿಸುವ ಜೀವನ ಚರಿತ್ರೆಗಳಾಗಲೀ, ಆತ್ಮಕಥನಗಳಾಗಲೀ ಪ್ರಾಚೀನ ಭಾರತೀಯ ಸಂದರ್ಭಕ್ಕೆ ಸೇರಿರಲಿಲ್ಲ. 19ನೇ ಶತಮಾನದ ಮಧ್ಯಭಾಗದಲ್ಲಿ ಈಗಿರುವಂತೆ ಆತ್ಮಚರಿತ್ರೆಯ ಪಾಶ್ಚಾತ್ಯ ಮಾದರಿ ಪ್ರಚಲಿತವಾಗಿ ಒಪ್ಪಿತವಾಯಿತು. ಆ ಬಳಿಕ ಆತ್ಮಕಥನಗಳು ಸಾಕಷ್ಟು ಸಂಖ್ಯೆಯಲ್ಲಿ ಪ್ರಕಟಗೊಂಡಿವೆ. ಒಬ್ಬ ವ್ಯಕ್ತಿಯಜೀವನ ವಿವರಗಳನ್ನು ಮತ್ತೊಬ್ಬ ವ್ಯಕ್ತಿ ಬರೆದಾಗ ಜೀವನಚರಿತ್ರೆ ಎನಿಸಿಕೊಂಡರೆ ಒಬ್ಬ ವ್ಯಕ್ತಿಯು ತನ್ನ ಜೀವನ ವಿವರಗಳನ್ನು ತಾನೇ ಬರೆದುಕೊಂಡಾಗ ಆತ್ಮಚರಿತ್ರೆ ಎನಿಸಿಕೊಳ್ಳುತ್ತದೆ. ಜೀವನ ವಿವರಗಳ ಆಯ್ಕೆಯಲ್ಲಿ, ಜೋಡಿಸುವಿಕೆಯಲ್ಲಿ ನಿರೂಪಣೆಯಲ್ಲಿ ಹಾಗೂ ಮಂಡನೆಯಲ್ಲಿ ಜೀವನಚರಿತ್ರೆಗೂ ಆತ್ಮಚರಿತ್ರೆಗೂ ವ್ಯತ್ಯಾಸವಿದೆ. ಆತ್ಮಕಥೆಯನ್ನು ಆತ್ಮಚರಿತ್ರೆಯೆಂದೂ ಜೀವನಚರಿತ್ರೆಯನ್ನು ಜೀವನಕಥೆಯೆಂದೂ ಕರೆಯುವುದನ್ನು ಗಮನಿಸಬಹುದು. ಇಲ್ಲಿ 'ಕಥೆ' ಮತ್ತು 'ಚರಿತ್ರೆ'ಗಳು ಇಲ್ಲಿ ಅಂತರ್ ವಿನಿಮಯಗೊಳ್ಳುತ್ತವೆ. 'ಆತ್ಮ'ದ್ದು ಎನ್ನಲಾಗುವ 'ಕಥೆ'ಯಲ್ಲಿ ಲೋಕದ 'ಚರಿತ್ರೆ'ಯೂ ಇದೆ ಎನ್ನುತ್ತಾರೆ ರಹಮತ್ ತರಿಕೆರೆಯವರು.

"ಕನ್ನಡದ ಮಟ್ಟಿಗೆ ಒಂದು ಪ್ರಕಾರವಾಗಿ ಆತ್ಮಕಥೆ ಬೆಳೆದಿದ್ದು ಕೂಡ ಪಶ್ಚಿಮದ ಗಾಢ

ಸಹವಾಸದಿಂದಲೇ. ಆದರೆ ಆಧುನಿಕ ಸಾಹಿತ್ಯದ ವಿಶಿಷ್ಟ ಭಾಗವಾಗಿ ಬೆಳೆದುಬಂದಿರುವ ಆತ್ಮಕಥೆಗಳನ್ನು ನಮ್ಮ ಸಾಹಿತ್ಯ ಸಂಸ್ಕೃತಿಯು ತನ್ನ ವಿಚಿತ್ರ ಧೋರಣೆಯಿಂದ ಗಂಭೀರ ಚರ್ಚೆಗೆ ಒಳಪಡಿಸಲಿಲ್ಲ. ಅದು ಗೋಕಾಕರ 'ಭಾರತ ಸಿಂಧುರಶ್ಮಿ'ಯನ್ನು ಚರ್ಚಿಸುತ್ತದೆ. ಆದರೆ ನವರತ್ನ ರಾಮರಾಯರ 'ಕೆಲವು ನೆನಪುಗಳು' ಕೃತಿಯನ್ನಲ್ಲ. ಕಾರಂತರ 'ಮೂಕಜ್ಜಿಯ ಕನಸುಗಳು'ಗಳು ಕಾದಂಬರಿಯಾಗಿರುವ ಕಾರಣಕ್ಕೇ 'ಹುಚ್ಚುಮನಸ್ಸಿನ ಹತ್ತುಮುಖ'ಗಳಿಗಿಂತ ಹೆಚ್ಚು ಚರ್ಚಿತವಾಗಿದೆ. ಪ್ರಾಚೀನ ಸಾಹಿತ್ಯದಲ್ಲಿ ಇಲ್ಲದ ಒಂದು ಬಗೆಯ ಶ್ರೇಣೀಕರಣ ಪರಿಕಲ್ಪನೆ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಆತ್ಮಕಥೆ ಜೀವನಚರಿತ್ರೆಗಳ ವಿಷಯದಲ್ಲಿ ಇದ್ದಂತಿದೆ. ಇವನ್ನು 'ಸೃಜನಶೀಲ' ಸಾಹಿತ್ಯ ಪ್ರಕಾರಗಳು ಎಂದು ಒಪ್ಪಿಕೊಳ್ಳುವುದಕ್ಕೂ ಕೆಲವು ಸಾಹಿತ್ಯ ಚಿಂತಕರಿಗೆ ಮನಸ್ಸಿಲ್ಲ. ಸಾಹಿತ್ಯ–ಸಾಹಿತ್ಯೇತರ, ಕಾವ್ಯ–ಗದ್ಯ, ಸೃಜನ–ಸೃಜನೇತರ ವಿಭಾಗ ಕ್ರಮಗಳು ಪಂಥೀಯವಾಗಿ ಮತ್ತು ಅಸೂಕ್ಷ್ಮವಾಗಿ ಬಳಕೆಗೊಂಡದ್ದರ ಪರಿಣಾಮವಿದು."[4]

"ಆತ್ಮಕಥೆಗಳು ಸಾಮಾನ್ಯವಾಗಿ ಆಪ್ತವಾಗಿ ಓದಿಸಿಕೊಳ್ಳುತ್ತವೆ. ಇದಕ್ಕೆ ಕಾರಣಗಳು ಹಲವಿವೆ. ವ್ಯಕ್ತಿಗಳು ತಮ್ಮ ಜೀವನಾನುಭವವನ್ನು ನೇರವಾಗಿ ನಮ್ಮೊಡನೆ ಹಂಚಿಕೊಳ್ಳುವಂತಿರುವ ಕಥನಕ್ರಮವಿರಬಹುದು; ಇತರರ ಖಾಸಗಿ ಬದುಕಿನ ಬಗ್ಗೆ ಓದುಗರಿಗಿರುವ ಅದಮ್ಯ ಕುತೂಹಲವಿರಬಹುದು; ಅನ್ಯರ ಬಾಳಗನ್ನಡಿಯಲ್ಲಿ ನಮ್ಮನ್ನು ನೋಡಿಕೊಳ್ಳಲು ಮಾಡುವ ಇಣುಕಿರಬಹುದು; ಕಳೆದುಹೋದ ಜೀವನದ ಬಗ್ಗೆ ನಮಗಿರುವ ಹಳಹಳಿಕೆ ಹುಟ್ಟಿಸುತ್ತಿರುವ ಆಕರ್ಷಣೆ ಇರಬಹುದು; ವ್ಯಕ್ತಿಯ ಮೂಲಕ ಪ್ರಕಟವಾಗುವ ಸಾರ್ವಜನಿಕವು ಹೆಚ್ಚು ಮಾನುಷವಾಗಿರುತ್ತದೆ ಎನ್ನುವುದಿರಬಹುದು. ಕಡೆಗೂ ಪೂರ ಅರಿವಾಗದೆ ನಿಗೂಢವಾಗುಳಿವ ಬದುಕಿನ ಸತ್ಯಗಳಿರಬಹುದು."[5]

"ಲೇಖಕರು, ನಟರು, ತುಡುಕರು, ಸಂಗೀತಗಾರರು, ವೈದ್ಯರು, ಅಧಿಕಾರಿಗಳು, ರಾಜಕಾರಣಿಗಳು, ಶಿಕ್ಷಕರು, ವ್ಯಾಪಾರಿಗಳು, ಆಧ್ಯಾತ್ಮಿಕ ಹುಡುಕಾಟಗಾರರು, ಬೇಟೆಗಾರರು, ಪತ್ರಕರ್ತರು, ಶಿಕ್ಷಕರು, ರೈತರು, ಗೃಹಿಣಿಯರು, ತಂತ್ರಜ್ಞರು, ವೃದ್ಧರು, ದಲಿತರು, ರೋಗಿಗಳು, ಚಳುವಳಿಗಾರರು–ಎಷ್ಟೊಂದು ಜನರ ಅನುಭವ, ಭಾಷೆ, ಸಂವೇದನೆ, ಚಿಂತನೆಗಳು ಆತ್ಮಕಥೆಗಳಲ್ಲಿ ಸುರಿದು ಬಿದ್ದಿವೆ? ಭಾರತವನ್ನು ಅದರ 'ಸಾಮಾನ್ಯ' ಎನ್ನಲಾಗುವ ಜನತೆಯ ಮೂಲಕ ಮತ್ತು ಅವರ ಅನುಭವದ ಮೂಲಕ ನೋಡಬೇಕು ಎನ್ನುವುದಾದರೆ, ಆತ್ಮಕಥೆ ಮತ್ತು ಜೀವನಚರಿತ್ರೆಗಳ ಮೂಲಕ ಕೂಡ ನೋಡಬಹುದೇನೋ. ಯಾಕೆಂದರೆ ಭಾರತದ ಬಹುರೂಪಿ ಗುಣವನ್ನು ಇವು ಬಹಳ ಸಮರ್ಥವಾಗಿ ಪ್ರಕಟಿಸುತ್ತಿವೆ."[6]

"ಭಾರತೀಯ ಸಾಹಿತ್ಯದಲ್ಲಿ ಆತ್ಮಚರಿತ್ರೆ ಬಹು ಆಕರ್ಷಕವಾದ ವೈವಿಧ್ಯದಿಂದ ಕೂಡಿದೆ. ಗಾಂಧೀ (ಗುಜರಾತಿ), ನೆಹರು (ಇಂಗ್ಲಿಷ್)ಉಪೇಂದ್ರನಾಥ್ ಬಂದೋಪಾಧ್ಯಾಯ (ಬಂಗಾಳಿ) ರಾಜೇಂದ್ರ ಪ್ರಸಾದ(ಹಿಂದಿ) ಇ.ಎಂ.ಎಸ್. ನಂಬೂದಿರಿಪಾಡ್ (ಮಲೆಯಾಳಂ) ವಿ.ಡಿ.ಸಾವರ್ಕರ್(ಮರಾಠಿ) ಇವರು ಆತ್ಮಕಥೆ ಬರೆದಿರುವ ರಾಜಕೀಯ ನೇತಾರರು. ಭಾರತೀಯ ಮಹಿಳೆಯರು ಕೂಡಾ ಸಾಕಷ್ಟು ಸಂಖ್ಯೆಯಲ್ಲಿ ತಮ್ಮ ಆತ್ಮಕಥೆಯನ್ನು ಬರೆದಿದ್ದಾರೆ."[7]

ಆತ್ಮಕಥೆಗಳಲ್ಲಿನ ಕೆಲವು ಮಹತ್ವದ ಅಂಶಗಳನ್ನು ಈ ಕೆಳಗೆ ಸಂಕ್ಷಿಪ್ತವಾಗಿ ನೀಡಲಾಗಿದೆ. ಇಂದು ಸಾಮಾಜಿಕವಾಗಿ ಮಹತ್ವದೆಂದು ಭಾವಿಸಿ ಕೆಲವು ಸನ್ನಿವೇಶಗಳಿಗೆ ಈ ಹಿಂದೆ ಯಾವ ರೀತಿಯ ಪ್ರತಿಕ್ರಿಯೆಗಳಿದ್ದವು ಎಂಬುದನ್ನು ತಿಳಿಸುವುದು ಈ ಘಟನೆಗಳ ಪ್ರಮುಖ ಉದ್ದೇಶ. ಈ ಚಿಕ್ಕ ಉಲ್ಲೇಖವು ಆಯಾ ಆತ್ಮಕಥೆಗಳನ್ನು ಪೂರ್ಣವಾಗಿ ಓದಲು ಪ್ರೇರಣೆಯನ್ನು

ಓದಗಿಸುತ್ತದೆ ಎಂಬುದು ಆಶಯ.

ಆತ್ಮಹತ್ಯೆಯ ಪ್ರಯತ್ನದ ಉಲ್ಲೇಖ

ಗಾಂಧೀಜಿಯವರು ತಮ್ಮ ಆತ್ಮಕಥೆಯಲ್ಲಿ ಪ್ರೌಢಶಾಲಾ ಹಂತದಲ್ಲಿ ಅವರಿಗಿದ್ದ ಸ್ನೇಹಿತರ ವಿವರಗಳನ್ನು ದಾಖಲಿಸಿದ್ದಾರೆ. ಅವರ ಮೊದಲನೇ ಸ್ನೇಹಿತ ಎರಡನೇ ಸ್ನೇಹಿತನ ಆಗಮನದ ಕಾರಣವಾಗಿ ಗಾಂಧೀಜಿಯವರಿಂದ ದೂರವಾಗುತ್ತಾನೆ. ಎರಡನೇ ಸ್ನೇಹಿತನ ಸಾಂಗತ್ಯ ಒಳ್ಳೆಯದಲ್ಲ ಎಂದು ಗಾಂಧೀಜಿಗೆ ಅವರ ಹೆಂಡತಿ ಹೇಳಿದಾಗ ಅವರು ಅದನ್ನು ಗಂಭೀರವಾಗಿ ಪರಿಗಣಿಸುವುದಿಲ್ಲ. ತಾಯಿ ಮತ್ತು ಇತರ ಬಂಧುಗಳು ಅದೇ ಆಕ್ಷೇಪವನ್ನು ಎತ್ತಿದಾಗ ತನ್ನ ಸ್ನೇಹಿತನನ್ನು ಸುಧಾರಿಸುವ ಸಲುವಾಗಿಯೇ ತಾನು ಆತನೊಡನೆ ಇರುವುದಾಗಿ ಸಮಾಧಾನ ಹೇಳುತ್ತಾರೆ.

ಈ ಸ್ನೇಹಿತನ ಸಾಂಗತ್ಯದಲ್ಲಿ ಮಾಂಸಾಹಾರ ಸೇವನೆಯನ್ನು ಆರಂಭಿಸುತ್ತಾರೆ. ಆತನ ಪ್ರಭಾವದಿಂದ ವೇಶ್ಯೆಯೊಬ್ಬಳ ಸಂಪರ್ಕದ ಸಂದರ್ಭವೂ ಎದುರಾಗುತ್ತದೆ. ಕಡೆಗೊಮ್ಮೆ ಒಟ್ಟಿಗೆ ಆತ್ಮಹತ್ಯೆ ಮಾಡಿಕೊಳ್ಳುವ ಕುರಿತು ಚಿಂತಿಸಿ ಅದಕ್ಕಾಗಿ ಕಾಡಿಗೆ ಹೋಗಿ ದತ್ತೂರದ ಬೀಜವನ್ನು ಸಂಗ್ರಹಿಸುತ್ತಾರೆ. ಆದರೆ ಒಂದೆರಡು ಬೀಜಗಳನ್ನು ತಿಂದಾದ ಬಳಿಕ ಸಾಯುವುದು ಬೇಡ ಎನಿಸುತ್ತದೆ ಎಂದು ಅವರು ಬರೆದಿದ್ದಾರೆ.

ಹೀಗೆಯೇ ಆತ್ಮಹತ್ಯೆಯ ನಿರ್ಧಾರವನ್ನು ತ್ಯಜಿಸಿದ ಸಂದರ್ಭವನ್ನು ವಿಠಲ ಕಾಮತ್ ಇವರು ಇಡ್ಲಿ, ಆರ್ಕಿಡ್ ಮತ್ತು ಆತ್ಮಬಲ ಎಂಬ ತಮ್ಮ ಆತ್ಮಕಥೆಯಲ್ಲಿ ಹೇಳಿಕೊಂಡಿದ್ದಾರೆ. ಸಾಲದ ಹೊರೆ ಹೆಚ್ಚಾಗುತ್ತದೆ. ಸಾಲಗಾರರ ಒತ್ತಡವೂ ವಿಪರೀತವಾಗುತ್ತದೆ. ಇನ್ನು ಬದುಕುವುದು ಸಾಧ್ಯವಿಲ್ಲ ಎಂದು ನಿರ್ಧರಿಸಿ ಸ್ನೇಹಿತನ ಕಚೇರಿ 17ನೇ ಮಹಡಿಯ ಕೊಠಡಿಯಿಂದ ಕೆಳಗೆ ಹಾರಿ ಆತ್ಮಹತ್ಯೆ ಮಾಡಿಕೊಳ್ಳುವ ಉದ್ದೇಶದಿಂದ ಕಿಟಕಿಯ ಹತ್ತಿರ ಬಂದಾಗ ಎದುರಿನ ಕಟ್ಟಡದಲ್ಲಿ ಗೋಡೆಗೆ ತೂಗು ಹಾಕಿರುವ ಉಯ್ಯಾಲೆಯಲ್ಲಿ ಕುಳಿತು ಬಣ್ಣ ಬಳಿಯುತ್ತಿರುವ ಕಾರ್ಮಿಕನನ್ನು ಕಂಡು ಅಷ್ಟು ಬಡವನೊಬ್ಬ ತನಗೆ ದೊರಕುವ ಪುಡಿಗಾಸಿನ ಕೂಲಿಗಾಗಿ ಈ ಬಗೆಯ ಕಷ್ಟಕರ ಕೆಲಸವನ್ನು ಇಷ್ಟದಿಂದ ಮಾಡುವುದು ಸಾಧ್ಯವಾಗುವುದಾದರೆ ನಾನೇಕೆ ಹೆದರಿಕೊಳ್ಳಬೇಕು ಎಂದು ಪ್ರಶ್ನಿಸಿಕೊಂಡು ಆತ್ಮಹತ್ಯೆಯ ವಿಚಾರವನ್ನು ಬಿಟ್ಟು ಬಿಡುತ್ತಾರೆ.

ಬದುಕಿನಲ್ಲಿ ಎದುರಾಗುವ ಸಮಸ್ಯೆಗಳಿಗೆ ಆತ್ಮಕತ್ಯೆಯೇ ಪರಿಹಾರ ಎಂದು ಭಾವಿಸುತ್ತಿರುವವರ ಸಂಖ್ಯೆ ಹೆಚ್ಚಾಗುತ್ತಿರುವ ಈ ಕಾಲಘಟ್ಟವಿದು. ಕರ್ನಾಟಕ ಮಹಾರಾಷ್ಟ್ರಗಳಲ್ಲಿ ರೈತರು, ಕೇರಳ, ಕರ್ನಾಟಕದಲ್ಲಿ ಸುಶಿಕ್ಷಿತರು ಆತ್ಮಹತ್ಯೆಗೆ ಶರಣಾಗುತ್ತಿರುವ ಸಂಖ್ಯೆ ಹೆಚ್ಚಾಗುತ್ತಿರುವುದನ್ನು ಗಮನಿಸಿದೆ. ಆತ್ಮಕಥೆಗಳ ಓದು ಜನರಲ್ಲಿ ಆತ್ಮಸ್ಥೈರ್ಯವನ್ನು ತುಂಬಬಲ್ಲುದೇ ಎಂಬ ಜಿಜ್ಞಾಸೆ ಮೂಡಿಸುತ್ತದೆ. ಬಾಲ್ಯದಲ್ಲಿ ಒಳ್ಳೆಯ ಸ್ನೇಹಿತರನ್ನು ಮಾಡಿಕೊಳ್ಳಿ ಎಂದು ಬೋಧನೆ ಮಾಡುವುದಾಗಲೀ, ಆತ್ಮಹತ್ಯೆ ಎಲ್ಲ ಸಮಸ್ಯೆಗಳಿಗೆ ಪರಿಹಾರ ಅಲ್ಲ ಎಂಬ ಪರಿಹಾರವನ್ನು ಸೂಚಿಸುವುದು ಆತ್ಮಕಥೆಯ ಉದ್ದೇಶವಾಗುವುದಿಲ್ಲ. ಬದಲಾಗಿ ಜೀವನದಲ್ಲಿ ದೊಡ್ಡ ವ್ಯಕ್ತಿಗಳಾಗಿ ಮೂಡಿಬಂದವರು ಇಂತಹ ವಿಕ್ಷಿಪ್ತ ಸಂದರ್ಭಗಳನ್ನು ಎದುರಿಸಿದ ಬಗೆ, ಅವರ ಪ್ರತಿಕ್ರಿಯೆಗಳು ಹೊಸ ಸಾಧ್ಯತೆಯೊಂದರ ಅರಿವನ್ನು ಮೂಡಿಸುತ್ತದೆಂಬುದು ಸ್ಪಷ್ಟವಾಗುತ್ತದೆ.

ಇಂತಹದ್ದೇ ಹಲವಾರು ಸಂದರ್ಭಗಳು ಆತ್ಮಕಥೆಯಲ್ಲಿ ವೈವಿಧ್ಯಮಯವಾಗಿ

ತೆರೆದುಕೊಳ್ಳುತ್ತದೆ. ಕಲಾವಿದನೊಬ್ಬ ರೂಪುಗೊಳ್ಳುವ ಸಂದರ್ಭದಲ್ಲಿ ಬಾಲ್ಯದಲ್ಲಿ ಅವರನ್ನು ಪ್ರಭಾವಿಸಿದ ಅಂಶಗಳ ಕುರಿತಂತೆ ಮಾಡುವ ಉಲ್ಲೇಖಗಳು ಮಹತ್ವದ್ದು.

ಬೆಳೆಯುವ ಕುಡಿ ಮೊಳಕೆಯಲ್ಲಿ

ಸತ್ಯನ್ ಟಿ.ಎಸ್. ಇವರಕಾಲಕ್ಕೆ ಕನ್ನಡಿಯಲ್ಲಿ ಉಲ್ಲೇಖಿಗೊಂಡಿರುವ ಈ ಘಟನೆ ತುಂಬ ಆಸಕ್ತಿದಾಯಕ ಸಂಗತಿಯನ್ನು ತೆರೆದಿಡುತ್ತದೆ. ಶಾಲಾ ಗ್ರಂಥಾಲಯದಲ್ಲಿರುವ ಇಲ್ಲಸ್ಟ್ರೇಟೆಡ್ ವೀಕ್ಲೀ ಪತ್ರಿಕೆಯನ್ನು ಓದಬೇಕೆಂಬ ಆಸೆ ಸತ್ಯನ್ ಹಾಗೂ ಅವರ ಸಹಪಾಠಿ ಕೈಲಾಸಂನವರದ್ದು. ಪುಸ್ತಕವನ್ನು ಎರವಲು ನೀಡುವಂತೆ ಶಿಕ್ಷಕರಿಂದ ಶಿಪಾರಸ್ಸು ಪತ್ರ ಪಡೆದು ಕೊಳ್ಳುತ್ತಾರೆ. ಪುಸ್ತಕಗಳನ್ನು ನೀಡುವ ಗ್ರಂಥಪಾಲಕನೋ ಮೂರು ದಿನದೊಳಗಾಗಿ ಹಿಂದಿರುಗಿಸುವಂತೆ ಸೂಚಿಸುತ್ತಾನೆ. "ಆರು ಸಂಚಿಕೆಗಳ ಸಂಪೂರ್ಣ ಅವಲೋಕನ ಹುಡುಗಾಟವೇ! ತಕ್ಷಣ ಮತ್ತೊಂದು ಪ್ಲಾನ್ ಹೊಳೆಯಿತು. ನನಗೆ ಹೊಟ್ಟೆನೋವು. ಕೈಲಾಸಂಗೆ ಜ್ವರ. ನಮ್ಮ ಸಂಚನ್ನು ಅರ್ಥಮಾಡಿಕೊಂಡ ಮತ್ತೊಬ್ಬ ಸಹಪಾಠಿಗೆ ದಮ್ಮಯ್ಯಗುಡ್ಡೆ ಹಾಕಿ ಅವನೊಡನೆ ರಜಾಚೀಟಿ ಕಳುಹಿಸಿ ಕೊಟ್ಟೆವು.

ಮುಂದಿನ ಮೂರು ದಿನ 'ವೀಕ್ಲಿ' ನಮ್ಮ ಆರಾಧ್ಯ ದೈವವಾಯಿತು. ಹೊಸ ಗೊಂಬೆಗೆ ಮಾರುಹೋದ ಮಗುವಿನಂತೆ ಅಕ್ಷರಶಹ 'ವೀಕ್ಲಿ'ಯ ಪ್ರತಿ ಪುಟವನ್ನೂ ನಾವಿಬ್ಬರೂ ಓದಿ ಬಿಟ್ಟೆವು. ಬಾಲವಿಭಾಗದಲ್ಲಿದ್ದ ಕಥೆಗಳನ್ನೂ ಗಟ್ಟಿ ಮಾಡಿದೆವು. ಗಂಭೀರ ಲೇಖನಗಳನ್ನು ಶಕ್ತಿಮೀರಿ ಅರ್ಥಮಾಡಿಕೊಳ್ಳಲು ಪ್ರಯತ್ನ ಮಾಡಿದೆವು."[8] ಮುಂದೆ ಅಂತರಾಷ್ಟ್ರೀಯ ಮಟ್ಟದ ವರದಿಗಾರರಾಗಿ ಟಿ.ಎಸ್.ಸತ್ಯನ್ ಗುರುತಿಸಿಕೊಂಡದ್ದು ಅವರ ಬಾಲ್ಯದ ಈ ಬಗೆಯ ಆಸಕ್ತಿಯಿಂದಲೇ ಇರಬೇಕು.

ಬಾಲ್ಯದಲ್ಲಿ ಸಂಗೀತದ ಆಸಕ್ತಿ

ಗಂಗೂಬಾಯಿ ಹಾನಗಲ್ ಇವರು ಬಾಲ್ಯದ ದಿನಗಳನ್ನು ನೆನಪಿಸಿಕೊಳ್ಳುವುದು ಸಂಗೀತದ ಹಿನ್ನೆಲೆಯಲ್ಲಿಯೇ. ನಮ್ಮ ಶಾಲೆಯ ಪ್ರಾರ್ಥನೆ ಯಾವುದಾಗಿತ್ತು. ವಂದೇ ಮಾತರಂ ಗೀತೆಯ ಆ ಸಂದರ್ಭದ ರಾಗ ಯಾವುದಾಗಿತ್ತು. ಬೆಳಗಾವಿ ಅಧಿವೇಶನದಲ್ಲಿ ಗಾಂಧೀಜಿಯವರ ಸಮಕ್ಷಮ ತಾನು ಹಾಡಿದ ಗೀತೆ ಹೇಗೆ ಮೆಚ್ಚುಗೆಯನ್ನು ಪಡೆಯಿತು ಎಂಬ ಅಂಶಗಳು ಉಲ್ಲೇಖಿಗೊಂಡಿವೆ.

ಶಾಲೆಯ ಪರೀಕ್ಷೆಯಲ್ಲಿ ಅನುತ್ತೀರ್ಣನಾದ ವಿವರ ತಿಳಿದು ಇನ್ನಾದರೂ ಈ ಓದಿನಿಂದ ಮುಕ್ತಿ ಸಿಗುತ್ತದೆ ಎಂದು ಸಂಭ್ರಮಿಸುತ್ತಿದ್ದ ವೀಣಾವಾದಕ ದೊರೆಸ್ವಾಮಿ ಅಯ್ಯಂಗಾರ್ ಅವರ ಬಂಧುವೊಬ್ಬರು ಮುಂದಿನ ಬಾರಿ ಖಂಡಿತ ಪಾಸಾಗುತ್ತಾನೆ ನಾನು ಅವರಿಗೆ ಸಹಕರಿಸುತ್ತೇನೆ ಎಂದು ಅಯ್ಯಂಗಾರ್ ಇವರ ತಂದೆಯವರಿಗೆ ಭರವಸೆ ಮೂಡಿಸಿ ಪದವಿವರೆಗೆ ಓದಲು ಸಹಕರಿಸಿದ ಘಟನೆಯನ್ನು ಹೇಳುತ್ತಾರೆ.

ಶಿಕ್ಷಣ ಮಾಧ್ಯಮದ ಆಯ್ಕೆ ಪ್ರಭಾವಿಸುವ ಅಂಶಗಳು

ಹಳ್ಳಿಯ ಕನ್ನಡ ಮಾಧ್ಯಮ ಪ್ರಾಥಮಿಕ ಶಾಲೆಯಿಂದ ಮೈಸೂರಿನ ಪ್ರತಿಷ್ಠಿತ ಆಂಗ್ಲ ಮಾಧ್ಯಮ ಪ್ರೌಢಶಾಲೆಗೆ ನೇಮಿಚಂದ್ರ ಸೇರಿದಾಗ ಉಂಟಾದ ತಲ್ಲಣಗಳನ್ನು ಅವರು ಆತ್ಮಕಥನಾತ್ಮಕ ಲೇಖನದಲ್ಲಿ ಹೇಳಿಕೊಳ್ಳುತ್ತಾರೆ. ತಪ್ಪಾಗಿ ಉಕ್ತ ಲೇಖನವನ್ನು ಬರೆದುದ್ದಾಕ್ಕಾಗಿ

ಶಿಕ್ಷಕಿಯೊಬ್ಬರು ನೀಡಿದ ಶಿಕ್ಷೆಯಿಂದ ಅಪಮಾನಿತರಾಗಿ ಅದನ್ನು ಸವಾಲಾಗಿ ಸ್ವೀಕರಿಸಿದ್ದನ್ನು ಹೀಗೆ ಹೇಳಿಕೊಂಡಿದ್ದಾರೆ.

"ಮನೆಗೆ ಹಿಂದಿರುಗಿದ್ದೇ ಹಟ ಹಿಡಿದು ಓದತೊಡಗಿದೆ. ಅಲ್ಲಿಯವರೆಗೂ ಕನ್ನಡದ ಕತೆ ಪುಸ್ತಕಗಳನ್ನು ಮಾತ್ರ ಓದುತ್ತಿದ್ದವಳು ಅಪ್ಪ ಮನೆಯ ತುಂಬ ತುಂಬಿದ್ದ ನೂರಾರು ಪುಸ್ತಕಗಳಲ್ಲಿ ಕೈಯಾಡಿಸಿ ಶೇಕ್ಸ್‌ಪಿಯರ್, ಬರ್ನಾರ್ಡ್ ಶಾ, ಎಮಿಲಿ ಬ್ರಾಂಟೆ ಪುಸ್ತಕಗಳನ್ನು ಹೊರತೆಗೆದು, ಅರ್ಥವಾಗುವುದು ಕಷ್ಟವಾದರೂ ಓದತೊಡಗಿದೆ. ತರಗತಿಯಲ್ಲಿ ಮೊದಲ ಟೆಸ್ಟಿನ ಫಲಿತಾಂಶ ಹೊರಬಿತ್ತು. ನನಗಿನ್ನೂ ಇಂಗ್ಲಿಷಿನಲ್ಲಿ ಮಾತನಾಡಲು ಬಾರದಿದ್ದರೂ ಇಂಗ್ಲಿಷಿನಲ್ಲಿ ಒಳ್ಳೆಯ ಅಂಕಗಳು ಬಂದಿದ್ದವು. ಮೂರ್ನಾಲ್ಕು ವರ್ಷಗಳಲ್ಲಿ ಇಂಗ್ಲಿಷಿನಲ್ಲಿ ಸುಲಲಿತವಾಗಿ ಮಾತನಾಡುವುದು ಅಭ್ಯಾಸವಾಗಿತ್ತು. ಮುಂದೆ ತಾಂತ್ರಿಕರಂಗವನ್ನು ಆಯ್ದುಕೊಂಡರೂ ನಾನು ಬಾಲ್ಯದಲ್ಲಿ ಓದಿದ ಕನ್ನಡ ಮತ್ತು ಇಂಗ್ಲಿಷ್ ಸಾಹಿತ್ಯ ನನ್ನನ್ನು ಲೇಖಕಿಯನ್ನಾಗಿಸಿದವು!"[9]

ಈ ಸಾಲುಗಳು ಕನ್ನಡದಲ್ಲಿ ಪ್ರಾಥಮಿಕ ಶಿಕ್ಷಣ ಪಡೆದ ವಿದ್ಯಾರ್ಥಿನಿಯೊಬ್ಬಾಕೆ ಸ್ವಂತ ಪರಿಶ್ರಮದಿಂದ ಆಂಗ್ಲ ಭಾಷೆಯಲ್ಲಿ ಪ್ರೌಢಿಮೆಯನ್ನು ಸಾಧಿಸಲು ಸಾಧ್ಯವಾಗುವ ಬಗ್ಗೆ ಭರವಸೆಯ ಬೆಳಕನ್ನು ಚೆಲ್ಲುತ್ತದೆ. ಶಿಕ್ಷೆಯ ಪ್ರಭಾವ ಪ್ರತಿಬಾರಿಯೂ ಋಣಾತ್ಮಕವಾಗಿರಬೇಕಾಗಿಲ್ಲ, ಶಿಕ್ಷೆ ಪಡೆದ ಘಟನೆಯನ್ನು ಸವಾಲಾಗಿ ಸ್ವೀಕರಿಸಿ ಎಂತಹ ಎತ್ತರವನ್ನೂ ಏರಬಹುದುಎಂಬುದನ್ನು ಹೇಳುವ ಘಟನೆಯಿದು.

ಬಿ.ಆರ್. ಅಂಬೇಡ್ಕರ್ ಇವರು ತರಗತಿ ಕೋಣೆಯಲ್ಲಿ ಇತರ ವಿದ್ಯಾರ್ಥಿಗಳ ಜೊತೆಗೆ ಬೇಂಚಿನಲ್ಲಿ ಕುಳಿತುಕೊಳ್ಳುವುದು ಸಾಧ್ಯವಿರಲಿಲ್ಲ. ತಾವು ಕುಳಿತುಕೊಳ್ಳುವ ಗೋಣಿಯನ್ನು ಅಸ್ಪಶ್ಯತೆಯ ಕಾರಣದಿಂದಾಗಿ ಶಾಲೆಯಲ್ಲಿಯೇ ಬಿಟ್ಟು ಹೋಗುವಂತೆಯೂ ಇರಲಿಲ್ಲ. ಶಾಲೆಯ ಜವಾನೆ ನಲ್ಲಿ ತಿರುಗಿಸಿ ನೀಡಿದರಷ್ಟೇ ನೀರು ಕುಡಿಯುವ ಅವಕಾಶ, ಈ ಎಲ್ಲವನ್ನು ಸವಾಲಾಗಿ ಸ್ವೀಕರಿಸಿ ಶಿಕ್ಷಣವನ್ನು ಪಡೆದದ್ದು, ವಿದೇಶಕ್ಕೆ ಸಾಗಿ ಸಂಶೋಧನೆಯನ್ನು ಕೈಗೊಂಡಿದ್ದು, ಭಾರತದ ಸಂವಿಧಾನದ ಶಿಲ್ಪಿಯಾದದ್ದು ಎಂತಹವರನ್ನೂ ಬೆರಗುಗೊಳಿಸುವ ಸಂಗತಿಯಲ್ಲವೇ?

ಡಿವೋರ್ಸ ಒಂದು ಕಥೆ

ಆತ್ಮಕಥೆಯೆಂದರೆ ಬಾಲ್ಯದಿಂದ ಆರಂಭಗೊಂಡು ವೃದ್ಧಾಪ್ಯದವರೆಗಿನ ಎಲ್ಲ ವಿವರಗಳನ್ನು ಒಳಗೊಂಡಿರುವುದು ಒಂದು ಬಗೆಯದ್ದು. ಇದಕ್ಕೆ ಭಿನ್ನವಾಗಿ ಕೆಲವೊಂದು ಆತ್ಮಕಥೆಗಳು ಜೀವನದ ತುಂಬ ಮಹತ್ವದ ಘಟನೆಯೊಂದನ್ನು ಹೇಳಿ ಸುಮ್ಮನಾಗಿ ಬಿಡುತ್ತದೆ. ಪ್ರವಾಸ ಕಥನಗಳನ್ನು ಹೀಗೆ ಪರಿಗಣಿಸಬಹುದು. ಜಿ.ಪಿ. ರಾಜರತ್ನಂ ಇವರು ಹತ್ತುವರ್ಷ ಎಂಬ ಆತ್ಮಕಥೆಯನ್ನು ಬರೆದಿದ್ದಾರೆ. ತಾವು ಬರವಣಿಗೆಗೆ ತೊಡಗಿಕೊಂಡ ಮಹತ್ವದ ಹತ್ತು ವರ್ಷಗಳ ಬಗ್ಗೆ ಹೆಚ್ಚಾಗಿ ಹೇಳಿಕೊಳ್ಳುವ ಅವರು ಇದನ್ನು ಮಹಾಹರಟೆ ಎಂದು ಕರೆದುಕೊಂಡಿದ್ದಾರೆ. ಆದರೆ ಹಿನ್ನೆಲೆಯಲ್ಲಿ ತಮ್ಮ ಬಾಲ್ಯ, ಶಿಕ್ಷಣ ವಿವಾಹ ಮುಂತಾದ ವಿವರಗಳನ್ನು ಹೇಳಿಕೊಂಡಿದ್ದಾರೆ. ಶಿವರಾಮ ಕಾರಂತರು ಹತ್ತು ವರ್ಷ ಏನು ಮಹತ್ವದ್ದು ಕನಿಷ್ಠ ಒಂದು ನಿಕ್ಕೆಲ್ ಜುಬುಲಿಯೂ ಆಗುವುದಿಲ್ಲವಲ್ಲ ಎಂದು ತಮಾಷೆ ಮಾಡುತ್ತಿದ್ದರಂತೆ. (ಸಿಲ್ವರ್ ಜ್ಯುಬಲಿ–25 ವರ್ಷ, ಗೋಲ್ಡನ್‌ಜುಬಲಿ–50 ವರ್ಷ ಎಂಬ ಸಡಗರಗಳಿವೆಯಲ್ಲ!). ಜೀವನ ಚರಿತ್ರೆಯನ್ನು ಬರೆಯಲು ಮಿತ್ರರೊಬ್ಬರು ಉತ್ಸಾಹದಿಂದ ಶಿವರಾಮ ಕಾರಂತರನ್ನು

ಸಂಪರ್ಕಿಸಿದಾಗ ಅವರು ನನ್ನ "ನೀವು ನನ್ನನ್ನು ಕೊಲ್ಲಬೇಕಿಲ್ಲ, ನನ್ನ ಆತ್ಮಹತ್ಯೆಯನ್ನು ನಾನೇ ಮಾಡಿಕೊಳ್ಳುತ್ತೇನೆ"[10] ಎಂದರಂತೆ.

ಕಾಲೇಜಿನ ಪ್ರಾಚಾರ್ಯರೊಬ್ಬರು ತಾವು ಶಿಕ್ಷಕರಾಗಿ ಬಂದ ಬಳಿಕದ ಘಟನೆಗಳನ್ನು ಮಾತ್ರಆತ್ಮಕಥೆಯಾಗಿ ಪ್ರಕಟಿಸಿದ್ದಾರೆ. ಎಲ್ಲಕ್ಕಿಂತ ವಿಶೇಷವೆನ್ನಿಸುವುದು ಶಾಂತಾರಾಮ ಸೋಮಯಾಜಿ ಎನ್ನುವವರು ಮುಳ್ಳುಬೇಲಿ ದಾಟಿ ಬದುಕಿ ಬಂದೆ (ಒಂದು ಡಿವೋರ್ಸನ ಕತೆ) ಬರೆದಿರುವುದು. ವಿದೇಶದಲ್ಲಿದ್ದ ಅವರ ಪ್ರೀತಿಯ ಪತ್ನಿತೀರಿ ಹೋದ ಬಳಿಕ ಕೆಲವು ಷರತ್ತುಗಳನ್ನಿಟ್ಟು ಎರಡನೇ ಮದುವೆಯಾಗುವ ಅವರು ಆ ಪತ್ನಿಯ ಕೆಲವು ನಡೆಗಳಿಂದ ನೊಂದು ಅವರಿಂದ ಡಿವೋರ್ಸ ಪಡೆಯಲು ನಡೆಸುವ ಹರಸಾಹಸವನ್ನು ಬರೆದಿದ್ದಾರೆ.

ಪತ್ರಕರ್ತರು, ನಾಟಕ ಸಿನೆಮಾ ಯಕ್ಷಗಾನ ಕಲಾವಿದರು, ರಾಜಕಾರಣಿಗಳು ಅಷ್ಟೇ ಏಕೆ ಅಂಚೆಯಣ್ಣ ಕೂಡಾ ಆತ್ಮಕಥೆಯನ್ನು ಬರೆದಿರುವುದನ್ನು ನೋಡಿದಾಗ ಈ ಪ್ರಕಾರವು ಎಷ್ಟೊಂದು ಜನಪ್ರಿಯವಾಗಿದೆ ಎಂಬುದು ತಿಳಿಯುತ್ತದೆ. ಇದರ ಇತರ ಪ್ರಯೋಜನಗಳು ಕೂಡಾ ಮತ್ತಷ್ಟು ಸಂಶೋಧನೆಗೆ ಅವಕಾಶಗಳನ್ನು ಕಲ್ಪಿಸಿ ನೀಡಿರುವ ವಿಷಯಗಳಿದೆ.

ಪಠ್ಯದ ಭಾಗವಾಗಿ ಆತ್ಮಕಥೆಯ ಬರವಣಿಗೆ

ಬ್ರಿಟನ್‌ನಲ್ಲಿ ಶಿಕ್ಷಕರ ಶಿಕ್ಷಣದ ಕಾಲೇಜಿನಲ್ಲಿ ಈ ಆತ್ಮಕಥೆಗಳ ಬರವಣಿಗೆಯನ್ನು ಎಲ್ಲ ಪ್ರಶಿಕ್ಷಣಾರ್ಥಿಗಳಿಗೆ ಕಡ್ಡಾಯವಾಗಿಸಿದ್ದನ್ನು ದಾಖಲಿಸಿರುವ ಪುಸ್ತಕವೊಂದಿದೆ. ಪೀಟರ್ ಆಬ್ಸ್ ಎಂಬ ಶಿಕ್ಷಕರ ಶಿಕ್ಷಣದ ಪ್ರಾಧ್ಯಾಪಕರು Autobiography in Education ಎಂಬ ಪುಸ್ತಕವನ್ನು ಆಂಗ್ಲ ಭಾಷೆಯಲ್ಲಿ 1974ರಲ್ಲಿ ಪ್ರಕಟಿಸಿದ್ದಾರೆ. ಯಾವ ಅಂಶಗಳು ವಿದ್ಯಾರ್ಥಿಗಳನ್ನು ಶಿಕ್ಷಕ ವೃತ್ತಿ ಆಯ್ಕೆ ಮಾಡುವಲ್ಲಿ ಪ್ರಭಾವಿಸಿದವು ಎಂಬುದನ್ನು ತಿಳಿಯುವ ಸಲುವಾಗಿ ತನ್ನೆಲ್ಲ ಪ್ರಶಿಕ್ಷಣಾರ್ಥಿಗಳಿಗೆ ಆತ್ಮಕಥೆಯನ್ನು ಬರೆಯುವಂತೆ ತಿಳಿಸಿದ್ದು ಮಾತ್ರವಲ್ಲ ಅದನ್ನು ಒಟ್ಟು ಮಾಡಿ ಪುಸ್ತಕವನ್ನು ಕೂಡಾ ಪ್ರಕಟಿಸಿದ್ದಾರೆ.

ಒಟ್ಟು 9 ಮಂದಿ ಸಾಹಿತಿಗಳ ಪ್ರಕಟಿತ ಆತ್ಮಕಥನಗಳೇ ಅಲ್ಲದೇ ಶಿಕ್ಷಕರ ಶಿಕ್ಷಣಕ್ಕೆ ದಾಖಲಾದ ವಿದ್ಯಾರ್ಥಿಗಳು ಬರೆದಿರುವ ಆತ್ಮಕಥೆಗಳು, ಲೇಖಕರ ಆತ್ಮಕಥೆಯ ಭಾಗಗಳು ಹಾಗೂ 10 ಆತ್ಮಕಥನಾತ್ಮಕ ಕವನಗಳ ಭಾಗಗಳನ್ನು ಪ್ರಕಟಿಸಿದ್ದಾರೆ. ಆತ್ಮಕಥೆಗಳಿಗೆ ತತ್ವಶಾಸ್ತ್ರೀಯವಾದ ಹಾಗೂ ಶೈಕ್ಷಣಿಕ ನೆಲೆಯನ್ನು ಒದಗಿಸುವ ಪ್ರಯತ್ನ ಇದು ಎಂದು ಲೇಖಕರು ಹೇಳಿಕೊಂಡಿದ್ದಾರೆ. ಆತ್ಮಕಥೆಗಳ ಸ್ವರೂಪ, ಉಗಮ ಇವುಗಳ ಕುರಿತು ಚರ್ಚೆಯನ್ನು ನಡೆಸಿದ್ದಾರೆ. ಆತ್ಮಕಥೆಯನ್ನು ಬರೆಯ ಹೊರಟ ವಿದ್ಯಾರ್ಥಿಗೆ ಆತನ ಶಿಕ್ಷಕರು ಬರವಣಿಗೆ ಕುರಿತಂತೆ ಯಾವುದೇ ಸಲಹೆಯನ್ನು ನೀಡುವುದು ಉಚಿತವಲ್ಲ, ಹಾಗೆ ಶಿಕ್ಷಕರಿಂದ ಸಲಹೆಗಳನ್ನು ಪಡೆದ ಮಾತ್ರಕ್ಕೆ ವಿದ್ಯಾರ್ಥಿ ಅದನ್ನು ಪಾಲಿಸಲೇ ಬೇಕೆಂಬುದು ಕಡ್ಡಾಯವೂ ಅಲ್ಲ ಎಂದು ತಿಳಿಸುತ್ತಾರೆ. ಭವಿಷ್ಯದಲ್ಲಿ ಶಿಕ್ಷಕರಾಗಲು ಬಯಸುವ ಪ್ರಶಿಕ್ಷಣಾರ್ಥಿಗಳು ತಾವು ಶಿಕ್ಷಕರಾಗಬೇಕೆಂದು ನಿರ್ಧರಿಸಲು ಕಾರಣಗಳು ಯಾವುವು? ಅದನ್ನು ಜೀವನ ಪರ್ಯಂತ ಮರೆಯದೇ ಪಾಲಿಸಲು ಆತ್ಮಕಥೆಯ ಮೂಲಕ ಬರೆದಿಡುವ ಕ್ರಮವನ್ನು ಭಾರತೀಯ ಶಿಕ್ಷಕರ ಶಿಕ್ಷಣ ಪದ್ಧತಿಯಲ್ಲಿಯೂ ಅಳವಡಿಸಿಕೊಳ್ಳುವುದು ಶೇಯಸ್ಕರವಾದದ್ದು.

ಪುಸ್ತಕ ಪ್ರೀತಿ ಬೆಳೆಸುವ ಪ್ರಯತ್ನಗಳು ನಿರಂತರ

ಲೇಖಕರು ಪ್ರೌಢಶಾಲೆಯೊಂದರ ಮುಖ್ಯಶಿಕ್ಷಕರಾಗಿದ್ದಾಗ ವಿದ್ಯಾರ್ಥಿಗಳಲ್ಲಿ ಪುಸ್ತಕ

ಪ್ರೀತಿಯನ್ನು ಬೆಳೆಸಲು ಹಲವಾರು ಪ್ರಯತ್ನಗಳನ್ನು ನಡೆಸಿದ್ದರು. ಪುಸ್ತಕ ಮೇಳ ನಡೆಸಿದ್ದು, ತರಗತಿಗೊಂದು ಗ್ರಂಥಾಲಯ ತೆರೆದದ್ದು, ಹತ್ತು ಸಾವಿರ ಪುಸ್ತಕ ಓದಿ ಆಂದೋಲನ ನಡೆಸಿದ್ದು, ಹೆಚ್ಚು ಪುಸ್ತಕಗಳನ್ನು ಓದಿದ ತರಗತಿಯ ವಿದ್ಯಾರ್ಥಿಗಳಿಗೆ ಗೌರವ ಧ್ವಜವನ್ನು ನೀಡಿದ್ದು, ಪುಸ್ತಕ ಓದಿ, ಬಹುಮಾನಗೆಲ್ಲಿ ಎಂಬ ಸ್ಪರ್ಧೆಯನ್ನು ನಡೆಸಿದ್ದು, ಓದಿದ ಪುಸ್ತಕಗಳ ಕುರಿತು ವಿದ್ಯಾರ್ಥಿಗಳು ಬರೆದ ಲೇಖನಗಳನ್ನು ಪುಸ್ತಕರೂಪದಲ್ಲಿ ಪ್ರಕಟಿಸಿದ್ದಾರೆ.

ಧರ್ಮಸ್ಥಳದ ಶಾಂತಿವನ ಟ್ರಸ್ಟ್ ಪ್ರತಿವರ್ಷವೂ ಪ್ರಾಥಮಿಕ ವಿಭಾಗಕ್ಕೆ ಒಂದು, ಪ್ರೌಢಶಾಲಾ ವಿಭಾಗಕ್ಕೆ ಒಂದು ಮೌಲ್ಯಾಧಾರಿತ ಪುಸ್ತಕವನ್ನು ಪ್ರಕಟಿಸುತ್ತದೆ. ಆ ಪುಸ್ತಕವನ್ನು ಓದಿದ ವಿದ್ಯಾರ್ಥಿಗಳಿಗೆ ಭಾಷಣ, ಪ್ರಬಂಧ, ಚಿತ್ರಕಲೆ ಹಾಗೂ ಶ್ಲೋಕ ಕಂಠಪಾಠ ಸ್ಪರ್ಧೆಗಳನ್ನು ಶಾಲಾ ಹಂತ ತಾಲೂಕು ಹಂತ ಹಾಗೂ ಜಿಲ್ಲಾ ಹಂತದಲ್ಲಿ ಏರ್ಪಡಿಸಿ ಬಹುಮಾನಗಳನ್ನು ನೀಡುತ್ತಾ ಬಂದಿದೆ

ಭಾರತ ಸಂಸ್ಕೃತಿ ಪ್ರತಿಷ್ಠಾನ, ಬೆಂಗಳೂರು ಇವರು ಎಳೆಯರ ರಾಮಾಯಣ, ಕಿಶೋರ ಭಾರತ ಎಂಬ ಎರಡು ಪುಸ್ತಕಗಳು ಪ್ರಕಟಿಸಿದ್ದಾರೆ. ಇದನ್ನು ಕೊಂಡು ಓದಿದ ವಿದ್ಯಾರ್ಥಿಗಳಿಗೆ ಪ್ರತಿವರ್ಷವೂ ಪರೀಕ್ಷೆಯನ್ನು ನಡೆಸಿ ಪ್ರಮಾಣ ಪತ್ರವನ್ನು ವಿತರಿಸಲಾಗುತ್ತಿದೆ.

ಭಾರತೀಯ ವಿಕಾಸ ಟ್ರಸ್ಟ್, ಮಣಿಪಾಲ ಇವರು ಬೊಳುವಾರು ಮಹಮದ್ ಕುಞ್ಞಿ ಇವರು ಬರೆದಿರುವ ಪಾಪು ಗಾಂಧಿ ಬಾಪು ಗಾಂಧಿ ಆದ ಕತೆ ಪುಸ್ತಕದ ಕುರಿತು ಎಂಟನೇ ತರಗತಿ ವಿದ್ಯಾರ್ಥಿಗಳಿಗೆ ಪ್ರತಿ ವರ್ಷ ಪ್ರಬಂದ ಸ್ಪರ್ಧೆಯನ್ನು ಏರ್ಪಡಿಸಿ ಬಹುಮಾನವನ್ನು ನೀಡುತ್ತಾ ಬಂದಿದ್ದಾರೆ ಹೀಗೆ ವಿದ್ಯಾರ್ಥಿಗಳಿಗೆ ಪುಸ್ತಕ ಪ್ರೀತಿಯನ್ನು ಬೆಳೆಸುವ ಹಲವಾರು ಯೋಜನೆಗಳಿವೆ. ವಿದ್ಯಾರ್ಥಿಗಳಲ್ಲಿ ಸಾಹಿತ್ಯಾಸಕ್ತಿಯನ್ನು ಉಂಟು ಮಾಡುವುದು ಆದ್ಯತೆಯಾಗಬೇಕಾಗಿದೆ. ತಮ್ಮ ಬಾಳನ್ನು ಪ್ರೀತಿಸಲು ಸ್ಫೂರ್ತಿಯನ್ನು ಪಡೆಯಲು ವಿದ್ಯಾರ್ಥಿಗಳಿಗೆ ಜೀವನಚರಿತ್ರೆ ಹಾಗೂ ಆತ್ಮಕಥೆಗಳನ್ನು ಓದುವಂತೆ ಪ್ರೇರಣೆಯನ್ನು ಒದಗಿಸುವ ಯೋಜನೆಗಳು ಕಾಲೇಜು ಹಂತದಲ್ಲಿ ಅಗತ್ಯವಿದೆ. ಒಮ್ಮೆ ಪುಸ್ತಕ ಪ್ರೀತಿಯನ್ನು ಬೆಳೆಸಿಕೊಂಡ ವಿದ್ಯಾರ್ಥಿ ಮುಂದೆ ಸದಾ ಉತ್ತಮ ಪುಸ್ತಕಗಳಿಗಾಗಿ ಹಾತೊರೆಯುತ್ತಾನೆ. ಕಲಿಯುವ ಸಮಾಜವನ್ನು ನಿರ್ಮಿಸುವುದು ಈ ಬಗೆಯಲ್ಲಿ ಪುಸ್ತಕ ಪ್ರೀತಿಯನ್ನು ಹುಟ್ಟುಹಾಕುವ ಮೂಲಕ ಸಾಧ್ಯವಾಗುತ್ತದೆ. ಅಷ್ಟೇ ಏಕೆ. ಪ್ರಜಾಪ್ರಭುತ್ವವು ದೇಶದಲ್ಲಿ ಗಟ್ಟಿಯಾಗಿ ನೆಲೆಯೂರುವಲ್ಲಿ, ಉತ್ತಮ ಸಂಸ್ಕೃತಿಯುಳ್ಳ ಸಮಾಜ ನಿರ್ಮಾಣದಲ್ಲಿ ಕೂಡಾ ಈ ಪುಸ್ತಕ ಪ್ರೀತಿಯ ಪಾತ್ರ ದೊಡ್ಡದಾಗಿದೆ.

ಕೊನೆ ಟಿಪ್ಪಣಿ

1. ನಮ್ಯತಾ ಜಿ.ಆರ್. Perceived Impact of books on Student Reading Habit,
2. ವನಮಾಲಾ ವಿಶ್ವನಾಥ್, ಭಾರತೀಯ ಸಾಹಿತ್ಯ ಸಮೀಕ್ಷೆ, ಪುಟ 983
3. ದೇಜಗೌ, ಜೀವನ ಚರಿತ್ರೆಯನ್ನು ಕುರಿತು, ಶತಮಾನದ ಸಂಶೋಧನೆ, ಪುಟ 989
4. ರಹಮತ್ ತರೀಕೆರೆ, ಆತ್ಮಕಥೆ: ಕನ್ನಡ ಗದ್ಯದ ಅಧೋಲೋಕ, ಪುಟ 2
5. ಅದೇ, ಪುಟ 4
6. ಅದೇ, ಪುಟ 6
7. ಸಾಹಿತ್ಯ ಸಮೀಕ್ಷೆ,
8. ಸತ್ಯನ್ ಕಾಲಕ್ಕೆ ಕನ್ನಡಿ, ಪುಟ 32

9. ನೇಮಿಚಂದ್ರ, ಬದುಕು ಬದಲಿಸಬಹುದು, ಪುಟ 40
10. ಶಿವರಾಮ ಕಾರಂತ, ಹುಚ್ಚು ಮನಸ್ಸಿನ ಹತ್ತು ಮುಖಗಳು, ಮುನ್ನುಡಿಯಲ್ಲಿ

ಗ್ರಂಥಋಣ

1. ಅಯ್ಯಂಗಾರ್ ಮೈಸೂರು ವಿ. ದೊರೆಸ್ವಾಮಿ, ವೀಣೆಯ ನೆರಳಿನಲ್ಲಿ, ನಿರೂ: ಭಾರತೀ ಕಾಸರಗೋಡು, ಗೀತಾ ಬುಕ್ ಹೌಸ್, ಮೈಸೂರು, 1997
2. ಅಶೋಕ ಕಾಮತ್ (ಸಂ). ವಿದ್ಯಾರ್ಥಿಗಳಲ್ಲಿ ಪುಸ್ತಕ ಪ್ರೀತಿ, ಸರಕಾರಿ ಪ್ರೌಢಶಾಲೆ, ವಳಕಾಡು ಉಡುಪಿ, 2009
3. ಗಾಂಧಿ ಮೋ.ಕ., ನನ್ನ ಆತ್ಮಕಥೆ ಅಥವಾ ನನ್ನ ಸತ್ಯಾನ್ವೇಷಣೆ, ಅನು: ಗೊರೂರು ರಾಮಸ್ವಾಮಿ ಅಯ್ಯಂಗಾರ್, ಗಾಂಧೀ ಸ್ಮಾರಕ ನಿಧಿ, ಬೆಂಗಳೂರು, 1962
4. ಜವರೇಗೌಡ ದೇ., ಶತಮಾನದ ಸಂಶೋಧನೆ, ಜೀವನಚರಿತ್ರೆಗಳನ್ನು ಕುರಿತು, ಕನ್ನಡ ಸ
5. ನೇಮಿಚಂದ್ರ, ಬದುಕು ಬದಲಿಸಬಹುದು, ನವಕರ್ನಾಟಕ, ಬೆಂಗಳೂರು 2013
6. ರಹಮತ್ ತರೀಕೆರೆ, ಆತ್ಮಕಥೆ: ಕನ್ನಡ ಗದ್ಯದ ಅಧೋಲೋಕ (ಲೇಖನ)
7. ರಾಜರತ್ನಂ ಜಿ.ಪಿ., ಹತ್ತುವರ್ಷ, ವಿದೇಹ ಪ್ರಕಾಶನ ಬೆಂಗಳೂರು, 1972
8. ಶಾಂತಾರಾಮ ಸೋಮಯಾಜಿ, ಮುಳ್ಳುಬೇಲಿ ದಾಟಿ ಬದುಕಿ ಬಂದೆ (ಒಂದು ಡಿವೋರ್ಸ್‌ನ ಕತೆ), ಸಾಹಿತ್ಯ ನಂದನ, ಬೆಂಗಳೂರು, 2012
9. ಶಿವರಾಮ ಕಾರಂತ, ಹುಚ್ಚು ಮನಸ್ಸಿನ ಹತ್ತು ಮುಖಗಳು, ರಾಜಲಕ್ಷ್ಮಿ ಪ್ರಕಾಶನ ಬೆಂಗಳೂರು, 1948
10. ಶೇಷಗಿರಿರಾವ್ ಎಲ್.ಎಸ್. (ಸಂ) ಭಾರತ ಸಾಹಿತ್ಯ ಸಮೀಕ್ಷೆ, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು 1990
11. ಸತ್ಯನ್ ಟಿ.ಎಸ್., ಕಾಲಕ್ಕೆ ಕನ್ನಡಿ, ಪ್ರಿಸಂ ಬುಕ್ಸ್ ಬೆಂಗಳೂರು, 2003
12. ವಿಠಲ ಕಾಮತ್, ಇಡ್ಲಿ ಆರ್ಕಿಡ್ ಮತ್ತು ಆತ್ಮಬಲ ಸಾಹಿತ್ಯ ಪ್ರಕಾಶನ ಹುಬ್ಬಳ್ಳಿ, 2012
13. ಹಾನಗಲ್ ಗಂಗೂಬಾಯಿ, ನನ್ನ ಬದುಕಿನ ಹಾಡು, ನಿರೂ: ಎನ್ಕೆ, ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ, 2002
14. Abbs Peter, Autobiography in Education, Heinemann Educational Books, London, 1974
15. Namrratha G.R. Perceived Impact of books on Student Reading Habit, Journal of Advancements in Library Sciences (www.stmjournals.com), 2017

✠✠✠

ಕನ್ನಡ ಗಜಲ್‌ಗಳ ನಿರೀಕ್ಷೆಗಳು ಮತ್ತು ಸವಾಲುಗಳು

ಹಳೆಮನೆ ರಾಜಶೇಖರ
ಸಹಾಯಕ ಪ್ರಾಧ್ಯಾಪಕರು
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು(ಸ್ವಾಯತ್ತ), ಉಜಿರೆ–574240

ಶಾಸ್ತ್ರೀಯ ಶಿಸ್ತಿನಿಂದ ಕೂಡಿದ ಉರ್ದು ಸಾಹಿತ್ಯದ ಉತ್ತುಂಗವಾದ 'ಗಜಲ್' ಸಾಹಿತ್ಯ ಪ್ರಕಾರ ಕನ್ನಡದಲ್ಲಿ ಶ್ರೀ ಶಾಂತರಸರಿಂದ ಹೊಸಹುಟ್ಟು ಪಡೆಯಿತು. ಉರ್ದು ಸಾಹಿತ್ಯವನ್ನು ಅಧ್ಯಯನ ಮಾಡಿದ್ದ ಶಾಂತರಸರು ಗಜಲ್‌ನ ಶಾಸ್ತ್ರೀಯ ಲಯವನ್ನು ಕನ್ನಡಕ್ಕೆ ಪರಿಚಯಿಸಿದರು. ಅವರ ಪರಂಪರೆಯನ್ನು ಮುಂದುವರಿಸಲು ಚಿದಾನಂದ ಸಾಲಿಯ ಜೊತೆಗೆ ಅನೇಕ ಯುವಕರು ಗಜಲ್ ರಚನೆಯಲ್ಲಿ ತೊಡಗಿಕೊಂಡಿದ್ದಾರೆ. ಇವರ ಗಜಲ್‌ಗಳನ್ನು ಗಮನಿಸಿದರೆ ಅದರ ಶಾಸ್ತ್ರೀಯ ನೆಲೆಗಳನ್ನು ಸರಿಯಾಗಿ ಅರ್ಥ ಮಾಡಿಕೊಂಡು ರಚಿಸುವ ಸಮಸ್ಯೆ ಕಾಣುತ್ತದೆ.

ಗಜಲ್ ಒಂದು ಕಾವ್ಯ ಪ್ರಕಾರವಾಗಿದ್ದರೂ ಅದರ ಸ್ವರೂಪ ಕನ್ನಡ ಕಾವ್ಯಕ್ಕಿಂತ ಭಿನ್ನವಾಗಿದೆ. ಅದು ಕನ್ನಡದ ವಚನ, ಕೀರ್ತನೆ, ಸ್ವರವಚನ, ತತ್ವಪದ ಮಾದರಿಯನ್ನು ತಾತ್ವಿಕ ನೆಲೆಯಲ್ಲಿ ಹೊಂದುತ್ತದೆ. ಶಾಸ್ತ್ರೀಯ ಅಂಶಗಳಲ್ಲಿ ಅಲ್ಲ. ಗಜಲ್‌ನ ಬಿಗಿಯಾದ ಛಂದೋಗುಣಗಳು ಈ ಸಾಹಿತ್ಯ ಪ್ರಕಾರಗಳಿಗಿಲ್ಲ. ಇವು ನಾಡಿನಲ್ಲಿ ಭಾಷಿಕವಾಗಿ, ಸಾಂಸ್ಕೃತಿಯಾಗಿ ಅರಿವಿನ ಆಂದೋಲನವನ್ನುಂಟು ಮಾಡಿದವು. ಪ್ರಭುತ್ವದ ಹಿಂಸಾತ್ಮಕ ನೆಲೆಗಳನ್ನು ನಿರಾಕರಿಸುತ್ತಾ ಪ್ರತಿರೋಧವನ್ನು ವೈಚಾರಿಕವಾಗಿ ಒಡ್ಡಿದವು. ಸಮುದಾಯದ ಜನಜೀವನದ ತಲ್ಲಣಗಳೊಂದಿಗೆ ಅನುಸಂಧಾನಗೊಳ್ಳುತ್ತಾ ಪರ್ಯಾಯ ಬದುಕಿನ ಕ್ರಮಗಳನ್ನು ಹುಡಿಕಿದವು. ಅನುಭಾವ, ಆಧ್ಯಾತ್ಮ, ಧರ್ಮವನ್ನು ಸಾಮಾಜಿಕಗೊಳಿಸಿದವು. ಇವು ತುಂಬಾ ಶಾಸ್ತ್ರೀಯ ನಿಲುವುಗಳಿಗಿಂಲೂ ತತ್ವಕ್ಕೆ ಮಹತ್ವ ನೀಡಿದವು. ಬದುಕಿನ ಮೋಹವನ್ನು ಮೀರಿದ ಅಸ್ತಿತ್ವದೊಂದಿಗೆ ಒಂದಾಗುವ ಬಗೆಯನ್ನು ಶೋಧಿಸಿದವು.

ಗಜಲ್‌ಗಳ ಒಳದೃಷ್ಟಿಯು ಕೂಡ ಈ ಚಿಂತನೆಯ ನೆಲೆಯನ್ನು ಹೊಂದಿದೆ. ಹೀಗಾಗಿ ಗಜಲ್‌ಗಳು ಗಾಢವಾದ ಚಿಂತನೆಯನ್ನು ಬಯಸುತ್ತವೆ. ಬದುಕಿನ ಸಂಕೀರ್ಣತೆಯ ಅಂತರಂಗನ್ನು ಸಾಂಸ್ಕೃತಿಕವಾಗಿ ಶೋಧಿಸುತ್ತವೆ. ಅವು ಮೇಲ್ನೋಟಕ್ಕೆ ಪ್ರೇಮ, ವಿರಹ, ದುಃಖವನ್ನು ಹೇಳುತ್ತವೆ ಅನಿಸಿದರು ಅವುಗಳ ಉಸಿರು ಬದುಕಿನ ಬಿತ್ತಿಯ ಸಂಕಟ ಮತ್ತು ಸಂಘರ್ಷವನ್ನು ಕಾಣಿಸುವುದೇ ಆಗಿದೆ.

ವರ್ತಮಾನದ ಅರಾಜಕತೆ ಬದುಕಿನ ಹೃದಯಗಳನ್ನು ಛಿದ್ರಗೊಳಿಸುವಾಗ ಬರಹಗಾರ ವ್ಯಾಕುಲತೆಗೆ ಒಳಗಾಗಿ ಅದರ ದಾಳಿಯನ್ನು ಮೀರಿ ಹೃದಯ ಸಾಂತ್ವನ ನೀಡಲು ಬಯಸುತ್ತಾನೆ. ಲೋಕದ ದುಃಖದೊಂದಿಗೆ ಒಂದಾಗಿ ಲೋಕವನ್ನು ಹಸನುಗೊಳಿಸುವ ಚಿಂತನೆಯನ್ನು ಮಾಡುತ್ತಾನೆ. ಗಜಲ್‌ಗಳ ಲೋಕವು ಕೂಡ ಲೋಕ ಸಂವಾದವೊಂದನ್ನು ಹುಟ್ಟುಹಾಕಿ ಪ್ರೇಮ, ಪ್ರೀತಿ, ಹುಟ್ಟು, ಸಾವಿನ ಆತ್ಯಂತಿಕೆಯನ್ನು ಹುಡುಕುತ್ತವೆ. ಚರಿತ್ರೆ ವರ್ತಮಾನವನ್ನು ಏಕಗೊಳಿಸಿ ಅವುಗಳ ಕಂಗೆಡುಸುವ ಸಂಗತಿಗಳಿಗೆ ಮುಖಾಮುಖಿಯಾಗುತ್ತವೆ. ಇದನ್ನು

ಬಹಳ ಮುಖ್ಯವಾಗಿ ಗಮನಿಸಬೇಕು. ಆ ತುಡಿತವಿದ್ದಾಗ ಸೃಜನಶೀಲತೆ ಹೊಸ ಪರಿಭಾಷೆಯೊಂದನ್ನು ಕಟ್ಟಿಕೊಳ್ಳುತ್ತದೆ. ಇದನ್ನು ಡಿ.ಆರ್. ನಾಗರಾಜ್ ಸರಿಯಾಗಿ ಗುರುತಿಸಿದ್ದಾರೆ' ಚರಿತ್ರೆಯಲ್ಲಿ ಸಂಭವಿಸುತ್ತಿರುವ ಬದಲಾವಣೆಗಳು ಬರೀ ಬೀದಿಯಲ್ಲಿ ನಡೆಯುತ್ತಿರುವ ದೊಂಬಿಯಲ್ಲ. ಅದು ಮನೆಯೊಳಗೆ ನುಗ್ಗುತ್ತಿರುವ ಮಾರಿ. ಅಷ್ಟೇ ಅಲ್ಲ ಕವಿಯನ್ನು ಭಾವುಕವಾಗಿ, ಸಾಮಾಜಿಕವಾಗಿ, ಅನಾಥನನ್ನಾಗಿ, ಭಿಕಾರಿಯನ್ನಾಗಿ ಮಾಡುವ ಮಾರಿ. ಚರಿತ್ರೆ ಮಾರಿಯ ಹಾಗೆ ಕಾಣತೊಡಗುತ್ತದೆ. ಅದರಿಂದ ತಪ್ಪಿಸಿಕೊಳ್ಳಲು ಪ್ರೇಮಿಯ ವ್ಯಕ್ತಿತ್ವ ಸುಂದರ ಕನಸಿನಂತೆ ಹುಟ್ಟುತ್ತಾ ಹೋಗುತ್ತದೆ. ಆದರೆ, ಈ ಕನಸಿನೊಳಗೂ ಕೂಡ ವಾಸ್ತವ ಕಾಲಿಡುತ್ತದೆ. ಪ್ರೇಮಿಯ ವ್ಯಕ್ತಿತ್ವ ಕೂಡ ಇವನನ್ನೂ ಆಗಾಗ ಬೆಚ್ಚಿಸಿಬಿಡುತ್ತದೆ. ಪ್ರೇಮಿಯ ಜೊತೆಗೆ ಕನಸಿನ ಲೋಕದಲ್ಲಿ ಇರೋಣವೆಂದರೆ ಅಲ್ಲೂ ಅವನಿಗೆ ಅರಕ್ಷಿತತೆ ಕಾಡತೊಡಗುತ್ತದೆ. ಚರಿತ್ರೆಯ ತಿಕ್ಕಲುತನ, ಚಾಂಚಲ್ಯ, ವಿಕಟ ಅಟ್ಟಹಾಸ ಅಲ್ಲೂ ಮೆರೆಯತೊಡಗುತ್ತದೆ. ಗಾಲಿಬ್, ಮೀರ್ ತಖೀಮೀರ್, ದರ್ದ್ ಮುಂತಾದವರ ಕಾವ್ಯದ ಮಹತ್ವ ಇರುವುದು ಇಲ್ಲಯೆ. ಇಲ್ಲಿ ಬಳಕೆಯಾಗಿರುವ ಪರಿಬಾಷೆ, ಪ್ರತಿಮಾ ಸಮುಚ್ಚಯ, ಹಳೆಯದರಂತೆ, ಕವಿಸಮಯದಂತೆ ಕಂಡರೂ ಅವು ತೀವ್ರವಾಗಿ ಉರಿಯುವದಕ್ಕೆ ಹೀಗೆ ಚರಿತ್ರೆಯ ಮಾರಿ ಕನಸಿನ ಪ್ರೇಮಿ ಒಬ್ಬರೊಳಗೊಬ್ಬರು ಬೆರೆಯುವದೇ ಕಾರಣ.'[1] ಹೀಗಾಗಿ ಗಜಲ್‌ಗಳು ವಾಸ್ತವದ ಉರಿಯನ್ನು ಒಡಲಲ್ಲಿ ಇಟ್ಟುಕೊಂಡು ಹೊಸ ಕಾವ್ಯದ ನುಡಿಗಟ್ಟನ್ನು ಸೃಷ್ಟಿಸುತ್ತವೆ. ಇದಕ್ಕೆ ದಾರ್ಶನಿಕ ಗಾಲಿಬ್ ಕವಿಯ ಒಂದು ಗಜಲ್‌ನ ಉದಾರಹಣೆ ನೋಡಬಹುದು.

ನಾನು ಮನುಷ್ಯ ಸ್ವಭಾವದವನಾಗಿದ್ದೇನೆ. ಮನುಷ್ಯನಾಗಿ ಹುಟ್ಟಿದೇನೆ.
ನನಗೆ ಎಷ್ಟು ಸಾಧ್ಯವೋ ಅಷ್ಟು ಪಾಪ ಮಾಡಬಲ್ಲೆ ಎನ್ನುವ ಅಭಿಮಾನ ನನಗಿದೆ.

ದ್ರಾಕ್ಷಾರಸ ನನ್ನ ಪೂಜೆಯನ್ನು ನಾನೆಂದು ನಿಲ್ಲಿಸುವದಿಲ್ಲ.
ಭೋರಿಡುವ ಗಾಳಿಯ ಸುಳಿಯಲ್ಲಿ ನಾನು ಸದಾ ಜಿಗಿಯುತ್ತಿರುತ್ತೇನೆ

ನನ್ನ ಗುಡಿಸಿಲಿನ ನರನರಗಳಲ್ಲಿ ಹೊರಹೊಮ್ಮುವ ಬಿಸಿಲತಾಪವ ಕೇಳದಿರು
ಈ ತಾಪಕ್ಕೆ ಹೆದರಿ ನಾನು ಆಕಾಶದಲ್ಲಿ ಹಾರಾಡುತ್ತಿಲ್ಲ.

ಸೌಂದರ್ಯವೇ, ಒಮ್ಮೆ ಸಕಲ ವೈಭವದೊಡನೆ ನಿನ್ನ ನೋಡುವ ಆಸೆ
ಎಷ್ಟು ಕಾಲದವರೆಗೆ ಇಣಿಕಿ ನೋಡಲಿ ಮನದ ಕನ್ನಡಿಗಳ ಬಿಂಬಗಳ?

ಮುಖ್ಯವಾಗಿ ಗಜಲ್‌ಗಳು ಕಾವ್ಯಬಂಧದ ಹೊಸ ನುಡಿಗಟ್ಟೊಂದನ್ನು ಸೃಷ್ಟಿಸುತ್ತವೆ. ಅಲ್ಲಿ ಜೀವನ ದರ್ಶನವಿರುತ್ತದೆ. ತಕ್ಷಣಕ್ಕೆ ಕವಿಯ ವೈಯಕ್ತಿಕ ಅಭೀಪ್ಸೆಯಂತೆ ಕಂಡರೂ ಒಳ ವಿನ್ಯಾಸ ಬೇರೆಯದೆ ಅರ್ಥಗಳನ್ನು ಧ್ವನಿಸುತ್ತವೆ. 'ಗಜಲ್ ಎಂದರೆ ಕೇವಲ ಪ್ರೇಮಮಯ ನಿವೇದನೆ ಮಾತ್ರವಲ್ಲ. ಎಲ್ಲಾ ಅನುಭವಗಳ ತಾತ್ವಿಕ ಶೋಧ.'

ಇಕ್ಬಾಲ್ ಅವರ ಒಂದು ಗಜಲ್
ತಾರೆಗಳ ಮುಂದೆ ಪ್ರಪಂಚ ಇನ್ನೂ ಇದೆ
ಇದೆ ಅಲ್ಲ, ಪ್ರೇಮದ ಪರೀಕ್ಷೆ ಇನ್ನೂ ಇದೆ

ಖಾಲಿ ಬದುಕಿನಿಂದ ಇಲ್ಲ ಈ ವಾತವರಣ
ಇಲ್ಲಿ ಕೋಟ್ಯನುಕೋಟಿ ಸಾಲುಗಳು ಇನ್ನೂ ಇವೆ
ತುಷ್ಟವಾಗದಿರು ಕಂಡು ಜನರ ಬಣ್ಣ, ವಾಸನೆಯ ಮೇಲೆ
ಹೂದೋಟಗಳು, ಕನಸಿನ ಮನೆಗಳು ಇನ್ನೂ ಇದೆ

ಆದ್ದರಿಂದ ಗಜಲ್ ಗಳನ್ನು ಬರೆಯುತ್ತಿರುವ ಹೊಸ ತಲೆಮಾರಿನವರ ಮುಂದಿರುವ ದೊಡ್ಡ ಸವಾಲು ಗಜಲ್ ಸಾಹಿತ್ಯ ಪ್ರಕಾರದ ಸ್ವರೂಪವನ್ನು ಸರಿಯಾಗಿ ಗ್ರಹಿಸುವಂತದ್ದು. ಈಗ ಬರೆಯುತ್ತಿರುವ ಹೊಸಬರ ಗಜಲ್ ಗಳನ್ನು ಗಮನಿಸಿದರೆ ಅದರ ಸಾಹಿತ್ಯಿಕ ತಾತ್ವಿಕ ಚಿಂತನೆಯಲ್ಲಿ ಸಮಸ್ಯೆಯಿದೆ. ಸರಳವಾಗಿ ಅವುಗಳ ರಚನೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಬದುಕಿನ ಬಿಕ್ಕಟ್ಟುಗಳನ್ನು ಅದರ ವಾಸ್ತವಿಕ ಚಾರಿತ್ರಿಕ ನೆಲೆಯಲ್ಲಿ ಗ್ರಹಿಸಿ ಅದಕ್ಕೊಂದು ಸಾಹಿತ್ಯಿಕ ರೂಪ ಕೊಡುವುದು ಮುಖ್ಯವಾದುದು. ಯಾಕೆಂದರೆ ವರ್ತಮಾನದ ಒತ್ತಡಗಳೇ ಹೊಸ ಚಿಂತನೆ ಸಾಹಿತ್ಯ ನುಡಿಗಟ್ಟನ್ನು ಸೃಷ್ಟಿಸುತ್ತವೆ. ಸಾಂಸ್ಕೃತಿಕ ಬಿಕ್ಕಟ್ಟಿನ ಸಂದರ್ಭದಲ್ಲಿಯೆ ಗಜಲ್‌ನ ಉಗಮವೂ ಇದೆ. ವಸಾಹತು ಕಾಲದ ಇಂಗ್ಲೀಷ್ ಸಾಹಿತ್ಯ ಮಾದರಿಗಳನ್ನು ಬದಿಗಿಟ್ಟು ಶುದ್ಧ ದೇಶಿ ಸಾಹಿತ್ಯ ಮಾದರಿಯೊಂದನ್ನು ಗಜಲ್‌ಕಾರರು ಸೃಷ್ಟಿಸಿಕೊಂಡದ್ದನ್ನು ಗಮನಿಸಬೇಕು.ಇದು ಕೇವಲ ಸಾಹಿತ್ಯಿಕವಾದ ಪ್ರಯೋಗ ಮಾತ್ರವಲ್ಲ. ಪ್ರಭುತ್ವದ ಹುನ್ನಾರಗಳಿಗೆ ಎದುರಾದ ರೀತಿ. ಈ ಸಂಗತಿಯನ್ನು ಹೊಸದಾಗಿ ಬರೆಯುತ್ತಿರುವ ಗಜಲ್‌ಕಾರರು ಗಮನಿಸಬೇಕು. ಇಲ್ಲದಿದ್ದರೆ ಗಜಲ್‌ಗಳು ಕೇವಲ ಸಾಹಿತ್ಯ ಪ್ರಕಾರವೊಂದನ್ನು ಮುಂದುವರಿಸುವ ರಚನೆಗಳಾಗುತ್ತವೆ.

ಮುಖ್ಯವಾಗಿ ಗಜಲ್‌ನಲ್ಲಿ ಒಂದು ಸಾಹಿತ್ಯಕ ಐಕ್ಯತೆ ಬೇಕಾಗುತ್ತದೆ. ಎರಡೆರಡು ಸಾಲುಗಳನ್ನು ಜೋಡಿಸುತ್ತಾ ಹೋದರೆ ಗಜಲ್ ಆಗುವದಿಲ್ಲ. ಅದು ಶಬ್ದಗಳ ಜೋಡಣೆಯಾಗುತ್ತದೆ. ಇದನ್ನು ಡಿ.ಆರ್. ನಾಗರಾಜ ಅವರು ಸರಿಯಾಗಿ ವಿಶ್ಲೇಷಿಸಿದ್ದಾರೆ. 'ಪರ್ಷಿಯನ್ ಉರ್ದು ಸಾಹಿತ್ಯ ಪ್ರಕಾರಗಳ ಬಗೆಗೆ ಆಳವಾದ ಪರಿಚಯ ಇರದಿದ್ದರೆ ಗಜಲ್ ಪರ್ಯಾರ ವಿಶೇಷ ಸಮಸ್ಯೆಯನ್ನು ಸೃಷ್ಟಿಸುತ್ತದೆ. ಮೊದಲ ಮುಖ್ಯ ಸಂಗತಿ ಎಂದರೆ, ಈಚೆಗೆ ನಾವು ಒಗ್ಗಿ ಹೋಗಿರುವ ಐಕ್ಯತೆ ಗಜಲ್‌ನಲ್ಲಿ ಇಲ್ಲದಿರುವುದು. ಮೇಲು ನೋಟಕ್ಕೆ ಅದು ಚೆಲ್ಲಾಪಿಲ್ಲಿಯಾದಂತೆ ಕಾಣುತ್ತದೆ. ಎರಡು ಸಾಲುಗಳು ಅಲ್ಲಿ ಘಟಕವಾಗುತ್ತದೆ. ಒಂದು ಘಟಕಕ್ಕೂ ಇನ್ನೊಂದು ಘಟಕಕ್ಕೂ ನೇರ ನಿರಂತರತೆ ಇಲ್ಲದಿರುವುದು ಮೇಲು ನೋಟಕ್ಕೆ ಒಂದು ದೊಡ್ಡ ಸಮಸ್ಯೆಯೆ. ಆದರೆ ಅಲ್ಲಿರುವುದು ಮುಖ್ಯವಾಗಿ ಭಾವನಾತ್ಮಕ ಐಕ್ಯತೆ. ವಸ್ತುವೊಂದು ತನ್ನ ಬೌದ್ಧಿಕ ತರ್ಕದಲ್ಲಿ ಬೆಳೆಯುತ್ತಾ ಹೋಗುವದಿಲ್ಲ. ಬದಲಾಗಿ ಭಾವನಾ ವಾತವರಣದಲ್ಲಿ ಸಾಮ್ಯವಿರುವ, ಪರಸ್ಪರ ಅಖಂಡವಾಗಿ ಬೆರೆಯಬಲ್ಲ ಭಾವಗಳು ಬೆರೆತು, ಒಂದು ವಿಶಿಷ್ಟ ಅನುಭವದ ಸೃಷ್ಟಿಯಾಗುತ್ತದೆ.'[2]

ಹೀಗಾಗಿ ಗಜಲ್ ಗಳಲ್ಲಿ ಅನುಭವಗಳನ್ನು ತುಂಬುವಾಗ ಆಳವಾದ ಬೌದ್ಧಿಕತೆ ಬೇಕಾಗುತ್ತದೆ. ಹೊಸ ನುಡಿಗಟ್ಟಿನ ಮೂಲಕ ಅನುಭವವನ್ನು ಶೋಧಿಸಿ ಕಟ್ಟುವ ಕುಶಲತೆಯ ಅಗತ್ಯವಿದೆ. ಕಾವ್ಯವು ಲೋಕ ಗ್ರಹಿಸುವ ಸ್ಥಿತಿಯೊಂದನ್ನು ಗಜಲ್ ಗ್ರಹಿಸಬೇಕಾಗುತ್ತದೆ. ಪ್ರತಿಯೊಂದು ಗಜಲ್ ರಚನೆಯು ಜೀವವನ್ನು ಮಿಡಿಯುವದು ಹೃದಯವನ್ನು ಕಲುಕುವುದು ಪ್ರೇಕ್ಷಕರಿಂದ ಪ್ರಶಂಸಗೆ ಒಳಗಾಗುದು ಅದರ ಬೌದ್ಧಿಕ ವಿಕಾಸದ ನೆಲೆಯಲ್ಲಿಯೆ. ಅದು ಕಾವ್ಯದ ಭಾವಸ್ಥಿತಿಯನ್ನು ಮೀರಿ ಆಲೋಚಿಸುವ ವಿಧಾನವೊಂದನ್ನು ನಿರ್ಮಿಸುತ್ತದೆ. ಗಜಲ್ ತರ್ಕದ ಜೊತೆಗೆ ಹೃದಯವನ್ನು ಒಳಗು ಮಾಡಿಕೊಳ್ಳುವ ಸಾಧ್ಯತೆಯನ್ನು ಹೊಂದಿದೆ. ಇದು ಸಾಹಿತ್ಯ

ಪ್ರಕಾರಗಳಲ್ಲಿ ವಿಶೇಷವಾದುದು. ಜೀವನ ದರ್ಶನವನ್ನು ಸೃಷ್ಟಿಸುವ ರಚನೆಗಳಲ್ಲಿ ಸಂಭ್ರಮ ಮತ್ತು ವಿಷಾದವನ್ನು ಏಕಕಾಲಕ್ಕೆ ಬೆಸೆಯುತ್ತದೆ. 'ಹೀಗಾಗಿ ಇಲ್ಲಿ ಕವನದಲ್ಲಿ ಸಂಬಂಧಗಳು ರೂಪಗೊಳ್ಳುವ ಕ್ರಮ ಮೂಲತಃ ಹೃದಯಗಮ್ಯವಾದುದು. ವಚನಗಳಲ್ಲಿ ಹರಳುಗಟ್ಟುತ್ತಾ ಹೋಗುವ ಕ್ರಮಕ್ಕೂ ಇದಕ್ಕೂ ಇರುವ ವ್ಯತ್ಯಾಸ ಕುತೂಹಲಕಾರಿ. ಮಾಮರ–ಕೋಗಿಲೆ, ಬೆಟ್ಟದ ನೆಲ್ಲಿಕಾಯಿ – ಸಮುದ್ರದ ಉಪ್ಪುಗಳ ನಡುವಣ ಸಂಬಂಧ ವಿಸ್ಮಯಕಾರಿಯಾದರೂ ಅದು ಸ್ಪಷ್ಟ ತರ್ಕದ ಮೇಲೆಯೇ ನಿಲ್ಲುತ್ತದೆ. ಆದರೆ ಗಜಲ್ ಹಾಗಲ್ಲ. ತುಂಬಾ ಚೆದುರಿದಂತೆ ಕಾಣುವ ಘಟಕಗಳನ್ನು ದಾಟಿ ಅದರ ಬಾವ ಸ್ಥಿತಿಗಳಿಗೆ ಸ್ಪಂದಿಸುವ ಪ್ರಯತ್ನ ಮಾಡಿದಾಗ ಗಜಲ್‌ಗಳ ತೀವ್ರಾನುಭವ ಸಾಧ್ಯವಾಗುತ್ತದೆ. ಹೀಗಾಗಿ ಕನ್ನಡ ಓದುಗರಿಗೆ ಕನ್ನಡ ಕಾವ್ಯ ಓದುವಾಗ ಸೂಕ್ಷ್ಮ ಸಮಸ್ಯೆಯೊಂದು ಎದುರಾಗುತ್ತದೆ. ನಮ್ಮ ಅನ್ನದ ರುಚಿಯ ಹಾಗೆ ನಮ್ಮ ಕಾವ್ಯದ ಕಲ್ಪನೆ ಕೂಡ ಎಂದು ಸ್ಪಷ್ಟವಾಗುವುದು ಇಂಥ ಕಡೆಗಳಲ್ಲಿಯೇ. ಕಾವ್ಯಲಯದ ಕಲ್ಪನೆ ಎನ್ನುವುದು ಅಷ್ಟು ಸಂಸ್ಕೃತಿ ವಿಶಿಷ್ಟವಾದುದು. ಸಂಸ್ಕೃತಿ ನಿರ್ದಿಷ್ಟವಾದ ಲೋಕಗ್ರಹಿಕೆಯ ಕ್ರಮಗಳ ದಟ್ಟ ವಿವರಗಳ ಮಧ್ಯೆ ಗಜಲ್ ಇದೆಯಾದ್ದರಿಂದ, ಅದರ ಹಿನ್ನಲೆ ಸುಲಭವಾಗಿ ಸಿಕ್ಕರೆ ಅದು ತೆಳು ಭಾವಾವೇಶದ ಕಾವ್ಯ ಎಂದು ಅದನ್ನು ಸುಲಭವಾಗಿ ತಳ್ಳಿ ಹಾಕುವ ಅಪಾಯವಿದೆ. ಗಜಲ್‌ನ ಸಮಗ್ರ ಅನುಭವ ಒಂದು ಇಡೀ ಸಂಸ್ಕೃತಿಯ ಮುಖ್ಯ ವಿವರಗಳ ತಿಳುವಳಿಕೆಯನ್ನು ತಳ್ಳಿ ಹಾಕುವ ಅಪಾಯವಿದೆ. ಗಜಲ್ ಸಮಗ್ರ ಅನುಭವ ಒಂದು ಇಡೀ ಸಂಸ್ಕೃತಿಯ ಮುಖ್ಯ ವಿವರಗಳ ತಿಳುವಳಿಕೆಯನ್ನು ಬೇಡುತ್ತದೆ.'[3]

ಆದ್ದರಿಂದ ಗಜಲ್‌ಕಾರರ ಮುಂದಿರುವ ಬಹುದೊಡ್ಡ ಸವಾಲು ಅದರ ತಾತ್ವಿಕ ಸ್ವರೂಪವನ್ನು ಸರಿಯಾಗಿ ಅಧ್ಯಯನ ಮಾಡುವುದು. ಅಧ್ಯಯನ ಮಾಡದೆ ರಚನೆಯಲ್ಲಿ ತೊಡಗಿದರೆ ಅವು ಅನುಭವವಗಳನ್ನು ಚೆಲ್ಲಾಪಿಲ್ಲಿಯಾಗಿ ಚೆಲ್ಲಿದಂತೆ ಆಗುತ್ತದೆ. ಅನುಭವಗಳನ್ನು ಸಮಗ್ರೀಕರಣಗೊಳಿಸಿ ಭಾವನೆ ಮತ್ತು ಬೌದ್ಧಿಕತೆಯ ಐಕ್ಯತೆಯನ್ನು ಗಜಲ್‌ನಲ್ಲಿ ಸಾಧಿಸಬೇಕಾಗುತ್ತದೆ. ಗಜಲ್‌ನಲ್ಲಿ ಪ್ರೇಮವೊಂದು ಅನುಭೂತಿಯಾಗಿ ಬರುತ್ತದೆ. ಜೀವನದರ್ಶನವಾಗಿ ಶೋಧನೆಗೆ ಒಳಗಾಗುತ್ತದೆ. ಅದು ದೈವತ್ವದ ಸಾಕ್ಷಾತ್ಕಾರ ಕೂಡ ಆಗುತ್ತದೆ. ಈ ತಿಳುವಳಿಕೆಯಿಂದ ಗಜಲ್‌ಗಳನ್ನು ನೋಡಬೇಕು. ಇಲ್ಲವಾದರೆ ಪ್ರೇಮವೆಂಬುದು ಬಹಳ ಸರಳವಾಗಿ ನಿರೂಪಣೆಗೊಳ್ಳುತ್ತದೆ. ಈಗಿನ ಕೆಲವು ರಚನೆಯಲ್ಲಿ ಪ್ರೇಮದ ತೆಳು ಗ್ರಹಿಕೆಯನ್ನು ಕಾಣಬಹುದು.

ಗಜಲ್‌ನಲ್ಲಿ ಬಹಳ ಮುಖ್ಯವಾದ ಸಮಸ್ಯೆ ಮತ್ತು ಸವಾಲು ಅದರ ಛಂದಸ್ಸಿನದು. ಛಂದಸ್ಸಿನ ಬಂಧದಲ್ಲಿ ಲೋಕ ಸತ್ಯಗಳನ್ನು ತುಂಬಿಕೊಂಡಿರುವುದು. ಅದು ಗಜಲ್‌ನ ಶಿಸ್ತು. ಆ ಶಿಸ್ತನ್ನು ಶಿರಸಾವಹಿಸಿ ಪಾಲಿಸಬೇಕಾಗುತ್ತದೆ. ಇಲ್ಲದಿದ್ದರೆ ಬೇರೆ ರಚನೆಗಳಿಗೂ ಇದಕ್ಕೂ ಯಾವುದೇ ವ್ಯತ್ಯಾಸ ಉಳಿಯುವದಿಲ್ಲ. ಯಾವುದೇ ಸಾಹಿತ್ಯ ಪ್ರಕಾರದ ಉದಯವನ್ನು ಗಮನಿಸಿದರೆ ಛಂದಸ್ಸಿನೊಂದಿಗೆ ಬೆಳೆದಿವೆ. ಕನ್ನಡದಲ್ಲಿ ಚಂಪೂ, ರಗಳೆ, ಷಟ್ಪದಿ, ಕೀರ್ತನೆ, ಸ್ವರವಚನ ಕೂಡ ಛಂದಸ್ಸಿನ ಶುದ್ಧತೆಯನ್ನು ಉಳಿಸಿಕೊಂಡು ಕಾವ್ಯವನ್ನು ಚಿಂತನಾತ್ಮಕವಾಗಿ ಉನ್ನತಿಗೆ ಒಯ್ದಿರುವಂತವು. ಹೀಗಾಗಿ ಗಜಲ್‌ಕಾರರು ಗಜಲ್‌ನ ಛಂದಸ್ಸನ್ನು ಶಾಸ್ತ್ರೀಯವಾಗಿ ರಚನೆಯಲ್ಲಿ ತರಬೇಕಾಗುತ್ತದೆ. ಛಂದಸ್ಸು ಮತ್ತು ಭಾಷೆ ಪರಸ್ಪರ ಕೂಡಿಕೊಳ್ಳಬೇಕು. ಆಗ ಅದಕ್ಕೊಂದು ಲಯ ಬರುತ್ತದೆ. ಆ ಲಯವು ಅನುಭವಗಳೊಂದಿಗೆ ಬೆಸೆಯಬೇಕು. ಛಂದಸ್ಸು ಈ ಬೆಸೆಯುವಿಕೆಯ ಕ್ರಿಯೆಯನ್ನು ತಾತ್ವಿಕವಾಗಿ ಗಜಲ್‌ನಲ್ಲಿ ಮಾಡುತ್ತದೆ. ಪೂರ್ಣತ್ವದ ಸ್ಥಿತಿಯೊಂದು ಪ್ರಾಪ್ತವಾಗುವುದು ಛಂದಸ್ಸನ್ನು ಸರಿಯಾಗಿ

ಗಜಲ್‌ನಲ್ಲಿ ಅಳವಡಿಸಿದಾಗ. ಯಾಕೆಂದರೆ ಗಜಲ್ ಛಂದಸ್ಸಿಗೆ ಒಂದು ನಿರಂತರತೆ ಇದೆ. ಅದು ಸರಳ ರೇಖೆಯ ಮಾದರಿಯದಲ್ಲ. ಅನುಭವವನ್ನು ಜೀವನ ಲಯದೊಂದಿಗೆ ಜೋಡಿಸುವ ವಿನ್ಯಾಸ. ಈ ವಿನ್ಯಾಸವನ್ನು ಕ್ರಮಬದ್ಧಗೊಳಿಸುವದು ಗಜಲ್‌ಕಾರರ ಬಹಳ ದೊಡ್ಡ ಸವಾಲು. ಯಾಕಂದರೆ ಗಜಲ್‌ಗಳು ನಾಟ್ಯೀಕರಣದ ಸ್ವರೂಪವನ್ನು ಹೊಂದಿವೆ. ದೈನಂದಿನ ಜೀವನ ವಿಧಾನವನ್ನು ಲಯಬದ್ಧಗೊಳಿಸಿ ತನ್ನ ಭಾವಭಿನಯದ ಮೂಲಕ ಪ್ರೇಕ್ಷಕನೊಂದಿಗೆ ಮುಖಾಮುಖಿಯಾಗುತ್ತವೆ. ಆದ್ದರಿಂದ ಛಂದಸ್ಸು ಗಜಲ್‌ಗಳ ಆತ್ಮ.

ಕನ್ನಡ ಗಜಲ್‌ನಲ್ಲಿ ಶಾಂತರಸರು ಪೂರ್ಣತೆಯನ್ನು ಸಾಧಿಸಿದರು. ಅವರ ಗಜಲ್‌ಗಳು ಮುಂದಿನ ತಲೆಮಾರಿಗೆ ಮಾದರಿಯಾಗುವಂತೆ ಛಂದಸ್ಸಿಗನುಗುಣವಾಗಿ ರಚನೆಗೊಂಡವು.

ಹುಡುಕಲು ಹೊರಟಿರುವರು ಸೂರ್ಯನನ್ನು ಕಗ್ಗತ್ತಲೆಯಲ್ಲಿ
ಇಟ್ಟಿರುವರು ಅಡಗಿಸಿ ಚಂದ್ರನನ್ನು ಕಗ್ಗತ್ತಲೆಯಲ್ಲಿ

ಇಂಗಿಲ್ಲ ಮಣ್ಣಲ್ಲಿ ಮೃತ್ಯು ಹಾಕಿದ ಕಂಬನಿ ಇನ್ನೂ
ಹೂಳಿರುವರು 'ಹೇರಾಮ' ಧ್ವನಿಯನ್ನು ಕಗ್ಗತ್ತಲೆಯಲ್ಲಿ

ರಕ್ತದ ಹೊಳೆಯಲಿ ಬೆಂಕಿಯ ಸುರಿಮಳೆ ಹೆಣಗಳ ರಾಸಿಗಳು
ಹುರಿಗೊಳಿಸುತ್ತಿರುವರು ಮೀಸೆಯನು ಕಗ್ಗತ್ತಲೆಯಲ್ಲಿ

ರೋದಿಸತ್ತಲಿವೆ ಎಲ್ಲಾ ದಾರಿಗಳು ಎದೆಯ ಗಾಯದಿಂದ
ಎಳೆಯುತ್ತಿರುವರು ಧರ್ಮದ ರಥವನು ಕಗ್ಗತ್ತಲೆಯಲ್ಲಿ

ಹಸಿದ ಹೊಟ್ಟೆಯಲಿ ರಾಷ್ಟ್ರಪ್ರೇಮವನು ಕೆದರಿ ನೋಡುತಿರುವರು
ಸೆಳೆಯುತ್ತಿರುವರು ಲಕ್ಷ್ಮಿ ಸೀರೆಯನು ಕಗ್ಗತ್ತಲೆಯಲ್ಲಿ

ಹದ್ದು ಒಯ್ಯುತಿವೆ ಗುಪ್ತ ಕಣಜಗಳ ಹಾಡ ಹಗಲಿನೊಳಗೆ
ನೋಡುತ್ತಿರುವರು ಪಿಳಿ ಪಿಳಿ ನಭವನು ಕಗ್ಗತ್ತಲೆಯಲ್ಲಿ

ಜಾರಿ ಹೋಗುತಿವೆ ವೃದ್ಧರ ಕೈಯಾಸರೆ ಬಡಗಿಗಳೆಲ್ಲ
ಹೋ ಕಟ್ಟಲು ದೇವರ ರಾಜ್ಯವನ್ನು ಕಗ್ಗತ್ತಲೆಯಲ್ಲಿ

ಶಾಂತರಸರು ಉರ್ದುವನ್ನು ಬಲ್ಲವಾದ್ದವರಿಂದ, ಅಧ್ಯಯನ ಮಾಡಿದ್ದರಿಂದ ಅದರ ಲಯವನ್ನು ಸರಿಯಾಗಿ ಅರ್ಥಮಾಡಿಕೊಂಡವರು. ಆ ಪ್ರಕಾರವನ್ನು ವಾಸ್ತವದೊಂದಿಗೆ ಮುಖಾಮುಖಿ ಮಾಡುವ ಚಿಂತನೆಯನ್ನು ಮಾಡಿದರು.

ಒಳಗಿನೊಳಗಿನ ಕುಟಿಲ ಕುತ್ಸಿಕ ಕುಹಕ ಮತ್ಸರ ಕರಗಲಿಲ್ಲ
ಮುಚ್ಚಿ ಮುಸುಕಿದ ಕಷ್ಟ ಕಾರ್ಪಣ್ಯಗಳ ಜಲಧರ ಕರಗಲಿಲ್ಲ

ಏಸೋ ವರ್ಷ ನಿನ್ನ ಸೌಧಕೆ ಬಯಸಿ ಒರಲಿ ಒರಲಿ ಬಂದೆ
ಮೆಟ್ಟಿಲ ಕಲ್ಲು ಸವೆದವು ನಿನ್ನ ಮನಸು ಭವಹರ ಕರಗಲಿಲ್ಲ

ಗುಡಿಲ ಬಡವನ ಚೆಹದ ಕಪ್ಪಿನಲಿ ಬರಿಯ ಡಿಕಾಕ್ಷನ್ನು ಮಾತ್ರ
ಮಹಡಿಯ ಶ್ರೀಮಂತನ ಕಪ್ಪಿನಲ್ಲೊಮ್ಮೆಯೂ ಶರ್ಕರ ಕರಗಲಿಲ್ಲ

ತನು ಮನಗಳು ಸಾವಿರ ಸಾವಿರ ಸಲ ಬವಣೆಗೊಂಡರೂ
ತಪ್ಪಿಯೂ ತಾನೊಮ್ಮೆ ಹಟದ ಅಹಮಿಕೆ ಭೂಧರ ಕರಗಲಿಲ್ಲ

ಹಸಿವು ಸಾವು ಭೂಕಂಪವೂ ಏನಾದರೂ ಓ ಅರಸ
ಅನೀತಿಯ ಕಪಟವು ಕ್ರೌರ್ಯವು ಆಳುವ ಧೂರ್ತರ ಕರಗಲಿಲ್ಲ

ಗಜಲ್‌ನ್ನು ಒಂದು ತತ್ವವಾಗಿಯೆ ಕಾಣಬೇಕಾಗುತ್ತದೆ. ಅದು ಒಳಗು ಮಾಡುವ ಅಂಶಗಳು ದೈವತ್ವವಾದುವು. ಹಿಂಸೆಯ ನೆಲೆಗಳು ವಿಸ್ತಾರಗೊಂಡಂತೆ ಮನುಷ್ಯ ಅದರಿಂದ ವಿಮುಖನಾಗುವ ಮತ್ತು ಎದುರಿಸುವ ದಾರಿಗಳನ್ನು ಹುಡುಕುತ್ತಾನೆ. ಗಜಲ್ ಕೂಡ ದೈನಂದಿನ ಮತ್ತು ಚಾರಿತ್ರಿಕ ಹಿಂಸೆಯ ಪ್ರಕೋಪಗಳನ್ನು ಎದುರಿಸಿ ಶಾಂತಿಯ ಒಳ ದಾರಿಗಳನ್ನು ಹುಡುಕುತ್ತದೆ. ಬದದುಕಿನ ಜಂಜಡಗಳು, ಸಾವು–ನೋವುಗಳು, ದ್ವಂದ್ವಗಳ ಸತ್ಯವನ್ನು ಮನಗಾಣಿಸುತ್ತದೆ.

ಬಂದವರು ಒಂದು ದಿನ ಮರಳಿ ಹೋಗಲೇಬೇಕಲ್ಲ
ಅರಿಯದಿದ್ದರೂ ದಾರಿ ಹೊರಳಿ ಹೋಗಲೇಬೇಕಲ್ಲ

ಕರೆದು ತಂದವರು ಯಾರೊ ಜೊತೆಗೆ ಇದ್ದವರು ಯಾರೊ
ಲೆಕ್ಕ ಮಮುಗಿಯುವದಿಲ್ಲ ಉರುಳಿ ಹೋಗಲೇಬೇಕಲ್ಲ

ಕರುಳ, ಎದೆ, ಮನೆ ಮಾರು ಎತ್ತರದ ಗೋಡೆ ಕಟ್ಟಿದರೂ
ಗಂಟೆ ಬಾರಿಸಿದೊಡನೆ ನುಸುಳಿ ಹೋಗಲೇಬೇಕಲ್ಲ

ಚುಕ್ಕೆ ಗಾಳಿ ನೇಸರುಗಳ ಸ್ನೇಹ ಮುಗಿದಾಗ
ತೆರೆದು ತಿರೆ ಬಾನುಗಳ ಅಗಲಿ ಹೋಗಲೇಬೇಕಲ್ಲ

ಅಲ್ಲಿ ಇಲ್ಲಿ ಎಂಬ ಗೊಡವೆ ಅಡಗಿದಾಕ್ಷಣವೆ 'ಅರಸ'
ಬಿಚ್ಚಿ ಕಾಯ ಜೀವನದ ಸುರಳಿ ಹೋಗಲೇಬೇಕಲ್ಲ

ಹೀಗಾಗಿ ಹೊಸ ತಲೆಮಾರಿನ ಗಜಲ್‌ಕಾರರು ಛಂದಸ್ಸಿನ ಬಂಧವನ್ನು ಶಾಸ್ತ್ರೀಯವಾಗಿ ಅಧ್ಯಯನ ಮಾಡಬೇಕು. ಅದರ ಜೀವಂತಿಕೆ ಛಂದಸ್ಸಿನಲ್ಲಿದೆ. ಛಂದಸ್ಸು ಮತ್ತು ಗಜಲ್ ನಂಟು ಅನನ್ಯವಾದುದು. ಆ ಅನನ್ಯತೆಯನ್ನು ಪರಿಶುದ್ಧವಾಗಿ ಉಳಿಸಿಕೊಂಡು ಆ ಪ್ರಕಾರವನ್ನು ಬಲಗೊಳಿಸುವದು ದೊಡ್ಡ ಸವಾಲು. ಯಾಕೆಂದರೆ ಮುಕ್ತತೆಯನ್ನು ಕೆಂದ್ರವಾಗಿಟ್ಟುಕೊಂಡು ಕಾವ್ಯವನ್ನು ಬರೆಯುತ್ತಿದ್ದೇವೆ. ಆ ಮುಕ್ತತೆಯು ಗಜಲ್‌ನ್ನು ಗಾಯಗೊಳಿಸಬಾರದು. ಚಿದಾನಂದ ಸಾಲಿಯವರು ಇದನ್ನು ಸರಿಯಾಗಿ ಗುರುತಿಸಿದ್ದಾರೆ. 'ಛಂದಸ್ಸಿನ ಪ್ರಸ್ತಾಪ ಮತ್ತೆ ಆಗುತ್ತಿರುವದರಿಂದ ಛಂದೋ ಲಕ್ಷಣಗಳನ್ನು ಸರಿಯಾಗಿ ಅಳವಡಿಸಿದ ಮಾತ್ರಕ್ಕೆ ಒಂದು ರಚನೆಯನ್ನು ಗಜಲ್ ಎಂದು ಕರೆಯಬಹುದೇ ಎಂಬ ಪ್ರಶ್ನೆ ಏಳುತ್ತದೆ. ಕರೆಯಬಹುದು. ಅದೊಂದು ಬಗೆಯಲ್ಲಿ ಹತ್ತಿಯಿಂದ ಮಾಡಿಟ್ಟ ಆನೆಯ ಬೊಂಬೆಯಂತೆ. ನೋಡಲಿಕ್ಕೆ ಆನೆಯೇನೋ ಹೌದು. ಜೀವವಿಲ್ಲ. ಹಾಗೆಯೇ ಅತ್ಯುತ್ತಮ ಕಾವ್ಯಗುಣ ಹೊಂದಿರುವ ಆದರೆ ಗಜಲ್‌ನ ಛಂದೋಲಕ್ಷಣಗಳನ್ನು ಒಳಗೊಂಡಿಲ್ಲದ ರಚನೆಯನ್ನು ಒಂದು ಮುಕ್ತ ಛಂದಸ್ಸಿನ ರಚನೆಯೆನ್ನಬಹುದೇ ಹೊರತು ಯಾವುದೇ ಕಾರಣಕ್ಕೂ ಗಜಲ್ ಎನ್ನಲಾಗುವದಿಲ್ಲ. ಗಜಲ್ ವಿಷಯಕ್ಕೆ ಬಂದರೆ ಅದರ ಛಂದಸ್ಸೇ ಅದರ ಅನನ್ಯತೆ. ಈ ಛಂದಸ್ಸು ಶಕ್ತಿ

ಮತ್ತು ಮಿತಿ. ಈ ಛಂದಸ್ಸಿನ ಮಿತಿಯಲ್ಲಿ ಒಂದು ಗಜಲ್‌ನ್ನು ಯಾವ ಕಾವ್ಯಾತ್ಮಕ ಔನ್ನತ್ಯಕ್ಕೆ ಒಯ್ಯಬಹುದೆಂಬುದೇ ಒಬ್ಬ ಗಜಲ್‌ಕಾರನ ಮುಂದಿರುವ ಸವಾಲು.'[4]

ಈ ಎಚ್ಚರವನ್ನು ಇಟ್ಟುಕೊಂಡು ಸಾಲಿಯವರು ಗಜಲ್ ರಚನೆಯಲ್ಲಿ ತೊಡಗಿಸಿ ಕೊಂಡವರು. ಅದರ ಶುದ್ಧತೆಗೆ ದಕ್ಕೆಯಾಗದಂತೆ ಗಜಲ್‌ನ ಸಾಧ್ಯತೆಯನ್ನು ವಿಸ್ತರಿಸುತ್ತಿದ್ದಾರೆ.

ಕುಡಿಯದೆ ಅರೆಕ್ಷಣವೂ ಬದುಕಿರಲಾರೆ ಕರುಣೆಯಿರಲಿ ಸಾಕಿ
ಸದಾ ಬಟ್ಟಲು ತುಳಿಕಿರುವಂತೆ ನಿಗಾ ಇರಲಿ ಸಾಕಿ

ಕಪಟ ಸ್ನೇಹ, ಕಳಚಿದ ಪ್ರೇಮಗಳ ಗಾಯಗಳು ಮೈಯೆಲ್ಲ
ಉಳಿದಿರುವ ಔಷಧವೊಂದೇ ಅದೀಗ ಮರುಕವಿರಲಿ ಸಾಕಿ

ಕನಸುಗಳಾಸರೆಯಿರದೆ ಕುರುಡನೂ ಜಗದೀ ಬದುಕಿರಲಾರ
ಈ ಕನಸಪಾನಕೆ ಕೊನೆಯು ಎಂದಗೂ ಬಾರದಿರಲಿ ಸಾಕಿ

ಒಣಗಿ ನಿಂತ ಒಂಟಿ ಮರ ನಾನು ಸುತ್ತಲೆಲ್ಲ ಮುಳ್ಳ ಬೇಲಿ
ಮುಳ್ಳುಮೊನೆಯಲೇ ಮಧುವಿನ ಹನಿ ಮೂಡಿಬರಲಿ ಸಾಕಿ

ಆಶೆಗಳ ಹೊಸಕಿ ಹಾಕಿದರೂ ದೂರಲಾರೆ ದೇವತೆ ಆಕೆ
ತುಂಬಿದ ಬಟ್ಟಲಲಿ ಸದಾ ಅವಳು ನಗುತಿರಲಿ ಸಾಕಿ

ಪ್ರೇಮದ ಸ್ವರೂಪವೂ ಗಜಲ್‌ನಲ್ಲಿ ಸಾಮನ್ಯ ಲೌಕಿಕ ಅರ್ಥ ಪಡೆಯುವದಿಲ್ಲ. ಲೌಕಿಕತೆಯನ್ನು ಮೀರಿದ ಅಲೌಕಿಕ ಅರ್ಥವನ್ನು ಪಡೆಯುತ್ತದೆ. ಅಲ್ಲಿ ಬಳಕೆಯಾಗುವ 'ಸಾಕಿ' ಅನ್ನೋ ಪದವೂ ಕೂಡ ಆತ್ಮಸಾಕ್ಷಿಯ ಪ್ರತೀಕವಾಗಿ ಬರುವಂತದ್ದು. ಇದನ್ನು ಗಜಲ್‌ಕಾರರು ಗಮನಿಸಬೇಕು. ಮೋಹ ಮತ್ತು ನಿರ್ಮೋಹಗಳ ದ್ವಂದವೂ ಕೂಡ ಗಜಲ್ ನಲ್ಲಿ ಕಾಣುತ್ತೇವೆ.

ಹೆಂಡತಿ ಮೋಹವ ಕರಗಿಸಲೆಂದೇ ಹುಟ್ಟಿದಳು ಮಗಳು
ಈ ಭವ ದಾಹವ ಮೆರುಗಿಸಲೆಂದೇ ಹುಟ್ಟಿದಳು ಮಗಳು

ಹೆಣ್ಣಿನ ಮಹಿತಿಯ ತಿಳಿಸಲು ಎಂದೇ ಹೆಣ್ಣಾದಳು ಮಗಳು
ಹೊರಗಳ ಹರಿದು ಹೊಸಲೋಕ ಕಾಣಿಸಿದ ಕಣ್ಣಾದಳು ಮಗಳು

ಮುಗ್ಧತೆ ಬೀಜವ ಮತ್ತೆ ಎದೆಹೊಲದಿ ನಾಟಿದಳು ಮಗಳು
ಉರುಳಿದ ಬಾಲ್ಯವ ಮರಳಿಸಿ ಮನಸನು ಅರಳಿಸಿದಳು ಮಗಳು

ಹಸಿವು, ನಿದ್ದೆ, ನೀರಡಿಕೆಯನೂ ಮರೆಸಿದಳು ಮಗಳು
ಕಣ್ಣಿ ಗಾಯಕೆ ಕನ್ನಡಿ ಹಿಡಿದು ಕಣ್ತೆರೆಸಿದಳು ಮಗಳು
ನನ್ನ ಜೀವವೇ ನದಿಯಾದಂತೆ ಜುಳುಜುಳು ಹರಿದಳು

ಅಮರಚಿಂತರು ಗಜಲ್‌ಗೆ ತನ್ಮಯತೆ ತಂದುಕೊಟ್ಟರು. ಸಾಮಾಜಿಕ ಅಸಮಾನತೆಯ ಶೋಷಣೆಯ ವಿನ್ಯಾಸವನ್ನು ಗಜಲ್‌ನಲ್ಲಿ ಸಾಧ್ಯ ಮಾಡಲು ಚಿಂತಿಸಿದರು. ಇದೊಂದು ಹೊಸ ಪ್ರಯೋಗ. ಅಮರಚಿಂತರಂತೆ ಗಜಲ್‌ಗಳನ್ನು ಪ್ರಯೋಗಾತ್ಮಕವಾಗಿ ಸೃಷ್ಟಿಸುವ ಯತ್ನಗಳು ನಡೆಯಬೇಕು. ಅವರು ಗಜಲ್‌ಗಳನ್ನು ಕುರಿತು ಹೇಳಿದ ಮಾತುಗಳಲ್ಲಿಯೆ ನಿರೀಕ್ಷೆ ಮತ್ತು

ಪಡೆಯಬೇಕಾದ ಸಾಧ್ಯತೆಗಳಿವೆ.'ಇಂದು ಪ್ರಚಾರ ಮಾಧ್ಯಮಗಳು ಹೆಚ್ಚಾಗಿ ಲಾಭ ಗಳಿಸುವ ದೃಷ್ಟಿಯಿಂದ ಪ್ರೀತಿ, ಪ್ರೇಮ, ವಿರಹ ವೇದನೆಯನ್ನೊಳಗೊಂಡ ಧ್ವನಿ ಮುದ್ರಿಕೆಗಳನ್ನು ಹೊರತಂದು ಗಜಲ್ ಗಂಭೀರ ಸಾಹತ್ಯವನ್ನು ಕಡೆಗಣಿಸಲಾಗುತ್ತಿದೆ. ಜೀವನಪರವಾದ, ಮೌಲ್ಯಭರಿತ ಗಜಲ್ ಹಾಡುಗಳ ಕ್ಯಾಸಟ್‌ಗಳಿವೆ. ಅವುಗಳನ್ನು ಕೇಳುವವರು, ಖರೀದಿಸುವವರು ಕಡಿಮೆ.ಹಿಂದಿ ಸಿನಿಮಾಗಳಲ್ಲಿ ಜನರನ್ನು ಮೋಹಗೊಳಿಸುವ ಪ್ರೇಮ, ವಿರಹ ಸುಂದರ ಹಾಡುಗಳು ಮನಸೆಳೆದಂತೆ ಇತರ ಹಾಡುಗಳು ಮನಸೆಳೆಯುವದಿಲ್ಲ. ಸಭೆಗಳಲ್ಲಿ ಜನರನ್ನು ರಂಜಿಸಲು, ಚೆಪ್ಪಾಳೆ ಗಿಟ್ಟಿಸಲು ಕೀಳು ಮಟ್ಟದ ಪೇಮದ ಶೇರುಗಳನ್ನು ಹೇಳುವುದು ಇತ್ತೀಚೆಗೆ ಹೆಚ್ಚಾಗಿದೆ. ಇಂಥ ಪ್ರೇಮ, ವಿರಹ, ಮದಿರೆ, ಸರಸ ಸಲ್ಲಾಪಗಳನ್ನು ಕೇಳಿ ಕೇಳಿ ಗಜಲನಿನ ಇನ್ನೊಂದು ರೂಪವರಿಯದ ನಮ್ಮ ನಿಮ್ಮಂತವರಲ್ಲಿ ಗಜಲ್ ಎಂದರೆ ಬರೀ ಪ್ರೇಮ, ಮದಿರ, ವಿರಹ ಕಾವ್ಯ ಹೊರತು ಮತ್ತೇನಲ್ಲ ಎಂಬ ಅಭಿಪ್ರಾಯ ಮೂಡಲು ಕಾರಣವಾಯಿತು.'[5] ಹೀಗಾಗಿ ಗಜಲ್‌ಕಾರರು ಈ ಮಿತಿಯನ್ನು ಮೀರಿ ಅದರ ನಿಜತ್ವವನ್ನು ಉಳಿಸಿಕೊಂಡು ಹೋಗಬೇಕಿದೆ. ಗಜಲ್ ಜನಸಾಮನ್ಯರು ಮತ್ತು ಉನ್ನತವರ್ಗದವರನ್ನು ಐಕ್ಯಗೊಳಿಸಿದ ಕಾವ್ಯ. ಎರಡೂ ನೆಲೆಯಲ್ಲೂ ಅತ್ಯಂತ ಜನಪ್ರಿಯತೆಯನ್ನು ಪಡೆದಿರುವಂತದ್ದು. ಶೋಕ ಮತ್ತು ಸ್ತುತಿಯನ್ನು ದರ್ಶನದ ನೆಲೆಯಲ್ಲಿ ಅಂದುಕೊಳ್ಳಬೇಕಿದೆ.

ಅಮರಚಿಂತರ ಗಜಲ್‌ನ್ನು ಗಮನಿಸಬೇಕು

ರೆಕ್ಕೆ ಮುರಿದು ಹಾರಲು ಆಕಾಶ ಬಿಟ್ಟುಹೋದರು
ಏಣಿ ಮುರಿದು ಏರಲು ನೇಣುಪಾಶ ಬಿಟ್ಟುಹೋದರು

ಅಡಕಿಲ ಗಡಿಗೆಗಳಂತೆ ಕುಲಗಳು ಒಂದರ ಮೇಲೊಂದರಂತೆ ಕೂಡಿವೆ
ಕುಲದ ವ್ಯಾಕುಲ ಅಲೆಗಳ ಆಕ್ರೋಶ ಬಿಟ್ಟು ಹೋದರು

ಹಿಂದೆ ಸರಿದರೆ ಬೆಂಕಿ, ಮುಂದುವರಿದರೆ ಕಂದರ
ಬಾಳಲು ಬಾರದ ದುರ್ಗಮ ನಿವಾಸ ಬಿಟ್ಟು ಹೋದರು

ಆ ಗಡಿಯಲಿ ಗುಂಡು ಈ ಗಡಿಯಲಿ ಬಾಂಬು
ಮಾನವತೆಗೆ ಮಾನವರಹಿತ ಪ್ರದೇಶ ಬಿಟ್ಟುಹೋದರು

ಮುಚ್ಚಿದ ಕಣ್ಣು ತೆರೆಯಲು ಯುಗಗಳು ಬೇಕಾದವು
ಕಂಗಳಲಿ ಬೆಳಕಿನ ಕುರುಡು ಅಭಾಸ ಬಿಟ್ಟು ಹೋದರು

ಹಿಡಿದ್ದೆಲ್ಲ ನೆರಳು ನಾವು ಏರಿದ್ದೆಲ್ಲ ಉರುಳು
ಬದುಕು ತಮಾಷೆ ಮಾಡಿ ಪರಿಹಾಸ ಬಿಟ್ಟು ಹೋದರು

ಮೃತ್ಯುಸಾಗರದಲ್ಲಿ ಜೀವನಧಾರೆ ಹರಿಯುತ್ತಲಿದೆ
ವೇದನೆ ದಡ ಮಾಡಿಕೊಳ್ಳಲು ಸಂದೇಶ ಬಿಟ್ಟುಹೋದರು

ಕಾಲದಲ್ಲಿ ಸಂಭವಿಸುವ ಬದುಕಿನ ಸ್ಥಿತ್ಯಂತರಗಳಿಗೆ ಸಾಹಿತ್ಯ ಸಂವೇದಿಸುತ್ತದೆ. ಆಯಾ ಕಾಲದ ಬಿಕ್ಕಟ್ಟುಗಳನ್ನು ತಾತ್ವಿಕವಾಗಿ ಹಿಡಿದಿಡಲು ಆಲೋಚಿಸುತ್ತದೆ. ಸಾಂಪ್ರದಾಯಿಕತೆಯ ಸಾಹಿತ್ಯಿಕ ಅಂಶಗಳನ್ನು ಮೀರಿ ಹೊಸ ಬಗೆಯಲ್ಲಿ ಸಾಹಿತ್ಯ ಪ್ರಕಾರಗಳನ್ನು ವಿಸ್ತರಿಸುವ ಜವಬ್ದಾರಿಯನ್ನು ಲೇಖಕ ಹೊತ್ತುಕೊಳ್ಳುತ್ತಾನೆ. ಗಜಲ್ ಕೂಡ ಆ ಜವಾಬ್ದಾರಿ ಹೊತ್ತುಕೊಳ್ಳಬೇಕಿದೆ. ಜಾಗತೀಕರಣದ ನಂತರ ಮ್ಮ ಕಾಲದಲ್ಲಾದ ಬದುಕಿನ ಬವಣೆಗಳ

ಬಿಕ್ಕಟ್ಟುಗಳನ್ನು ಗಜಲ್‌ಗಳಲ್ಲಿ ಕಟ್ಟಿಕೊಡಬೇಕಿದೆ. ಅಮರಚಿಂತರು ಇದಕ್ಕೆ ಅತ್ಯುತ್ತಮ ಮಾದರಿ. ಅವರ ಇನ್ನೊಂದು ಗಜಲ್

ಪರಿಚಿತ ಗಲ್ಲಿಗಳಲ್ಲಿ ತಮ್ಮನ್ನೇ ತಾವು ಹುಡುಕುತಿರುವರು ಯಾರು?
ಈ ನಗರ ಯಾವುದಯ್ಯಾ? ಇಲ್ಲಯ ನಾಗರಿಕರು ಯಾರು?

ಆಕಾಶಕೆ ಮುಖ ಮಾಡಿ ನರಳುತಿವೆ ಗಿಡ ಮರದ ಬೇರುಗಳು
ಈ ತೋಟ ಯಾರದಯ್ಯಾ? ತೋಟದ ಮಾಲೀಕರು ಯಾರು?

ಧರ್ಮದ ಹೆಸರಿನಲಿ ಅಧರ್ಮ ಮಾರಲ್ಪಡುತ್ತದೆ
ಈ ಧರ್ಮ ಯಾವುದಯ್ಯಾ? ಇದರ ಧರ್ಮಗುರು ಯಾರು?

ಶ್ವೇತ ಭವನದಲ್ಲಿರುವವರೆಲ್ಲಾ ಶ್ವೇತಮತಿಗಳೇ?
ಜಗದ ಮುಖಕೆ ಮಸಿ ಬಳೆದ ಕರಿತಲೆ ಮಾನವರು ಯಾರು?

ಸಾಲದ ಶೂಲಗಳಿರಿಯುತ್ತಿವೆ, ಬದುಕು ನೇಣಿಗೆ ನೇತಾಡಿದೆ
ಈ ಶಾಸನ ಯಾವುದಯ್ಯಾ? ಇಲ್ಲಯ ಶಾಸಕರು ಯಾರು?

ಹನಿ ಹನಿ ರಕ್ತ ನೀಡಿ ಈ ತೋಟ ಬೆಳೆಸಿದವರು ಯಾರು?
ಕೆಲವರಿಗೆ ಮುಳ್ಳು, ಕೆಲವರಿಗೆ ಹೂ ಹಂಚುವ ಮಾಲೀಕರು ಯಾರು?

ಸುಡುತ್ತಿರುವ ಬೂದಿಯನು ಹರಡುತ್ತಾ ಹೋಗುವಿರಿ ನೀವು
ಕಿಡಿಗಳನು ಒಗ್ಗೂಡಿಸುವೆ. ಗಾಳಿಯಲಿ ಚದುರಿಸುವವರು ಯಾರು?

ಎಚ್.ಎಸ್. ಮುಕ್ಕಾಯಕ್ಕ ಅತ್ಯುತ್ತಮ ಗಜಲ್ ಮಾದರಿಗಳನ್ನು ಕೊಟ್ಟಿದ್ದಾರೆ. ಪ್ರೇಮ, ವಿರಹದ ಉರಿಯನ್ನು ಶಕ್ತವಾಗಿ ಗಜಲ್‌ನಲ್ಲಿ ತಂದಿದ್ದಾರೆ. ಅವುಗಳ ಸಾಕ್ಷಾತ್ಕಾರವನ್ನು ಗಜಲ್‌ನಲ್ಲಿ ತುಂಬಿದ್ದಾರೆ.

ಸಂಜೆಯಾಯಿತು ಸುಮ್ಮನೇಕಿರುವಿ ಹೇಳು ಬಟ್ಟಲು ತುಂಬು ಸಾಕಿ
ಸಂಭ್ರಮಿಸುವದಕ್ಕಾಗಿಯೇ ಇರುವುದೀ ಇರುಳು ಬಟ್ಟಲು ತುಂಬು ಸಾಕಿ

ನೀನಿಲ್ಲದಿರೆ ಮಧುಶಾಲೆಗೆ ಶೋಭೆಯೇ ಇಲ್ಲೆಂಬರು ಗೆಳೆಯರು
ನಗುತಿವೆ ಬಾನಲಿ ಶಶಿಯೊಡನೆ ತಾರೆಗಳು ಬಟ್ಟಲು ತುಂಬು ಸಾಕಿ

ಯಾವ ನೋವಿನಲಿ ಹೇಗೆ ಇರುವನೆಂದು ಈ ಜಗಕೇನು ಗೊತ್ತು
ಯಾರಿಗೂ ಲೆಕ್ಕ ನೀಡಬೇಕಿಲ್ಲ ಹೇಳು ಬಟ್ಟಲು ತುಂಬು ಸಾಕಿ

ಶೂನ್ಯ ಕವಿದ ಹೃದಯದಲಿ ವಿರಹದೀಪ ಹೊತ್ತಿ ಉರಿಯಲಿ ಬಿಡು
ಸಂತೈಸಲಾಗದ ಉನ್ಮತ್ತ ರಾತ್ರಿಗಳು ಬಟ್ಟಲು ತುಂಬು ಸಾಕಿ

ಸಂಜೆಯಾಗುತ್ತಲೇ ಕವಿಯತುಂಬ ಕೂಜೆ ಬಟ್ಟಲುಗಳದೆ ಇಂಚರ
ಇದರಿಂದಲೇ ಕಳೆಯುತ್ತಿದೆ ಈ ಬಾಳು ಬಟ್ಟಲು ತುಂಬು ಸಾಕಿ

ಇತಿಮಿತಿಗಳನ್ನೇ ಮರೆತು ಕುಡಿತಿಹೆನೆಂದು ಜರಿಯುತಿಹರೆಲ್ಲರು
ಬದುಕು ಸಾವಿನ ಹಂಗು ನನಗಿಲ್ಲ ಕೇಳು ಬಟ್ಟಲು ತುಂಬು ಸಾಕಿ

ಕನ್ನಡದಲ್ಲಿ ಈ ರೀತಿಯ ಗಜಲ್‌ಗಳ ರಚನೆಯಾಗಿವೆ. ಇವರೆಲ್ಲಾ ಗಜಲ್‌ಗೆ ಹೊಸ ಚಲನೆಯನ್ನು ನೀಡಿದ್ದಾರೆ. ಇದನ್ನು ಶಕ್ತವಾಗಿ ಮುಂದುವರಿಸಿಕೊಂಡು ಹೋಗುವ ವಿವೇಚನೆ ಬೇಕಿದೆ.

ಹೊಸಬರು ಬಹಳ ಉತ್ಸಾಹದಿಂದ ಗಜಲ್‌ಗಳನ್ನು ಬರೆಯುತ್ತಿದ್ದಾರೆ. ಇನ್ನೊಂದು ಭಾಷೆಯಲ್ಲಿ ಹುಟ್ಟಿದ ಸಾಹಿತ್ಯ ಪ್ರಕಾರವನ್ನು ಕನ್ನಡಕ್ಕೆ ತರುವಾಗ ಅದರ ಮೂಲ ಸ್ವರೂಪವನ್ನು ಅಧ್ಯಯನ ಮಾಡಬೇಕಾಗುತ್ತದೆ. ನಾವು ಜಗತ್ತಿನಲ್ಲಿಯ ನಮ್ಮದಲ್ಲದ ಸಾಹಿತ್ಯ ಪ್ರಕಾರಗಳನ್ನು ಸಮರ್ಥವಾಗಿ ನಮ್ಮದನ್ನಾಗಿ ಮಾಡಿಕೊಂಡಿದ್ದೇವೆ.

ಅದಕ್ಕೆ ಕಾರಣ ಅವುಗಳ ತಲಸ್ಪರ್ಶಿ ಅಧ್ಯಯನ. ಅವುಗಳನ್ನು ಶೈಕ್ಷಣಿಕ ಪಠ್ಯಗಳಲ್ಲಿ ಅಳವಡಿಸಿರುವದು. ಪಠ್ಯಗಳನ್ನು ಅಧ್ಯಯನಕ್ಕೆ ಅನುವಾದದ ಮೂಲಕ ಸಿದ್ದಪಡಿಸಿದ್ದನ್ನು ಗಮನಿಸಬೇಕು. ಆದರೆ ಹೈದರಾಬಾದ ಕರ್ನಾಟಕದಲ್ಲಿ ನೂರಾರು ವರ್ಷಗಳ ಕಾಲ ಸಾಹಿತ್ಯಿಕ ಬಾಷೆಯಾಗಿದ್ದ ಉರ್ದುವನ್ನು ಕನ್ನಡಕ್ಕೆ ತರಲಾಗಲಿಲ್ಲ. ಇದರಿಂದ ಇದರ ತಾತ್ವಿಕ ಪರಿಚಯ ಹೊಸ ತಲೆಮಾರಿಗೆ ಆಗಿಲ್ಲ. ಈಗ ಆ ರೀತಿಯ ದೊಡ್ಡ ಯೋಜನೆಯ ಮೂಲಕ ಉರ್ದು ಗಜಲ್‌ಗಳ ಅನುವಾದ ಕಾರ್ಯ ನಡೆಯಬೇಕಿದೆ. ಅವುಗಳ ವಿವಿಧ ಮಾದರಿಗಳ ಪರಿಚಯ ಆಗಬೇಕಿದೆ. ಮುಖ್ಯವಾಗಿ ಶೈಕ್ಷಣಿಕ ಪಠ್ಯಗಳಲ್ಲಿ ಈ ಪ್ರಕಾರವನ್ನು ಅಳವಡಿಸಬೇಕಿದೆ. ಇದರಿಂದ ಹೊಸಬರು ಈ ಪ್ರಕಾರದಲ್ಲಿ ಆಸಕ್ತಿ ಬೆಳಿಸಿಕೊಳ್ಳಲು ಸಾಧ್ಯವಾಗುತ್ತದೆ.

ಅಡಿಟಿಪ್ಪಣಿಗಳು

1. ಸಂ. ಡಾ. ದಸ್ತಗಿರಿಸಾಬ್ ದಿನ್ನಿ, ಜೆ. ಎಲ್. ವೀರಣ್ಣ, ಬಿಸಿಲ ಹೂಪ್ರ. ಕನ್ನಡ ಸಾಹಿತ್ಯ ಪರಿಷತ್ತು, ರಾಯಚೂರು–2018 ಪು.45
2. ಅದೇ ಪು.44
3. ಅದೇ ಪು.44
4. ಸಂ. ಚಿದಾಂದ ಸಾಲಿ, ಕನ್ನಡ ಗಜಲ್ ಪ್ರ. ಸಾಹಿತ್ಯ ಅಕಾದೆಮಿ, ನವದೆಹಲಿ–2015 ಪು.17
5. ಸಂ. ಡಾ. ದಸ್ತಗಿರಿಸಾಬ್ ದಿನ್ನಿ, ಜೆ.ಎಲ್. ವೀರಣ್ಣ, ಬಿಸಿಲ ಹೂ ಪ್ರ. ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು–2018, ಪು.37

✠✠✠

ಪಕ್ಷನಿಷ್ಠೆ ಮತ್ತು ಪಕ್ಷಾಂತರ

ಅಜಕ್ಕಳ ಗಿರೀಶ ಭಟ್
ಬಂಟ್ವಾಳ

ನಮ್ಮ ದೇಶದ ರಾಜಕೀಯ ವಿದ್ಯಮಾನಗಳನ್ನು ಗಮನಿಸುತ್ತಾ ಬಂದವರಿಗೆ ಜನಪ್ರತಿನಿಧಿಗಳು ತಮ್ಮ ಪಕ್ಷನಿಷ್ಠೆಯನ್ನು ಬದಲಿಸುವುದು ಒಂದು ಸಾಮಾನ್ಯ ವಿದ್ಯಮಾನವೆಂದು ಗೊತ್ತಾಗುತ್ತದೆ. ಪಕ್ಷನಿಷ್ಠೆಯನ್ನು ಬದಲಾಯಿಸುವ ಪ್ರಕ್ರಿಯೆ ವಿವಿಧ ನಮೂನೆಗಳಲ್ಲಿ ನಡೆಯುವುದೂ ನಮಗೆಲ್ಲ ಗೊತ್ತು. ಪಕ್ಷಾಂತರ ನಿಷೇಧ ಕಾಯ್ದೆಯ ಹಿಡಿತಕ್ಕೆ ಸಿಗದಂತೆ ಶಾಸಕರು ಸಾಕಷ್ಟು ದೊಡ್ಡ ಒಂದು ಗುಂಪಾಗಿ ಪಕ್ಷಾಂತರ ಮಾಡುವುದು ಒಂದು ಬಗೆ. ಚುನಾವಣೆ ಹತ್ತಿರ ಬಂದಾಗ ಗಾಳಿ ಬೀಸುತ್ತಿರುವ ದಿಕ್ಕನ್ನು ಗಮನಿಸಿ ಪಕ್ಷಾಂತರ ಮಾಡುವುದು ಇನ್ನೊಂದು ಬಗೆ. ಅವಧಿ ಮುಗಿಯುವ ಮೊದಲು ತಮ್ಮ ಚುನಾಯಿತ ಸ್ಥಾನಕ್ಕೆ ರಾಜೀನಾಮೆ ನೀಡಿ ಮತ್ತೆ ಬೇರೆ ಪಕ್ಷದ ಅಡಿಯಲ್ಲಿ ಚುನಾವಣೆ ಎದುರಿಸಲು ಸಿದ್ಧರಾಗುವುದು ಇನ್ನೊಂದು ಬಗೆ.

ಇಲ್ಲಿ ನಿರ್ದಿಷ್ಟ ಸಂದರ್ಭದ ವಿಶ್ಲೇಷಣೆ ಮಾಡಲು ಅವಕಾಶವಿಲ್ಲ. ಯಾಕೆಂದರೆ, ಈ ಪಕ್ಷಾಂತರವೆಂಬ ವಿದ್ಯಮಾನದ ಬಗ್ಗೆ ಜನರ ಪ್ರತಿಕ್ರಿಯೆ ಸಾಮಾನ್ಯವಾಗಿ ಆಯಾ ಸಂದರ್ಭವನ್ನು ಅವಲಂಬಿಸಿರುತ್ತದೆ. ನಮಗೆ ಮೇಲ್ನೋಟಕ್ಕೆ ಕಾಣುವಂತೆ, 'ಎ' ಪಕ್ಷದ ಶಾಸಕರು ರಾಜೀನಾಮೆ ನೀಡಿ 'ಬಿ' ಪಕ್ಷಕ್ಕೆ ಬೆಂಬಲ ನೀಡಿದರೆ ಸಹಜವಾಗಿಯೇ 'ಬಿ' ಪಕ್ಷದ ಕಾರ್ಯಕರ್ತರು ಅಥವಾ ಆ ಕಡೆಗೆ ಒಲವುಳ್ಳವರು ಅದನ್ನು ಸರಿ ಎಂದು ಭಾವಿಸುತ್ತಾರೆ. 'ಎ' ಪಕ್ಷದವರು ಟೀಕಿಸುತ್ತಾರೆ. ಅದೇ ರೀತಿ 'ಬಿ' ಪಕ್ಷದವರು ರಾಜೀನಾಮೆ ನೀಡಿ 'ಎ' ಪಕ್ಷವನ್ನು ಬೆಂಬಲಿಸಿದರೆ 'ಎ' ಪಕ್ಷದ ಕಾರ್ಯಕರ್ತರು ಸಂತೋಷಪಡುತ್ತಾರೆ. ಇದಕ್ಕಿಂತಲೂ ಮುಖ್ಯವಾಗಿ ಗಮನಿಸಬೇಕಾದ್ದೆಂದರೆ, ಒಬ್ಬ ರಾಜಕಾರಣಿ 'ಬಿ' ಪಕ್ಷದಿಂದ 'ಎ' ಪಕ್ಷಕ್ಕೆ ಹೋದರೆ 'ಎ' ಪಕ್ಷದ ಎಲ್ಲರೂ ಸಂತೋಷಪಡುತ್ತಾರೆ ಎಂದೇನಿಲ್ಲ. ಹೀಗೆ ಪಕ್ಷಾಂತರ ಮಾಡಿ ಬಂದ ರಾಜಕಾರಣಿ ತನಗೆ ಪ್ರತಿಸ್ಪರ್ಧಿ ಎಂದು ಭಾವಿಸುವ 'ಎ' ಪಕ್ಷದ ರಾಜಕಾರಣಿಗಳು ಮತ್ತು ಅಂಥವರ ಬೆಂಬಲಿಗರು ಅಸಮಾಧಾನವನ್ನೂ ಹೊಂದಬಹುದು. ಬಹಿರಂಗ ವಿರೋಧ ಮಾಡುವುದೂ ಇದೆ. ಅದೇ ರೀತಿ ಯಾವುದೇ ಪಕ್ಷದ ಬೆಂಬಲಿಗರಿರಬಹುದು, ರಾಜಕೀಯ ವ್ಯವಸ್ಥೆಯು ಅತ್ಯಂತ ಶುದ್ಧವಾಗಿರಬೇಕು ಎಂದು ಅಪೇಕ್ಷಿಸುವವರು ಕೂಡ ಇಂಥ ಪಕ್ಷಾಂತರದ ವಿದ್ಯಮಾನಗಳನ್ನು ತಿರಸ್ಕಾರದಿಂದಲೇ ಕಾಣುತ್ತಾರೆ. ಹೀಗಾಗಿ ನಿರ್ದಿಷ್ಟ ಸನ್ನಿವೇಶಗಳ ವಿಶ್ಲೇಷಣೆ ಅಗತ್ಯವಿಲ್ಲ. ಇಲ್ಲಿ ನಿರ್ದಿಷ್ಟ ಸಂದರ್ಭದ ಬದಲಾಗಿ ರಾಜ್ಯತತ್ವಗಳ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ.

ಒಟ್ಟಿನಲ್ಲಿ, ವ್ಯಾವಹಾರಿಕ ದೃಷ್ಟಿಯಿಂದ ಅಥವಾ ತಮ್ಮ ಇಷ್ಟದ ಪಕ್ಷಕ್ಕೆ ಲಾಭ ಅಥವಾ ನಷ್ಟವಾಗುತ್ತದೆ ಎಂಬ ಕಾರಣಕ್ಕಾಗಿ ಪಕ್ಷಾಂತರ ಪ್ರಕ್ರಿಯೆಯ ಬಗ್ಗೆ ಹೀಗೆ ವಿಭಿನ್ನ ಅಭಿಪ್ರಾಯಗಳನ್ನು ಜನರು ಹೊಂದುತ್ತಾರಾದರೂ ತಾತ್ವಿಕವಾಗಿ ಶಾಸಕರು ತಮ್ಮ ಅವಧಿ ಮುಗಿಯುವ ಮೊದಲೇ ರಾಜೀನಾಮೆ ಪಕ್ಷಾಂತರದ ಉದ್ದೇಶದಿಂದ ನೀಡುವುದು ಸರಿಯಲ್ಲ

ಎಂದೇ ಬಹಳಷ್ಟು ಪ್ರಜ್ಞಾವಂತರು ಅಂದುಕೊಳ್ಳುತ್ತಾರೆ. ಕಾನೂನಿನಲ್ಲಿ ರಾಜೀನಾಮೆ ನೀಡುವುದಕ್ಕೆ ಯಾವುದೇ ಅಡ್ಡಿಯಿಲ್ಲ ಎಂಬುದು ನಿಜವೇ ಆದರೂ ಜನರ ಸಾಮಾನ್ಯ ಅಭಿಪ್ರಾಯ ಹೀಗೆಯೇ ಇರುತ್ತದೆ.

ನಾನಿಲ್ಲಿ ಕಾನೂನಿನ ಮುಖದ ಬಗ್ಗೆ ಚರ್ಚೆ ಮಾಡುತ್ತಿಲ್ಲ. ಅದೇರೀತಿ ಜನಪ್ರತಿನಿಧಿಗಳು ಅವಧಿಮಧ್ಯದಲ್ಲಿ ರಾಜೀನಾಮೆ ನೀಡಿದಾಗ ಮರುಚುನಾವಣೆಗೆ ಅನವಶ್ಯಕ ಖರ್ಚು ಬರುತ್ತದೆ ಎಂಬುದು ಕೂಡ ಪ್ರತ್ಯೇಕ ಚರ್ಚೆಯ ವಿಚಾರ. ಪ್ರಸ್ತುತ ಈ ಲೇಖನದಲ್ಲಿ ಚುನಾವಣೆಯಲ್ಲಿ ಶಾಸಕರಾಗಿ ಅಥವಾ ಒಟ್ಟಿನಲ್ಲಿ ಜನಪ್ರತಿನಿಧಿಗಳಾಗಿ ಆಯ್ಕೆಯಾದವರು ಮಧ್ಯದಲ್ಲಿಯೇ ರಾಜೀನಾಮೆ ನೀಡಿ ಪಕ್ಷನಿಷ್ಠೆಯನ್ನು ಬದಲಾಯಿಸುವ ವಿದ್ಯಮಾನದ ಬಗ್ಗೆ ಮಾತ್ರ ಚರ್ಚೆಯಿದೆ. ಈ ಪ್ರಕ್ರಿಯೆಯನ್ನು ಪ್ರಜಾಪ್ರಭುತ್ವ ವ್ಯವಸ್ಥೆಯ ಹಿನ್ನೆಲೆಯಲ್ಲಿ ಹೇಗೆ ನೋಡಬೇಕು ಎಂಬುದೇ ಈ ಲೇಖನದಲ್ಲಿ ನಾನು ಎತ್ತಿಕೊಳ್ಳುವ ಮುಖ್ಯ ಪ್ರಶ್ನೆ.

ಒಬ್ಬ ಪ್ರಜೆಗೆ ತನ್ನ ಇಷ್ಟದ ಪ್ರಕಾರ ಪಕ್ಷನಿಷ್ಠೆಯನ್ನು ಬದಲಾಯಿಸುವ ಹಕ್ಕು ಇದೆಯಲ್ಲವೆ? ರಾಜಕೀಯ ನಾಯಕರು ಕೂಡ ಪ್ರಜೆಗಳೇ ಹೌದು. ಹೀಗಾಗಿ ಅವರಿಗೂ ಸಹಜವಾಗಿ ಪಕ್ಷನಿಷ್ಠೆಯನ್ನು ಬದಲಿಸುವ ಹಕ್ಕು ಇರಲೇಬೇಕಲ್ಲವೆ? ಪಕ್ಷಾಂತರ ಮಾಡುವ ಜನನಾಯಕರು ಇಂಥ ಪ್ರಶ್ನೆಗಳನ್ನು ಕೇಳಿಯೇ ಕೇಳುತ್ತಾರೆ. ದೇಶದ ಒಬ್ಬ ಬಹುಮುಖ್ಯ ರಾಜ್ಯಶಾಸ್ತ್ರಜ್ಞರಾದ ಡಿ. ವಿ. ಗುಂಡಪ್ಪನವರು ಹೇಳುವಂತೆ ರಾಜಕಾರಣಿಗಳಿಗೂ ಅಂಥ ಸ್ವಾತಂತ್ರ್ಯವಿದೆ; ಆದರೆ ಅದು ಕೋಟುಗಳನ್ನು ಬದಲಿಸಿದಂತೆ ಆಗಬಾರದು.

ಚುನಾವಣೆಯಿಂದ ಚುನಾವಣೆಗೆ ಫಲಿತಾಂಶ ವ್ಯತ್ಯಾಸವಾಗುತ್ತದೆ ಎಂದರೆ ಮತದಾರರ ಪಕ್ಷನಿಷ್ಠೆ ಬದಲಾಗಿದೆ ಎಂದಲ್ಲವೇ? ಪ್ರಜೆಗಳ ಪ್ರತಿನಿಧಿಯಾಗಬಯಸುವವನು ಪ್ರಜೆಗಳ ನಿಷ್ಠೆ ಬದಲಾದುದನ್ನು ಅಥವಾ ಬದಲಾಗುತ್ತಿರುವದನ್ನು ಅಥವಾ ಮುಂದೆ ಬದಲಾಗುವುದನ್ನು ಗ್ರಹಿಸಿ ತನ್ನ ನಿಷ್ಠೆಯನ್ನು ಯಾಕೆ ಬದಲಾಯಿಸಬಾರದು? ರಾಜಕೀಯದಲ್ಲಿರುವವರನ್ನು ನಾಯಕರು ಅಥವಾ ಲೀಡರುಗಳು ಎಂದು ಕರೆಯುತ್ತೇವಾದರೂ ಆದರ್ಶ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಪ್ರಜೆಗಳು ಚುನಾಯಿಸುವುದು ನಾಯಕನನ್ನು ಅಲ್ಲ; ತಮ್ಮ ಪ್ರತಿನಿಧಿಯನ್ನು! ಪಂಚಾಯತ್ ಸದಸ್ಯರಿಂದ ಹಿಡಿದು ವಿಧಾನ ಸಭಾ ಸದಸ್ಯರು, ಲೋಕಸಭಾ ಸದಸ್ಯರು ಇವರನ್ನೆಲ್ಲ ನಾವು ಕರೆಯುವುದು ಜನಪ್ರತಿನಿಧಿಗಳು ಎಂದೇ ತಾನೇ? ಚುನಾವಣೆಯಲ್ಲಿ ಸ್ಪರ್ಧಿಸುವ ಅವಕಾಶ ಸಿಗುವುದು ಅದಾಗಲೇ ನಾಯಕನಾಗಿ ರೂಪುಗೊಂಡವನಿಗೇ ಇರಬಹುದು. ಪ್ರಜೆಗಳ ಸಿದ್ಧಾಂತ ಅಥವಾ ಮನೋಭಾವವನ್ನು ಬದಲಾಯಿಸುವ ಸಾಮರ್ಥ್ಯ ಕೆಲವು ನಾಯಕರಿಗೆ ಇರಬಹುದು. ಅದು ಬೇರೆ ಮಾತು. ಎಷ್ಟೆಂದರೂ ಆದರ್ಶ ಪ್ರಜಾಪ್ರಭುತ್ವದಲ್ಲಿ ಪ್ರಜೆಗಳ ಪ್ರತಿನಿಧಿ ಆಗಬೇಕಾದವನು/ಳು ಪ್ರಜೆಗಳ ನಾಡಿಮಿಡಿತದಂತೆ ತನ್ನ ನಾಡಿಮಿಡಿತವನ್ನು ಬದಲಾಯಿಸಿಕೊಳ್ಳಬೇಕಾದುದು ಕರ್ತವ್ಯವೂ ಆಗುತ್ತದೆ! ಪ್ರಜೆಗಳಿಗೆ ಚುನಾವಣೆಯಿಂದ ಚುನಾವಣೆಗೆ ಪಕ್ಷಾಂತರ ಮಾಡುವ ಹಕ್ಕು ಇರುವಾಗ ಪ್ರಜಾಪ್ರತಿನಿಧಿಯಾಗ ಬಯಸುವವನಿಗೂ ತಾತ್ವಿಕವಾಗಿ ಆ ಹಕ್ಕು ಇದ್ದೇ ಇರುತ್ತದೆ. ಹಾಗೆಂದು ಈ ಅಂಶವು ಒಮ್ಮೆ ಒಂದು ಪಕ್ಷದಿಂದ ಸ್ಪರ್ಧಿಸಿ ಚುನಾಯಿತನಾದವನು ಮಧ್ಯದಲ್ಲಿಯೇ ಇನ್ನೊಂದು ಪಕ್ಷಕ್ಕೆ ಹಾರುವುದನ್ನು ಸಮರ್ಥಿಸುವುದಿಲ್ಲ. ಆದರೆ ತನ್ನ ಸ್ಥಾನಕ್ಕೆ ರಾಜೀನಾಮೆ ನೀಡಿ ಪಕ್ಷನಿಷ್ಠೆಯನ್ನು ಬದಲಾಯಿಸುವ ಪ್ರಕ್ರಿಯೆ ಬೇರೆ ಬಗೆಯದು.

ಚುನಾಯಿತ ಜನಪ್ರತಿನಿಧಿಗಳು ಅವಧಿ ಮುಗಿಯುವ ಮುನ್ನ ರಾಜೀನಾಮೆ ಕೊಡಲು ಹಲವು ಕಾರಣಗಳಿರಬಹುದು. ಅವರಿಗೆ ತಾವು ಗೆದ್ದ ಪಕ್ಷಗಳಲ್ಲಿ ಅವರು ಅಪೇಕ್ಷಿಸುವ

ಸ್ಥಾನಮಾನ, ಅವಕಾಶ(ಅಧಿಕಾರ, ಅರ್ಥ– ಹೀಗೆ ಎಲ್ಲ ಬಗೆಯ ಅವಕಾಶಗಳು), ಗೌರವ ಇತ್ಯಾದಿ ಸಿಗಲಿಲ್ಲ ಎಂಬ ಕಾರಣವಿರಬಹುದು ಅಥವಾ ಇನ್ನೊಂದು ಪಕ್ಷಕ್ಕೆ ಹೋದಾಗ ಈಗಿರುವುದಕ್ಕಿಂತ ಹೆಚ್ಚಿನ ಸ್ಥಾನಮಾನ, ಅವಕಾಶ, ಗೌರವ ಸಿಗುತ್ತದೆ ಎಂಬ ನಿರೀಕ್ಷೆ, ಭರವಸೆ, ಆಮಿಷ ಇತ್ಯಾದಿ ಏನೇನೋ ಇರಬಹುದು. ಇಂಥ ಕಾರಣಗಳನ್ನು ನಾವು ಪರಿಭಾವಿಸುವ ದೃಷ್ಟಿ ಕೂಡ ಬಹಳ ಬಾರಿ ಸಾಪೇಕ್ಷವೇ ಆಗಿರುತ್ತದೆ. ಅಲ್ಲದೆ, ಅಂಥ ಜನಪ್ರತಿನಿಧಿಗಳ ನೈತಿಕತೆ, ಮೌಲ್ಯಗಳು– ಇವೆಲ್ಲ ಮುಖ್ಯವಾಗುತ್ತವೆ. ಅದೇನೇ ಇದ್ದರೂ ಒಂದು ಪೂರ್ವಗ್ರಹೀತವನ್ನು ಇಟ್ಟುಕೊಂಡೇ ಮುಂದುವರಿಯಬಹುದು. ಅದೇನೆಂದರೆ ಹೀಗೆ ಅರ್ಧದಲ್ಲಿ ರಾಜೀನಾಮೆ ನೀಡುವವರು ಯಾರೂ ವೈರಾಗ್ಯಮೂರ್ತಿಗಳಾಗಿರುವುದಿಲ್ಲ; ಮುಂದಿನ ಚುನಾವಣೆಯಲ್ಲಿ ಗೆದ್ದು ತಮ್ಮ ರಾಜಕೀಯ ಭವಿಷ್ಯವನ್ನು ಇನ್ನಷ್ಟು ಉಜ್ವಲಗೊಳಿಸುವ ಆಕಾಂಕ್ಷೆಯವರು; ಮತ್ತು ಅಂಥ ಭರವಸೆಯಿರುವವರು ಎಂಬುದು. ಅದರಲ್ಲೂ ಮುಖ್ಯವಾಗಿ ಅಂಥ ಭರವಸೆ ಇರಬೇಕಾದರೆ ಕೇವಲ ತಮ್ಮ ಕ್ಷೇತ್ರ ಮಾತ್ರವಲ್ಲ, ಒಟ್ಟಾರೆ ಪ್ರಜೆಗಳ ಒಲವು ಯಾವ ದಿಕ್ಕಿನಲ್ಲಿದೆ ಎಂಬ ಬಗ್ಗೆ ಅವರದೇ ಒಂದು ತೀರ್ಮಾನಕ್ಕೂ ಅವರು ಬಂದಿರುತ್ತಾರೆ. ಈ ಪೂರ್ವಗ್ರಹೀತದ ಹಿನ್ನೆಲೆಯಲ್ಲಿ, ಚುನಾಯಿತ ಪ್ರತಿನಿಧಿಗಳು ತಮ್ಮ ಅವಧಿ ಮುಗಿಯುವ ಮೊದಲೇ ರಾಜೀನಾಮೆ ನೀಡಿ ಬೇರೊಂದು ಪಕ್ಷದಿಂದ ಅಥವಾ ಬೇರೊಂದು ಪಕ್ಷದ ಬೆಂಬಲದೊಂದಿಗೆ ಮರುಚುನಾವಣೆಗೆ ತಯಾರಾಗುವುದು ತಾತ್ವಿಕವಾಗಿ 'ಪ್ರಜಾಪ್ರಭುತ್ವ' ಎಂಬ ಪರಿಕಲ್ಪನೆಗೆ ಪೂರಕವಾಗಿದೆಯೇ ಇಲ್ಲವೇ ಎಂಬುದನ್ನು ಜಿಜ್ಞಾಸೆ ಮಾಡಬೇಕಾಗಿದೆ.

ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇರುವ ಮಿತಿ ಅಥವಾ ಕೊರತೆಯ ಬಗ್ಗೆ ಜನಸಾಮಾನ್ಯರು ಮಾತನಾಡುವಾಗ ಅಥವಾ ರಾಜಕೀಯ ವಿಶ್ಲೇಷಕರ ಮಾತು–ಬರವಣಿಗೆಗಳಲ್ಲಿ ಒಂದು ಅಂಶ ಆಗೀಗ ಹಾದು ಹೋಗುವುದನ್ನು ನೀವು ಗಮನಿಸಿರಬಹುದು. ಅದೇನೆಂದರೆ, ಐದು ವರ್ಷಕ್ಕೆ ಎಂದು ನಾವು ಆರಿಸಿದ ಪ್ರತಿನಿಧಿಗಳು ಅಥವಾ ಸರಕಾರ ಸರಿಯಾಗಿ ಕೆಲಸ ಮಾಡದಿದ್ದರೆ ಅಥವಾ ಪ್ರಜೆಗಳ ಇಷ್ಟಕ್ಕೆ ವಿರೋಧವಾಗಿ ನಡೆದುಕೊಂಡರೆ, ಅಂಥ ಪ್ರತಿನಿಧಿಗಳನ್ನು ಹಿಂದಕ್ಕೆ ಕರೆಸಿಕೊಳ್ಳುವ ಅವಕಾಶ ನಮ್ಮ ವ್ಯವಸ್ಥೆಯಲ್ಲಿ ಅಥವಾ ಕಾನೂನಿನಲ್ಲಿ ಇಲ್ಲ ಎನ್ನುವುದು. ಇಂಥ, ಹಿಂದಕ್ಕೆ ಕರೆಸಿಕೊಳ್ಳುವ ಅವಕಾಶ ಇರಬೇಕಿತ್ತು ಎಂದು ಬಹಳ ಮಂದಿ ಹೇಳುವುದನ್ನು ನಾವು ಆಗಾಗ ಕೇಳುತ್ತೇವೆ.

ಈಗ ಮೇಲೆ ಹೇಳಿದ ಪೂರ್ವಗ್ರಹೀತವನ್ನು ನೆನಪು ಮಾಡಿಕೊಳ್ಳಿ. ರಾಜೀನಾಮೆ ನೀಡಿ ಇನ್ನೊಂದು ಪಕ್ಷದಿಂದ ಚುನಾವಣೆ ಎದುರಿಸಿ ಗೆಲ್ಲಲು ಬಯಸುವ ಜನಪ್ರತಿನಿಧಿ ಜನರ ಒಲವು ಸರಿಹೊತ್ತಿನಲ್ಲಿ ಯಾವ ಕಡೆಗೆ ಇದೆ ಎಂದು ಭಾವಿಸುತ್ತಾನೋ ಆ ಕಡೆಗೆ ಸರಿಯುತ್ತಾನೆ. ಅವನ ಭಾವನೆ ಸರಿಯಿರಬಹುದು, ತಪ್ಪಿರಬಹುದು. ಅವನ ಭಾವನೆ ಸರಿಯಾಗಿದ್ದರೆ ಅವನು ಮರುಚುನಾವಣೆಯಲ್ಲಿ ಗೆಲ್ಲುವ ಸಂಭವ ಇದೆ. ಒಟ್ಟಿನಲ್ಲಿ ಅವನು ಬೇರೆ ತತ್ವ ಸಿದ್ಧಾಂತಗಳುಳ್ಳ ಪಕ್ಷಕ್ಕೆ ಸೇರಿ ಗೆದ್ದರೆ ಪ್ರಜೆಗಳ ಬದಲಾದ ಒಲವಿಗೆ ಆ ಕ್ಷಣವೇ ಬೆಲೆ ಸಿಕ್ಕಿದಂತಾಯಿತು; ಅಂದರೆ ಬೇಡದ ಪ್ರತಿನಿಧಿ ಅಥವಾ ಸರಕಾರ ಅಥವಾ ತತ್ವ–ಸಿದ್ಧಾಂತದ ಬದಲಾಗಿ ಪ್ರಜೆಗಳು ತಮಗೆ ಬೇಕಾದ ತತ್ವ –ಸಿದ್ಧಾಂತವುಳ್ಳವರನ್ನು ಅಧಿಕಾರದಲ್ಲಿ ಕೂರಿಸುವ ಅವಕಾಶ ಸಿಕ್ಕಿದಂತಾಯಿತು. ಒಂದು ವೇಳೆ ತಾನು ಬೇರೆ ಪಕ್ಷಕ್ಕೆ ಹೋಗಿ ಸ್ಪರ್ಧಿಸಿದರೆ ಗೆಲ್ಲಬಹುದೆಂಬ ಪಕ್ಷಾಂತರಿ ಪ್ರತಿನಿಧಿಯ ಭಾವನೆ ತಪ್ಪಿದ್ದರೆ ಅದು ಚುನಾವಣಾರಂಗದಲ್ಲಿ ಸಿದ್ಧವಾಗುತ್ತದೆ. ಅವನು ಸೋಲುತ್ತಾನೆ. ಪಕ್ಷಾಂತರಕ್ಕೆ ಮನಸ್ಸು ಮಾಡಿದ ಅಥವಾ ಆಮಿಷಕ್ಕೆ ಒಳಗಾದ ಆ ಪ್ರತಿನಿಧಿ ಆ ಕ್ಷೇತ್ರವನ್ನು ಪ್ರತಿನಿಧಿಸುವ ಯೋಗ್ಯತೆಯನ್ನು ಕಳೆದುಕೊಂಡಿದ್ದಾನೆ

ಎಂದು ನಿರೂಪಿಸಲು ಪ್ರಜೆಗಳಿಗೂ ಅವಕಾಶ ಆದಂತಾಯಿತು. ಒಟ್ಟಿನಲ್ಲಿ ಇದೆಲ್ಲದರ ತಾತ್ಪರ್ಯವೆಂದರೆ ಆಯಾ ಕ್ಷೇತ್ರಗಳ ಪ್ರಜೆಗಳಿಗೆ ಒಂದು ಪಕ್ಷದ ಅಥವಾ ಪ್ರತಿನಿಧಿಯ ನಡೆ ಇಷ್ಟವಾಗದಿದ್ದರೆ ಹಿಂದಕ್ಕೆ ಕರೆಸಿಕೊಳ್ಳುವ ಬೇರೆ ಯಾವ ವಿಧಾನವೂ ಇಲ್ಲದಿರುವಲ್ಲಿ ಪ್ರಜೆಗಳ ಒಲವು ಅನುಸರಿಸಿ ರಾಜೀನಾಮೆ ನೀಡುವ ಪ್ರತಿನಿಧಿಗಳು ಅಂಥ ಅವಕಾಶವನ್ನು ಸೃಷ್ಟಿಸುತ್ತಾರೆ.

ಆದ್ದರಿಂದಲೇ ಪಕ್ಷಾಂತರ ನಿಷೇಧ ಕಾಯ್ದೆ ಬಂದ ನಂತರದ, ಇಂಥ ರಾಜೀನಾಮೆಗಳನ್ನು ಪ್ರಜಾಪ್ರಭುತ್ವ ವ್ಯವಸ್ಥೆಯು ಏರಿದ ಇನ್ನೊಂದು ಮೆಟ್ಟಲು ಎಂದೇ ಪರಿಗಣಿಸಬೇಕಾಗುತ್ತದೆ. ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ ಇದು ಪ್ರತಿನಿಧಿಗಳನ್ನು ಅಥವಾ ಸರಕಾರವನ್ನು ಪ್ರಜೆಗಳು ಹಿಂದಕ್ಕೆ ಕರೆಸಿಕೊಳ್ಳುವ/ ಹಿಂದಕ್ಕೆ ಕಳುಹಿಸುವ ಪರೋಕ್ಷ ವಿಧಾನವೇ ಹೌದು.

✠✠✠

ಚುಕ್ಕಾಣಿ ಇಲ್ಲದೆಯೆ
ಅಲೆಯುತಿದೆ ಹಡಗೊಂದು
ಅಲೆಯೆಳೆದು ಮುಟ್ಟಿಸಲಿ
ನೆಲಕೆಂದು ಹಾತೊರೆದು

ಭಗವತಿ ಆರಾಧನೆ ಮತ್ತು ಪ್ರಾಣಿ ಜಾನಪದ

ಅರುಣ್
ಪಿಹೆಚ್.ಡಿ. ಸಂಶೋಧನಾ ವಿದ್ಯಾರ್ಥಿ
ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ, ಮಂಗಳೂರು ವಿಶ್ವವಿದ್ಯಾಲಯ
ಮಂಗಳಗಂಗೋತ್ರಿ

ಪೀಠಿಕೆ:

ಭಾರತದ ವಿಶಿಷ್ಟ ಆರಾಧನಾ ಪ್ರಸ್ಥಾನಗಳಲ್ಲಿ ಉತ್ತರ ಕೇರಳ ಮತ್ತು ದಕ್ಷಿಣ ತುಳುನಾಡಿನಲ್ಲಿ ಕಾಣಸಿಗುವ ಭಗವತಿ ಆರಾಧನೆಯೂ ಒಂದಾಗಿದೆ. ಇದೊಂದು ಪ್ರಾಚೀನ ಜನಪದ ಶಕ್ತಿಯಾರಾಧನಾ ವಿಧಾನ. ನೂರಾರು ವರ್ಷಗಳಿಂದ ಕರಾವಳಿಯ ಜನರ ಬದುಕನ್ನು ನಿರ್ದೇಶಿಸುತ್ತ ಬಂದಿರುವ ಭಗವತಿ ಆರಾಧನೆಯ ಸಂಪ್ರದಾಯವು ಹಲವಾರು ಸಾಂಸ್ಕೃತಿಕ ಅಂಶಗಳನ್ನು ಒಳಗೊಂಡಿರುವ ವಿಲಕ್ಷಣ ಬೆಸುಗೆಯಾಗಿದೆ. "ಇದೊಂದು ಧಾರ್ಮಿಕ ರಂಗಭೂಮಿಯೂ ಆಗಿದ್ದು, ಇದರಲ್ಲಿ ಆರಾಧನಾಂಶ, ಕಲಾತ್ಮಕಾಂಶ, ಮನೋರಂಜಕಾಂಶ, ನ್ಯಾಯ ವಿತರಣಾಂಶ ಇತ್ಯಾದಿಗಳು ಸೇರ್ಪಡೆಗೊಂಡು ಇದೊಂದು ಸಂಕೀರ್ಣ ವ್ಯವಸ್ಥೆಯೇ ಆಗಿದೆ." ಇದರಲ್ಲಿ ಪ್ರಾಕೃತಿಕ ಸನ್ನಿವೇಶಗಳು, ಪ್ರಾಣಿ, ಪಕ್ಷಿ, ಸಸ್ಯಸಂಕುಲ, ವನ, ಸಾಮಾಜಿಕ ವಸ್ತುಗಳು ಇವೆಲ್ಲವೂ ನೇರವಾಗಿಯೋ, ಪ್ರತೀಕಗಳಾಗಿಯೋ ಬಳಕೆಗೊಳ್ಳುತ್ತವೆ.

ಭಗವತಿ ಆರಾಧನೆಯ ಸಾಂಸ್ಕೃತಿಕ ಪ್ರಕ್ರಿಯೆಯಲ್ಲಿ ಅಹಾರ, ಬೇಟೆ, ವಿನೋದ, ಬಲಿ, ಸಾಂಕೇತಿಕತೆ ಮುಂತಾದ ಉದ್ದೇಶಗಳಿಗಾಗಿ ಪ್ರಾಣಿಗಳನ್ನು ಉಪಯೋಗಿಸುವುದಿದೆ. "ನಿಸರ್ಗದ ಭಾಗವಾಗಿ ಬೆಳೆದ ಮಾನವನು ನಿಸರ್ಗದ ಇತರ ಪ್ರಾಣಿಗಳೊಂದಿಗೆ ಸಹಜವಾಗಿಯೇ ಭಿನ್ನನೆಲೆಗಳಲ್ಲಿ ಸಂಬಂಧವನ್ನು ಬೆಳೆಸಿಕೊಂಡಿದ್ದಾನೆ. ಸ್ನೇಹ ಮತ್ತು ವಿರೋಧದ ದ್ವಂದ್ವಾತ್ಮಕ ಸಂಬಂಧವನ್ನು ಪ್ರಾಣಿಗಳ ಜೊತೆಗೆ ಬೆಳೆಸಿಕೊಂಡ ಮನುಷ್ಯನು ಅದಕ್ಕೆ ಅನುಗುಣವಾಗಿಯೇ ತನ್ನ ಜಾನಪದದಲ್ಲಿ ಅವುಗಳನ್ನು ಕಲ್ಪಿಸಿಕೊಂಡಿದ್ದಾನೆ. ಪ್ರಾಣಿಗಳನ್ನು ಕುರಿತ ಅವನ ನಂಬಿಕೆಗಳು ವಿಭಿನ್ನ ಆಚರಣೆ ಮತ್ತು ಆರಾಧನೆಗಳ ರೂಪಗಳಲ್ಲಿ ಅಭಿವ್ಯಕ್ತಗೊಂಡಿರುವುದನ್ನು ಗಮನಿಸಬಹುದು. ಒಂದು ಅರ್ಥದಲ್ಲಿ ಮಾನವ ಜಾನಪದ ಎಂದರೆ ಪ್ರಾಣಿಗಳ ಬದುಕನ್ನು ತನ್ನೊಳಗೆ ಸೇರಿಸಿಕೊಂಡಿದ್ದೇ ಆಗಿದೆ. ಹೀಗೆ ಮಾನವನ ಸಾಂಸ್ಕೃತಿಕ ಬದುಕಿನ ಜೊತೆ ಸಂಸ್ಕಾರಗೊಂಡ ಪ್ರಾಣಿ ಬದುಕನ್ನು ನಾವು 'ಪ್ರಾಣಿ ಜಾನಪದ' ಎನ್ನುತ್ತೇವೆ."

ಭಗವತಿ ಆರಾಧನೆಯಲ್ಲಿ ಪ್ರಾಣಿಮೂಲೀಯ ದೈವಗಳು:

ಭಗವತಿ ಆರಾಧನೆಯು ಮಾತೃದೇವತೆಯ ಉಪಾಸನಾ ಪ್ರಕಾರವಾದರೂ ಮೃಗ ಸ್ವರೂಪದ ದೈವಗಳೂ ಇಲ್ಲಿ ಆರಾಧನೆಗೊಳ್ಳುತ್ತದೆ. "ಶತಮಾನಗಳ ಹಿಂದೆ ವಿಫುಲವಾಗಿ ಕಾಡುಗಳಿದ್ದ ಕಾಲದಲ್ಲಿ, ಕಾಡುಪ್ರಾಣಿಗಳ ಹಾವಳಿಯ ಹಿನ್ನೆಲೆಯಲ್ಲಿ ಕಾಡುಹಂದಿ,

ಕಾಡುಕೋಣ, ಹುಲಿಗಳ ಅಂತರ್ಯಾಮೀ ಶಕ್ತಿಗಳನ್ನು ಒಲಿಸಿ, ಒಲೈಸುವ ಅಂಗವಾಗಿ ಅವುಗಳ ದೈವೀಕರಣವಾಗಿರುವುದು ಸಹಜ." "ಇಂತಹ ಮೃಗಗಳನ್ನು ಸಹಕರಿಸಿದ ವೀರರು ತಮ್ಮ ಪ್ರತಾಪದ ನೆನಪಿಗಾಗಿ ಆಯಾ ಪ್ರಾಣಿಗಳ ವಿಗ್ರಹಗಳನ್ನು ಮಾಡಿಟ್ಟರೆಂದೂ, ಅವು ಕ್ರಮೇಣ ಕಾರಣೀಕದ್ದೆಂದು ತಿಳಿಯಲ್ಪಟ್ಟು ಪೂಜಿಸಲ್ಪಟ್ಟುವೆಂದೂ ನಂಬಲಾಗಿದೆ." ಇವುಗಳನ್ನು ಮೃಗದೇವತೆಗಳೆಂಬ ಸಂಕಲ್ಪದಲ್ಲಿ ಪೂಜಿಸಲಾಗುತ್ತದೆ. ಐವರು 'ಪುಲಿ'ದೈವಗಳಾದ ಭಗವತಿಯರು ಇಲ್ಲಿ ಮುಖ್ಯರಾಗುತ್ತಾರೆ.

ಹಿಂದೆ ಶಿವ–ಪಾರ್ವತಿಯರು 'ಬ್ರಾಂದವನಂ' ಎಂಬ ಕಾಡಿನಲ್ಲಿ ವಿಹರಿಸುವಾಗ ಸಿಂಹರಾಜವೊಂದು ಹೆಣ್ಣು ಹುಲಿಯೊಂದಿಗೆ ಮಿಥುನಗೊಳ್ಳುವುದನ್ನು ಅವರು ಕಂಡು, ಅವರಲ್ಲಿ ಮೋಹವುಂಟಾಗಿ ಮಾಯಾರೂಪದಲ್ಲಿ ಶಿವನು ಸಿಂಹವಾಗಿಯೂ, ಪಾರ್ವತಿಯು ಹೆಣ್ಣುಹುಲಿಯಾಗಿಯೂ ರೂಪತಳೆದು ಜೊತೆಗೂಡುತ್ತಾರೆ. ಪರಿಣಾಮವಾಗಿ ಹೆಣ್ಣು ಹುಲಿಯಲ್ಲಿ ಗರ್ಭನಿಂತು ಅದು ಬ್ರಾಂದಾವನದ 'ತಾತ್ತನಾರ್ ಕಲ್ಲ್' ಎಂಬ ಕೊರೆದ ಬಂಡೆಯ 'ತಾಯ್‌ಮಾಡ' ಎಂಬ ಗುಹೆಯಲ್ಲಿ ಐದು ಗಂಡು ಹುಲಿಮರಿಗಳಿಗೆ ಜನ್ಮನೀಡಿತು. ಈ ಐದು ಹುಲಿಮರಿಗಳನ್ನು 'ಪುಲಿಪೆತ್ತ ಮಕ್ಕಳೈವರ್' ಅಂದರೆ, 'ಹುಲಿ ಮಕ್ಕಳೈವರು' ಎಂದು ಕರೆಯಲಾಯಿತು.

ಸಿಂಹರೂಪಿ ಶಿವನು ಪುಲಿಕಂಡನ್ ಮತ್ತು ವ್ಯಾಘ್ರರೂಪಿಣಿ ಪಾರ್ವತಿಯು ಪುಳ್ಳಿಕರಿಂಕಾಳಿ ಭಗವತಿ ಎಂಬುದಾಗಿ ಆರಾಧನೆ ಪಡೆಯುತ್ತಾರೆ. ಐದು ಹುಲಿ ಮಕ್ಕಳಲ್ಲಿ ಹಿರಿಯವನು ಪುಲಿಯೂರ ಕಣ್ಣನ್ ಅಥವಾ ಪುಲ್ಲೂರ್ಣನ್, ಆನಂತರದವರಿಗೆ ಕಾಳಪುಲಿಯನ್, ಪುಲಿಮಾರುತನ್, ಮಾರಪುಲಿಯನ್, ಕಂಡಪುಲಿಯನ್ ಎಂಬ ಹೆಸರುಗಳಿವೆ. ಐದು ಹುಲಿಮರಿಗಳನ್ನು ಏಕಕಾಲದಲ್ಲಿ ಪ್ರಸವಿಸಿದಾಗ ಪುಳ್ಳಿಕರಿಂಕಾಳಿ ಭಗವತಿಯ ಬಾಣಂತಿತನವನ್ನು ನಿರ್ವಹಿಸಲು ಮಹಾವಿಷ್ಣುವಿನ ಪತ್ನಿ ಲಕ್ಷ್ಮೀದೇವಿಯು ಮಾಯಾರೂಪದಲ್ಲಿ ಹೆಣ್ಣುಹುಲಿಯಾಗಿ ಹುಟ್ಟಿ ಬರುತ್ತಾಳೆ. ಅವಳ ಆರೈಕೆಯಿಂದ ಸಂತೃಪ್ತಳಾದ ಭಗವತಿಯು, ಅವಳನ್ನು ತನ್ನ ಎಳೆಯ ಮಗಳಾಗಿ ಸ್ವೀಕರಿಸಿ, 'ಪುಲಿಯೂರ್ ಕಾಳಿ' ಅಥವಾ 'ಪುಲ್ಲುರಾಳಿ' ಎಂಬ ಹೆಸರಿನಿಂದ ಕರೆದಳು.

ಐವರ್ ಭಗವತಿಯರ ಹುಟ್ಟಿನ ಬಗೆಗೆ 'ತೋಟ್ಟಂ' ಎಂದು ಕರೆಯಲಾಗುವ ಜಾನಪದ ಕಥನ ಕಾವ್ಯಗಳು ಹೇಳುವ ಈ ಹಿನ್ನೆಲೆಯನ್ನು ಪ್ರಾಣಿ ಜಾನಪದದ ಆಧಾರದಿಂದಲೇ ಕಟ್ಟಲಾಗಿದೆ ಎನ್ನಬಹುದು. ಉಭಯ ಜಾತಿಯ ವನ್ಯಮೃಗಗಳ ಅಸ್ವಾಭಾವಿಕ ಮಿಲನ, ಕ್ರೂರ ಜಂತುಗಳಾದರೂ ಹುಲಿಗಳ ಮಧ್ಯೆ ತಾಯಿ–ಮಕ್ಕಳ ಬಾಂಧವ್ಯ ಕಲ್ಪನೆ, ಮರಿಗಳ ಪಾಲನೆಗೆ ಅದೇ ಜಾತಿಯ ಇನ್ನೊಂದು ಮೃಗದ ನೆರವು ಮತ್ತು ಆ ಹುಲಿಯನ್ನು ಎಳೆಯ ಮಗಳಂತೆ ಪರಿಗಣಿಸಿದ ಭಾವನಾತ್ಮಕತೆ ಇವೆಲ್ಲವೂ ಮನುಷ್ಯ ಮನೋಧರ್ಮವನ್ನು ಪ್ರಾಣಿ ಜಗತ್ತಿನಲ್ಲಿ ಕಂಡುಕೊಂಡ ರೀತಿಯಾಗಿದೆ.

ಈ ಐತಿಹ್ಯದ ಮುಂದಿನ ಭಾಗದಲ್ಲಿ ಈ ಹುಲಿಮಕ್ಕಳು ರಾಮಪುರಂನ 'ಕುರುಬ್ರಾದಿ' ಅರಸನೊಂದಿಗೆ ಹೋರಾಟ ನಡೆಸುವ, ಅವನ ಬಣವನ್ನು ಮಣಿಸಿ ಶರಣಾಗಿಸುವ ಮತ್ತು ತಮಗೆ ಬೇಕಾದ ಸ್ಥಾನ–ಮಾನಗಳನ್ನು ಗಳಿಸುವ ಕಥೆಯೂ ಬರುತ್ತದೆ. ಜಾನಪದದ ನಾಯಕ ಪಾತ್ರಗಳು ಅರಸೊತ್ತಿಗೆಯೊಂದಿಗೆ ಅಥವಾ ಪುರೋಹಿತಶಾಹಿ ವರ್ಗದೊಂದಿಗೆ ಮುಖಾಮುಖಿಯಾಗುವುದು ಜಾನಪದ ಕಥೆಗಳ ಸಾಮಾನ್ಯ ಅಂಶವಾದರೂ, ಬಹಳ ಮುಖ್ಯವಾದ ಭಾಗವೆನ್ನಬೇಕು. ಇದು ವನಸಂಸ್ಕೃತಿ ಮತ್ತು ನಾಗರಿಕ ಸಂಸ್ಕೃತಿಗಳೆರಡರ

ಸಾಂಸ್ಕೃತಿಕ ಮುಖಾಮುಖಿ, ಸಂಘರ್ಷದ ನೆಲೆಯನ್ನು ಗುರುತಿಸುವಲ್ಲೂ ಇದೊಂದು ಪ್ರಮುಖ ಅಂಶವೆನ್ನಬಹುದು.

ತುಳುನಾಡಿನ ಮಂಗಳೂರಿನ ಜೆಪ್ಪು ಕುಡುಪ್ಪಾಡಿ ಎಂಬಲ್ಲಿಂದ ಬಂದ 'ಪಿಲಿಭೂತ' ಎಂಬ ವೈಷ್ಣವಾಂಶ ದೈವವು ಕೋಲತ್ತುನಾಡಿನ ನೀಲೇಶ್ವರ ಕೋಟೆಪುರ ಎಂಬಲ್ಲಿ ನೆಲೆಸಿ 'ನರಸಿಂಹಮೂರ್ತಿ' ಎಂಬ ಹೆಸರಿನಿಂದ ಆರಾಧನೆ ಪಡೆಯುತ್ತದೆ. ಭಗವತಿಯರೊಂದಿಗೆ ಪುಲಿಚ್ಚೇಕವನ್ ಎಂಬ ಹುಲಿಯ ರೂಪದ ವೀರಭದ್ರನ ಆರಾಧನೆಯೂ, ಪಂಜುರ್ಲಿ ಎಂಬ ಕಾಡುಹಂದಿಯ ರೂಪದ ತುಳು ಮೂಲದ ದೈವದ ಆರಾಧನೆಯೂ ನಡೆಯುತ್ತದೆ.

ಪ್ರಾಣಿಮೂಲೀಯ ದೈವಗಳನ್ನು "ಅಲೌಕಿಕ ನೆಲೆಯಲ್ಲಿ ಆರಾಧಿಸುವುದು ಮನುಷ್ಯ ಈ ಪ್ರಾಣಿಗಳ ಮೇಲೆ ಸ್ಥಾಪಿಸಲು ಬಯಸಿದ ಯಾಜಮಾನ್ಯದ ಒಂದು ರೂಪ ಎಂದು ಹೇಳಬಹುದು. ಆರಾಧನೆಯ ಮೂಲಕ ಪ್ರಾಣಿಗಳನ್ನು ಸಂಪ್ರೀತಗೊಳಿಸುವುದು ಎಂದರೆ ಇದನ್ನು ನಡೆಸುವವನು ಮನುಷ್ಯನಾದ ಕಾರಣ ಆತ ಪ್ರಾಣಿಗಳಿಂದ ಶ್ರೇಷ್ಠನಾಗಿ ಕಂಡು ಬರುತ್ತಾನೆ. ಆದುದರಿಂದಲೇ, ಪ್ರಾಣಿಗಳ ಆರಾಧನೆ ಎನ್ನುವುದು ಕೃಷಿಸಂಸ್ಕೃತಿಯ ತಾತ್ವಿಕತೆಯ ಒಂದು ಭಾಗವಾಗಿ ಕಂಡುಬರುತ್ತದೆ. ಆರಾಧನೆಯ ಮೂಲಕ ತನ್ನ ಕೃಷಿಗೆ ಮಾರಕವಾಗುವ ಈ ರೀತಿಯ ದುಷ್ಟ ಶಕ್ತಿಗಳನ್ನು ನಿಯಂತ್ರಿಸುವುದು ಮಾತ್ರವಲ್ಲದೆ ಆ ಮೂಲಕವಾಗಿ ಕೃಷಿಯಲ್ಲಿ ತನ್ನ ಉತ್ಪಾದನೆಯನ್ನು ಹೆಚ್ಚು ಮಾಡುವುದಕ್ಕಾಗಿ ಮಾಡಿದ ತಂತ್ರ ಇದು ಎನ್ನಬಹುದು".

ಭಗವತಿ ಆರಾಧನೆಯಲ್ಲಿ ಪ್ರಾಣಿ ಬೇಟೆ:

ತುಳುನಾಡಿನಲ್ಲಿ ಆರಾಧನೆಯ ಭಾಗವಾಗಿ ಪ್ರಾಣಿ, ಮೀನುಗಳನ್ನು ಬೇಟೆಯಾಡುವ ಸಂಪ್ರದಾಯವಿದೆ. ಭೂಮಿಯಲ್ಲಿ ಬೆಳೆಯಬಹುದಾದ ಬೆಳೆಗಳಿಗೆ ಕಾಡುಪ್ರಾಣಿಗಳಿಂದ ಒದಗಬಹುದಾದ ತೊಂದರೆಯನ್ನು ಮುಂಚಿತವಾಗಿಯೇ ನಿಗ್ರಹಿಸಿಕೊಳ್ಳುವುದಕ್ಕಾಗಿ ಕೆಡ್ಡಸದಂದು ಬೇಟೆ ಮಾಡಬೇಕೆಂಬ ನಿಯಮ ರೂಪಿತವಾಗಿರುವುದನ್ನೂ ನೋಡಬಹುದು. ಭೂತಾರಾಧನೆಯಲ್ಲಿ 'ಬೋಂಟೆ ದೇರುನೆ' (ಬೇಟೆಗೆ ಹೋಗುವುದು) ಎಂಬುದೂ ಒಂದು ಆರಾಧನಾ ಕ್ರಮವಾಗಿದೆ.

ಭಗವತಿ ಆರಾಧನೆಯಲ್ಲೂ ಬೇಟೆ ಸಂಸ್ಕೃತಿಯು ಬೇರೆ ಬೇರೆ ನೆಲೆಗಳಲ್ಲಿ ಪ್ರಕಟಗೊಳ್ಳುವುದನ್ನು ಗಮನಿಸಬಹುದು. "ಒಂದು ಕಾಲಘಟ್ಟದಲ್ಲಿ ವೃತ್ತಿಯಾಗಿದ್ದ, ಬದುಕಾಗಿದ್ದ ವಿಧಾನವೊಂದು ಆರಾಧನೆಯಾಗಿ ಅಥವಾ ಅದರ ಭಾಗವಾಗಿ ಉಳಿದು ಬಂದಿರುವ ಉದ್ದೇಶ ಸ್ಪಷ್ಟ. ಬೇಟೆಯನ್ನು ಅಭಿನಯಿಸಿ, ಆರಾಧಿಸಿ, ಅನುಸರಿಸಿ ತೋರಿಸುವುದರಿಂದ, ಅದೊಂದು ಪಳೆಯುಳಿಕೆಯಾಗಿ ಕಳೆದು ಹೋದ ಕಾಲದ ಚಾರಿತ್ರಿಕ ಕಾಲಘಟ್ಟದ ಜೀವನ ವಿಧಾನವನ್ನು ತೋರಿಸುತ್ತದೆ.

ಐವರ್ ಪುಲಿ ಭಗವತಿಯರ ಆರಾಧನೆಯಲ್ಲಿ ಬಳಕೆಯಾಗುವ ಬಿಲ್ಲು, ಬಾಣ, ಶೂಲ, ಬೆತ್ತ, ಗುರಾಣಿ ಮೊದಲಾದ ಆಯುಧ ಪರಿಕರಗಳು ಬೇಟೆಗಾರಿಕೆಯ ಸಂಕೇತಗಳೆನ್ನಬಹುದು. ಕೇರಳದ ವಯನಾಡ್ ಕುಲವನ್, ಕಂಡಕೇಳನ್ ಮುಂತಾದ ದೈವಗಳು ಉತ್ಸವದ ಭಾಗವಾಗಿ ಬೇಟೆಗೆ ಹೋಗಿ, ಮೃಗಗಳನ್ನು ಹಿಡಿದು ತರುವ ಕ್ರಮವಿದೆ. ಭಗವತಿಯರು ಬಳಸುವ ಗುರಾಣಿ ಮತ್ತು ತಿರುವಾಯುಧಗಳ ರಚನೆಯೂ ಬೇಟೆಯ ಉದ್ದೇಶವಾಗಿಯೇ ಸೃಷ್ಟಿಯಾಗಿದೆ ಎಂಬ ಅಭಿಪ್ರಾಯವೂ ಇವೆ. ಭಗವತಿಯರ ಜೊತೆಯಿರುವ ಪುರುಷ

ದೈವಗಳು ಬಿಲ್ಲು–ಬಾಣಗಳನ್ನು ಹಿಡಿದುಕೊಂಡು, ಕ್ಷೇತ್ರಕ್ಕೆ ಪ್ರದಕ್ಷಿಣೆ ಬರುತ್ತಾ, ಮಧ್ಯೆ 'ಕಾಲಾಟ' ಎಂಬ ವಿಧಿಯನ್ನು ನಡೆಸಿಕೊಡುತ್ತದೆ. ಈ ಕಾಲಾಟದ ನರ್ತನ ಸ್ವರೂಪ ಬೇಟೆಯ ಮೃಗಕ್ಕೆ ಹೊಂಚು ಹೂಡಿ ಆಕ್ರಮಣ ಮಾಡುವ ರೀತಿ ಮತ್ತು ಅವು ತಪ್ಪಿಸಿಕೊಂಡಾಗ ದಿಕ್ಕುಗಳನ್ನು ಬದಲಿಸುವ ರೀತಿಯಲ್ಲೇ ಮೂಡಿಬರುತ್ತದೆ. ಭಗವತಿಯರನ್ನು 'ತೆಯ್ಯಂ' ರೂಪದಲ್ಲಿ 'ಕಟ್ಟಿಯಾಡುವ' ಹಂತದಲ್ಲೂ ಬಿಲ್ಲಿಗೆ ಬಾಣವನ್ನು ಹೂಡಿ ಪ್ರಯೋಗಿಸುವಂತೆ, ಅಭಿನಯಿಸುವುದಿದೆ. ಬಾಣವನ್ನು ಬೀಸುತ್ತಾ ಬೇಟೆ ಹುಡುಕಾಡುವಂತೆ ನಟಿಸಲಾಗುತ್ತದೆ. ತೀವ್ರಗತಿಯ ಕುಣಿತದಲ್ಲೂ ಆಕ್ರಮಣದ ಬಿರುಸಿರುತ್ತದೆ.

ಭಗವತಿಯರು ಸ್ಥಾನದ ಎದುರಿಗೆ ಬಂದೊಡನೆ 'ಇರಿಪ್ಪು' ಎನ್ನುವ ಪೀಠದ ಮೇಲೆ ಇರಿಸಿದ ಜೋಡು ತೆಂಗಿನಕಾಯಿಗಳ ಸುತ್ತಲೂ ಆವೇಶದ ಕುಣಿತವನ್ನು ತೋರಿಸುವುದಿದೆ. ಆ ತೆಂಗಿನ ಕಾಯಿಗಳು ಬೇಟೆಯ ಪ್ರಾಣಿಗಳ ಪ್ರತೀಕ. ಸುತ್ತಲೂ ಕುಣಿಯುವ ವೇಳೆಗೆ ಅದರ ಕಡೆಗೆ ದೃಷ್ಟಿನೆಟ್ಟು ಅಬ್ಬರಿಸುವುದು, ಆಂಗಿಕವಾಗಿ ಆಕ್ರಮಿಸುವಂತೆ ಅಭಿನಯಿಸುವುದು, ವಿಧವಿಧದ ಬಿರುಸಿನ ಹೆಜ್ಜೆಗಳನಿಡುತ್ತಾ ಕುಣಿದಾಡುವುದು ಇವೆಲ್ಲವೂ ಬೇಟೆಯೊಂದರ ಮೇಲೆ ದಾಳಿ ಮಾಡುವ ಸಂದರ್ಭವನ್ನೇ ಪುನರಾಭಿನಯಿಸುವುದಾಗಿದೆ. ಕುಣಿತದ ಕೊನೆಗೆ ಹಾರಿ ಬಂದು ತೆಂಗಿನಕಾಯಿಗಳನ್ನು ಒಡೆದು ಚೂರಾಗಿಸುವುದು ಬೇಟೆಯನ್ನು ಅಡಿಸಿ, ಮರುಳುಗೊಳಿಸಿ, ದಿಕ್ಕೆಡಿಸಿ, ಕೊನೆಗೆ ಹೊಡೆದುರುಳಿಸುವ ಕೌಶಲ್ಯವನ್ನೇ ಅಭಿನಯಿಸಿ, ತೋರಿಸುತ್ತದೆ.

ಪಾಡಾರಕುಳಂಗರ ಭಗವತಿಯಲ್ಲಿ ವೀರಪುತ್ರನೆಂಬ ಸಹದೈವವು ಆಯುಧ ಪರಿಕರ, ಅಲಂಕರಣದ ಹಿನ್ನೆಲೆಯಿಂದ ಬೇಟೆಗಾರನ ಸಾಂಪ್ರದಾಯಿಕ ಸ್ವರೂಪದಲ್ಲಿರುವುದನ್ನು ಕಾಣಬಹುದು. ಅಲ್ಲದೆ, 'ವೇಟಕ್ಕೊರುಮಗನ್' ಅಥವಾ 'ವೇಟಕ್ಕಾರೇಶ್ವರನ್' ಎಂಬ ದೈವವೂ ಶಿವನ ಕಿರಾತರೂಪದ ದೈವವಾಗಿದ್ದು, ಈ ದೈವವನ್ನು 'ಕಟ್ಟಿಯಾಡುವ' ವೇಳೆಗೆ ಬೇಟೆಯ ಸಂದರ್ಭವನ್ನು ಅಭಿನಯಿಸುವುದಿದೆ. ಐವರ್ ಭಗವತಿಯರಲ್ಲಿ ಒಂದಾಗಿರುವ 'ಕಾಳಮಲಿಯನ್' ಎಂಬ ದೈವವು 'ತೀಯಂಬು'(ಅಗ್ನಿಬಾಣ)ವನ್ನು ಪ್ರಯೋಗಿಸುವ ಸಂಪ್ರದಾಯವಿದ್ದು, ಇದೂ ಬೆಂಕಿಯ ಬಾಣಗಳನ್ನು ಬಳಸಿಕೊಂಡು, ಬೇಟೆಯನ್ನಾಡುವ ಪ್ರಾಚೀನ ಪದ್ಧತಿಯನ್ನು ತೋರಿಸುತ್ತದೆ.

ಭಗವತಿ ಆರಾಧನೆಯಲ್ಲಿ ಪ್ರಾಣಿ ಬಲಿ :

"ಬಲಿ ಎಂಬುದಕ್ಕೆ ಒಂದು ಪ್ರಾಣಿಯನ್ನು ಅಥವಾ ಒಂದು ವಸ್ತುವನ್ನು ಅಲೌಕಿಕ ಶಕ್ತಿಯೊಂದಕ್ಕೆ ಅರ್ಪಿಸುವುದು ಎಂಬ ಕಲ್ಪನೆಯಿದೆ. ಸಮುದಾಯದ ಭಾಗವೇ ಆದ ಮನುಷ್ಯ ಅಥವಾ ಪ್ರಾಣಿಯನ್ನು ಉದಾತ್ತೀಕರಣದ ನೆಲೆಯಲ್ಲಿ ಕೊಲ್ಲುವಿಕೆಯ ಮೂಲಕ ಅಲೌಕಿಕ ಶಕ್ತಿಗೆ ಅರ್ಪಿಸಿ ಅಲೌಕಿಕ ಶಕ್ತಿ ಮತ್ತು ಮನುಷ್ಯರ ನಡುವೆ ಸಂಬಂಧವನ್ನು ಸ್ಥಾಪಿಸುವುದೇ ಈ ಕ್ರಿಯೆಯ ಮುಖ್ಯ ನೆಲೆಯಾಗಿದೆ. ಇದು ಕೇವಲ ಪ್ರಾಣಿಗೆ ಮಾತ್ರ ಅನ್ವಯಿಸದೆ ಪ್ರಾಣರಹಿತ ವಸ್ತುವಿಗೂ ಅನ್ವಯಿಸುತ್ತದೆ."

ಭಗವತಿ ಆರಾಧನೆಯಲ್ಲಿ ಸಾಂಕ್ರಮಿಕ ರೋಗಗಳಾದ ಪ್ಲೇಗು, ಸಿಡುಬು, ಕಾಲರಾ, ಬರ, ನೈಸರ್ಗಿಕ ದುರಂತಗಳು, ಅನಾವೃಷ್ಟಿ, ಅತಿವೃಷ್ಟಿ ಮುಂತಾದ ಕಾರಣಗಳಿಗಾಗಿ ಪ್ರಾಣಿಬಲಿ ನಡೆಯುತ್ತದೆ. ರಕ್ತರಹಿತ, ರಕ್ತಸಹಿತ ಹೀಗೆ ಎರಡೂ ರೀತಿಗಳಲ್ಲಿ ಬಲಿ ಅರ್ಪಿಸುವುದಿದೆ. ಕೋಣ, ಆಡು, ಕುರಿ, ಕೋಳಿ, ಹಂದಿ ಮುಂತಾದವುಗಳನ್ನು ಈ 'ಬಲಿಕ್ರಿಯೆ'ಗಾಗಿ

ಬಳಸುತ್ತಾರೆ.

ಭಗವತಿ ಆರಾಧನೆಯಲ್ಲಿ ಉತ್ಸವದ ಕೊನೆಯಲ್ಲಿ ನಡೆಯುವ 'ಬಡಕಂಬಾದಲ್' ಎಂಬ ವಿಧಿಯು ಪ್ರಧಾನವಾಗಿ ಈ ಬಲಿಕ್ರಿಯೆಗೆಂದೇ ಮೀಸಲು. ಅಲ್ಲಿ ಭಗವತಿಯರ ವೀರಗಾಥೆಗಳನ್ನು ರಾಗಬದ್ಧವಾಗಿ ಹಾಡುತ್ತಾರೆ. ಆಗ ಭಗವತಿಯರು ಆವೇಶಗೊಂಡು ತಮ್ಮ ಪ್ರತಾಪಗಳನ್ನು ತೋರಿಸುತ್ತಾರೆ. ನಂತರ ಹತ್ತಾರು ಕೋಳಿಗಳನ್ನು ಕಡಿದು ನಿರ್ಮಿಸಿದ ಬಲಿಯ ರಚನೆಗೆ ರಕ್ತ ತರ್ಪಣ ನೀಡುತ್ತಾರೆ.

ಚೀರುಂಭ ಭಗವತಿಯ ಉತ್ಸವದಲ್ಲಿ ಇದು ದಂಡರಾಜಾವು ಎಂಬ ಸಹದೈವದ ಮುಂದೆ ನಡೆಯುತ್ತದೆ. ಮಂಜೇಶ್ವರದ 'ಕನಿಲ' ಎಂಬಲ್ಲಿ ಚೀರುಂಭ ಭಗವತಿಯರಿಗೆ ನವರಾತ್ರಿಯ ಕೊನೆಯ ದಿನದಂದು ಹತ್ತಾರು ಕುರಿಗಳನ್ನು ಬಲಿ ನೀಡಲಾಗುತ್ತದೆ. ಆಗ ಭಗವತಿಯು ಭದ್ರಕಾಳಿಯ ಸ್ವರೂಪದಲ್ಲಿರುತ್ತಾಳೆ ಎಂಬುದಾಗಿಯೂ, ಕುರಿಬಲಿಯ ಬಳಿಕ ಆ ಸ್ಥಳದತ್ತ ಯಾರೂ ತೆರಳಬಾರದೆಂಬುವುದಾಗಿಯೂ ಜನಪದರಲ್ಲಿ ನಂಬಿಕೆಯಿದೆ.

ಪುಲಿಕರಿಂಕಾಳಿ ಭಗವತಿಗೆ ಬಾಳೆಹಣ್ಣು, ತಾಂಬೂಲ, ತೆಂಗಿನಕಾಯಿಗಳ ರೂಪದಲ್ಲಿ ದೇವಕ್ರಿಯೆಯೆ ಆಹಾರ ಅರ್ಪಿಸುವ ಸಂಪ್ರದಾಯವಿದ್ದರೂ, ಆಹಾರ ಸ್ವೀಕರಿಸುವ ವೇಳೆಗೆ ಮುಚ್ಚಿದ ಬಾಳೆಯೆಲೆಯನ್ನು ಹರಿದಾಡುವುದು, ಬಾಳೆಹಣ್ಣುಗಳ ಸಿಪ್ಪೆಗಳನ್ನು ಸುಲಿಯುವ ಸಂದರ್ಭದಲ್ಲಿ ಕಲಾವಿದನು ಮಾಡುವ ಮುಖಾಭಿನಯಗಳು ಮೂಲತಃ ಬೇಟೆಯ ಫಲವನ್ನು ಉಣ್ಣುವ ಹಂತವಾಗಿದ್ದು, ನಂತರ ವೈದಿಕತೆಯ ಪ್ರಭಾವದಿಂದ ಬದಲಾಗಿರಬಹುದು ಎಂಬ ಅಭಿಪ್ರಾಯಕ್ಕೆ ಬರಬಹುದು.

ಹಿಂದೆ ಭಗವತಿಯರಿಗೆ ಕೋಣಬಲಿ, ಹಂದಿಬಲಿಗಳಿದ್ದವು. ಈಗ ಕಾನೂನು ಕಟ್ಟಳೆಗಳಿಂದಾಗಿ ಇವು ರೂಪಾಂತರಗೊಂಡಿವೆ. ಚೀರುಂಭ ಭಗವತಿಗೆ 'ಕಳಿಯಾಟ' ಎಂಬ ಉತ್ಸವವನ್ನು ನೀಡಬೇಕಾದರೆ, 'ನರಬಲಿ'ಯನ್ನು ಅರ್ಪಿಸಬೇಕೆಂಬ ನಂಬಿಕೆಯೂ ಇದೆ. ಈ ಕಾರಣದಿಂದಲೇ ಈ ಉತ್ಸವ ಕಾಣಲು ಅಸಾಧ್ಯ ಎನ್ನಲಾಗಿದೆ.

ಭಗವತಿ ಆರಾಧನೆಯಲ್ಲಿ ಪ್ರಾಣಿ ಸಂಕೇತಗಳು:

ಕುಲಲಾಂಛನ ಪೂಜೆ ಎಂಬುದು ಭಾರತದ ಅತ್ಯಂತ ಪ್ರಾಚೀನವಾದ ಪದ್ಧತಿ. ತಮಗೆ ಉಪಟಳ ಕೊಡುವ, ಎದುರಿಸಲಾಗದ **"ಕ್ರೂರ ಪ್ರಾಣಿಗಳ ಅಂತರ್ಯಾಮೀ ಶಕ್ತಿಗಳನ್ನು** ಪೂಜಿಸುವುದೂ, ನಿರ್ದಿಷ್ಟ ಪ್ರಾಣಿಗಳ ಕೆಲವೊಂದು ಸ್ವರೂಪ, ಸ್ವಭಾವಗಳನ್ನು ತಮ್ಮ ವ್ಯಕ್ತಿತ್ವಕ್ಕೆ ಆರೋಪಿಸಿಕೊಂಡು ಅಭಿನಯಿಸುವುದೂ ವಿವಿಧ ಸಮಾಜಗಳಲ್ಲಿ ರೂಢವಾಗಿದ್ದ ವಿಚಾರ**".**

ಭಗವತಿ ಆರಾಧನೆಯಲ್ಲೂ ಪ್ರಾಣಿ ಸಂಕೇತವುಳ್ಳ ದೈವಗಳೂ, ದೈವ ಪರಿಕರಗಳೂ ಇವೆ. ಹುಲಿಯಂಥ ಘೋರಮೃಗದ ಪ್ರತೀಕವು ವೀರಾರಾಧನೆಗೆ ಪೂರಕವೆನ್ನಬಹುದು. ಈ ಹುಲಿ ಭಗವತಿಯರ ವಿಗ್ರಹವು ವ್ಯಾಘ್ರರೂಢವಾಗಿದ್ದು, ಕೋರೆಹಲ್ಲುಗಳೆರಡನ್ನು ಇಳಿಬಿಟ್ಟ ಮುಖಭಾಗವು ಭಯಾನಕವಾಗಿದ್ದು ಹುಲಿ ಸ್ವರೂಪದಲ್ಲೇ ಇರುತ್ತದೆ. ಚೀರುಂಭ, ಪಾಡಾರಕುಳಂಗರ ಮತ್ತು ಪುದಿಯ ಭಗವತಿಯರು ಸಿಂಹವನ್ನು ತಮ್ಮ ವಾಹನವನ್ನಾಗಿ ಇರಿಸಿಕೊಂಡಿರುತ್ತಾರೆ. ಚೀರುಂಭ ಭಗವತಿಯು ಸಪ್ತಸಾಗರವನ್ನು ದಾಟಿ ಭೂಲೋಕಕ್ಕೆ ಬರುವ ವೇಳೆಗೆ ಸಮುದ್ರ ಮಧ್ಯೆ ಎದುರಾದ 'ಶಂಖಿಪಾಲ' ಎಂಬ ಸರ್ಪದೊಂದಿಗೆ ಕಾದಾಡಿ, ಮಣಿಸಿದ ಹಿನ್ನೆಲೆಯಿಂದ ಆಕೆಯ ವಿಗ್ರಹದ ಕಾಲಡಿಯಲ್ಲಿ ಸರ್ಪದ ಹೆಡೆಯ ರಚನೆಯಿರುತ್ತದೆ. ಇದೇ ಕಾರಣಕ್ಕೆ ಸರ್ಪದ ಚಿತ್ರವುಳ್ಳ ಮಂಡಲವನ್ನು ರಚಿಸಿ, ಭಗವತಿ

ಪಾತ್ರಿಗಳು ಅದನ್ನು ತುಳಿದು ಅಳಿಸುವ ಸಂಪ್ರದಾಯವೂ ನಡೆಯುತ್ತದೆ. ಆಯುಧಗಳಲ್ಲೂ ನಾಗಚಿಹ್ನೆಗಳಿರುತ್ತವೆ.

ಆರ್ಯಕರ, ಯಕ್ಷಿ, ಪುಲ್ಲುರಾಳಿ ಭಗವತಿಯರ ಕ್ಷೇತ್ರಗಳು ಹೆಚ್ಚಾಗಿ ಕಾಡಿನಂತಹ ಪರಿಸರದ ಮಧ್ಯೆಯಿದ್ದು, ಇಲ್ಲಿ ವಿಶೇಷ ದಿನಗಳನ್ನು ಹೊರತುಪಡಿಸಿ, ಉಳಿದ ದಿನಗಳಲ್ಲಿ ಹುಲಿಗಳು ಓಡಾಡಿಕೊಂಡಿರುತ್ತವೆ. ಸ್ಥಾನದ ಅಂಗಣದೊಳಗೆ ಹುಲಿಯ ಹೆಜ್ಜೆಗುರುತುಗಳಿರುತ್ತವೆ ಎಂಬ ನಂಬಿಕೆ ಇದೆ. ಕೆಲವು ಸ್ಥಾನಗಳಲ್ಲಿ ಒಂದು ಅಥವಾ ಎರಡು ಹುಲಿಗಳ ಮರದ ಬಂಡಿಗಳಿದ್ದು, ಅವುಗಳಿಗೂ ಪೂಜೆ ಸಲ್ಲುತ್ತದೆ. ಆ ಬಂಡಿಗಳನ್ನು ಏರಿ ಭಗವತಿಯರು ಸ್ಥಾನಕ್ಕೆ ಪ್ರದಕ್ಷಿಣೆ ಬರುವ ಕ್ರಮವೂ ಉತ್ಸವದಲ್ಲಿರುತ್ತದೆ. ಭಗವತಿಯರ ಅಲಂಕರಣ, ವೇಷಭೂಷಣಗಳೂ ಅಷ್ಟೆ. ಮೈಯೆಲ್ಲ ಹತ್ತಿಯ ರೋಮ, ಕೈಯುಗುರು, ಬಣ್ಣದ ಪಟ್ಟೆಗಳು, ಚುಕ್ಕಿಗಳು, ಹಳದಿಯ ವರ್ಣ, ಮೀಸೆ–ದಾಡಿಗಳೆಲ್ಲವೂ ಹೆಬ್ಬುಲಿಯ ಸ್ವರೂಪವನ್ನೇ ತೋರಿಸುತ್ತದೆ.

ಭಗವತಿಯರ ಸಹದೈವಗಳಲ್ಲಿ ಹಂದಿ ಮುಖ, ಸಿಂಹ ಮುಖಗಳಿರುವ ದೈವಗಳೂ ಇವೆ. ಪ್ರಾಣಿ ಸಂಕೇತಗಳು ವಿಜಯದ ಚಿಹ್ನೆಯಾಗಿಯೂ ಕ್ರೌರ್ಯದ ಪ್ರತೀಕಗಳಾಗಿಯೂ ಅಮಾನುಷತೆಯ ರೂಪವಾಗಿಯೂ ಪ್ರಕಟಗೊಳ್ಳುತ್ತವೆ.

ಸಮಾರೋಪ

"ಧರ್ಮಸ್ಥಿರಗೊಳ್ಳುವ ವೇಳೆ ಅನಿವಾರ್ಯವಾದ ಹಲವು ಕಾರಣಗಳಿಂದ ಒಂದು ಜಾನಪದವನ್ನು ನಿರಾಕರಿಸುವಾಗ ಅದು ನೆರವೇರಿಸುವ ಧರ್ಮವನ್ನು ಕೈಗೂಡಿಸಲು ಹೊಸ ಜಾನಪದ ರೂಪ ಪ್ರತ್ಯಕ್ಷವಾಗುತ್ತದೆ." ಎಂಬ ಜಾನಪದ ತಜ್ಞರ ಮಾತಿನಂತೆ ವೈದಿಕತೆ ಮತ್ತು ಆಧುನಿಕತೆ ಮತ್ತು ಪ್ರಾಣಿ ಜಾನಪದದ ಸಂಬಂಧ ಹಾಗೂ ಸಂಘರ್ಷಗಳಲ್ಲಿ ಬದಲಾವಣೆಗಳು ನಡೆದಿವೆ. ಮೃಗಬಲಿ, ನರಬಲಿ ಬದಲಾಗಿ ಕುರಿನೀರು(ಕೆನ್ನೀರು) ಕಲಸಿಡುವುದು, ಎಳೆಗುಂಬಳ ಕಡಿದು ಸುಣ್ಣ, ಅರಶಿನ ಪುಡಿ ಸವರುವುದು ಮುಂತಾದ ಪರ್ಯಾಯ ವ್ಯವಸ್ಥೆಗಳು ಬಂದಿವೆ. 'ಅಸುರಕ್ರಿಯೆ'ಯ ಸಂಪ್ರದಾಯಗಳು 'ದೇವಕ್ರಿಯೆ'ಯ ವಿಧಿಗಳಾಗಿವೆ. ಬೇಟೆಗಾಗಿ ಕಾಡಿಗೆ ಹೊರಡುವ ಉತ್ಸವ ಭಾಗಗಳು ಬೇಟೆಯನ್ನು ಆಂಗಿಕವಾಗಿ ಅಭಿನಯಿಸಿ ತೋರಿಸುವುದಕಷ್ಟೇ ಸೀಮಿತವಾಗಿದೆ.

ಕಾಡಿನಿಂದ ಮನುಷ್ಯ ನಾಡಿಗೆ ಬದಲಾದ ದಾರಿಯಲ್ಲೇ ಭಾಗಶಃ ಅವನು ಹಿಂಸೆಯಿಂದ ಅಹಿಂಸೆಯ ಕಡೆಗೂ ಬದಲಾದುದನ್ನು ಗುರುತಿಸಬಹುದು. 'ಪ್ರಾಣಿಬಲಿ'ಯ ಬದಲಾಗಿ ಸಾತ್ವಿಕ ಪರ್ಯಾಯ ವ್ಯವಸ್ಥೆಗಳು ಒಡಮೂಡುತ್ತಿರುವುದು ಸ್ವಾಗತಾರ್ಹವಾದರೂ ಸಾಂಸ್ಕೃತಿಕ ಮನೋಧರ್ಮದ ದಿಕ್ಕನ್ನು ಇದು ನಿಧಾನವಾಗಿ ಬದಲಾಯಿಸುವ ಅವಕಾಶಗಳನ್ನೂ ಸೃಷ್ಟಿಸುತ್ತದೆ. ಪ್ರಾಣಿಬಲಿಗೆ ಬದಲಾಗಿ ಅರ್ಪಿಸುವಾಗ ಶ್ರೇಣೀಕೃತ ಸಮಾಜ ವ್ಯವಸ್ಥೆಯ ಆಲೋಚನೆಗಳು ಕೆಲಸಮಾಡಿರುವುದನ್ನು ನೋಡಬಹುದು. ಒಟ್ಟಿನಲ್ಲಿ ಪ್ರಾಣಿ ಜಾನಪದ ಪರಿಕಲ್ಪನೆಯು ಜನಪದರು ಮತ್ತು ಪ್ರಾಣಿಗಳ ಸಂಬಂಧವನ್ನು ಮೇಲ್ಪದರದಲ್ಲಿ ನೋಡದೆ ಜನಪದ ಆರಾಧನಾ ಸಂಸ್ಕೃತಿಯ ಆಳಕ್ಕಿಳಿದು ನೋಡಲು ಸಹಾಯವಾಗುವ ಒಂದು ಪರಿಕಲ್ಪನೆ ಎನ್ನಬಹುದು.

ಪರಾಮರ್ಶನ ಸಾಹಿತ್ಯ:

ಚಿನ್ನಪ್ಪ ಗೌಡ ಕೆ.(ಡಾ.), 1990

ಭೂತಾರಾಧನೆ: ಜಾನಪದೀಯ ಅಧ್ಯಯನ, ಮದಿಪು ಪ್ರಕಾಶನ, ಮಂಗಳಗಂಗೋತ್ರಿ

ಕೇಳುಮಾಸ್ತರ್, ಅಗಲ್ವಾಡಿ, 2013

ಕೇರಳದ ತೆಯ್ಯಂ, ಕೈರಳಿ ಪ್ರಕಾಶನ, ಕುಡಾಲು, ಮೇರ್ಕಳ

ರಾಘವನ್ ಪಯ್ಯನಾಡ್ (ಡಾ.)(ಸಂ.), 2014

ಕೇರಳ ಜಾನಪದ, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಹಾವೇರಿ.

ಅಮೃತ ಸೋಮೇಶ್ವರ, 2007,

ತುಳುವ ಜಾನಪದ: ಕೆಲವು ನೋಟಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ನರೇಂದ್ರ ರೈ ದೇರ್ಲ, 2007,

ಬೇಟೆ, ಕನಸು ಪ್ರಕಾಶನ, ಮಾಡಾವು ಅಂಚೆ, ಪುತ್ತೂರು.

ಅಶೋಕ ಆಳ್ವ ಕೆ. (ಡಾ.)(ಲೇ.) 1995,

'ಸಿರಿ'–ಅಮೃತ ಸೋಮೇಶ್ವರ ಅಭಿನಂದನ ಸಂಪುಟ, ಕಲಾಗಂಗೋತ್ರಿ ಸೋಮೇಶ್ವರ.

✠✠✠

ನಿನ್ನೆಯವರೆಗೆ
ಮುಗಿದಿದೆ ಕನಸು
ನಾಳೆಯದಿನ್ನೂ
ಬರಲಿಹ ನೆನಪು

ಭರತನಾಟ್ಯದ 'ದಶವಿಧ ಅಡವು' ವರ್ಗೀಕರಣಕ್ಕೊಂದು ಪುನರ್‌ಸ್ಪರ್ಶ

ಡಾ. ಮನೋರಮಾ ಬಿ.ಎನ್.
ಕಲಾಸಂಶೋಧಕರು, ಸಂಪಾದಕರು
ನೂಪುರ ಭ್ರಮರಿ ನರ್ತನ ಶೋಧ ನಿಯತಕಾಲಿಕೆ

ಅಡವಿನ ಇತಿಹಾಸದ ಸ್ಥೂಲ ಪರಿಚಯ

ಅಡವುಗಳು ಭರತನಾಟ್ಯ ಕಲಿಕೆಯ ಪ್ರಾಥಮಿಕ ಮತ್ತು ಅವಿಭಾಜ್ಯ ಅಂಗ. ಇವು ಮೂಲತಃ ಹೆಜ್ಜೆಗಾರಿಕೆ ಅಥವಾ ಕಾಲಿನ ಚಲನೆಗಳು. ಆ ಮೂಲಕ ದೇಹದ ರೇಖಾವಿನ್ಯಾಸಗಳತ್ತ ಗಮನ ಇವುಗಳ ಆದ್ಯತೆ.

ಅಡವುಗಳಿಗೆ ಕೇಂದ್ರಸ್ಥಾನ ದೇಹದ ನಾಭಿ. ಅಡವು ಶಬ್ದವು ಆಡ್, ಆಟ, ಅಡುಗು, ಅಡೈವು ಎಂಬ ದ್ರಾವಿಡ ಶಬ್ದಗಳಿಂದ ಉತ್ಪನ್ನವಾಗಿದೆ. ತಮಿಳುಭಾಷೆಯಲ್ಲಿ ಅಡವು ಎಂಬುದಕ್ಕೆ ನೃತ್ಯವೆಂದೂ, ಆಡಲ್ ಎಂದರೆ ಚಲನೆಯೆಂದೂ, ಮಲಯಾಳದಲ್ಲಿ ದೇಹಚಲನೆಯೆಂದೂ, ತೆಲುಗಿನಲ್ಲಿ ಅಡುಗು ಎಂದರೆ ಪಾದಚಲನೆಯೆಂಬ ಶಬ್ದಾರ್ಥಗಳು ದೊರೆತಿವೆ. ಇವೆಲ್ಲದರ ಆಧಾರದ ಮೇಲೆ ಅಡವುಗಳನ್ನು ಪಾದದ ವಿನ್ಯಾಸಗಳಿಂದ ಹೆಸರಿಸುವ ಪರಂಪರೆ ಎಂದೇ ನಿರ್ಣಯಿಸಬಹುದು. ದೇಹದ ಭಾರವನ್ನು ಚತುರಶ್ರ ಸ್ಥಾನಕ ಎಂದರೆ ಅರಮಂಡಿಗೇ ವರ್ಗಾಯಿಸಿ ನಿಶ್ಚಿತ ಭಂಗಿಯಲ್ಲಿ ಅಡವನ್ನು ಮಾಡುವುದು ಕ್ರಮ. ಹಾಗಾಗಿಯೇ ಪ್ರಾಥಮಿಕವಾಗಿ ಪಾದಚಲನೆಗಳನ್ನು ಕಲಿಸಿ ಆಮೇಲೆ ಕೈಯ್ಯವಿನ್ಯಾಸಗಳನ್ನು ಮಾರ್ಗದರ್ಶಿಸಲಾಗುತ್ತದೆ (ಮನೋರಮಾ, 2011).

ಅಡವುಗಳು ನಾಟ್ಯಶಾಸ್ತ್ರದಲ್ಲಿ ಹೇಳಲಾದ 108 ಮಾರ್ಗಕರಣಗಳ ಅನಂತರಕ್ಕೆ ಕರಣ, ದೇಶೀಕರಣ, ಪೇರಣೀ ಮುಂತಾದ ನೃತ್ತಪದ್ಧತಿಗಳ ಹಲವು ಅಂಶಗಳನ್ನು ಅಳವಡಿಸಿಕೊಂಡಿದೆ. ಆದರೆ ಕರಣಾದಿ ವಿನ್ಯಾಸಗಳಲ್ಲಿ ಪ್ರಮುಖವಾದ ಕಟಿರೇಚಕಗಳಿಗೆ ಇಲ್ಲಿ ಮಹತ್ತ್ವವಿಲ್ಲ. ಇಂದಿನ ಕಾಲಕ್ಕೆ ಬಳಕೆಯಲ್ಲಿರುವ ಅಡವುಗಳು ದೇಶೀಯ ನೃತ್ತಶೈಲಿಗೆ ಸೇರಿದ್ದಾಗಿದ್ದರೂ ಅದನ್ನೆಲ್ಲವನ್ನೂ ಗುರುತಿಸುವಂಥ ಪ್ರತ್ಯೇಕ ಶಾಸ್ತ್ರಗ್ರಂಥಗಳಿಲ್ಲ. ಹಾಗೆಂದು ಅಡವು ವರ್ಗಗಳ ಉಲ್ಲೇಖ ತಮಿಳುಗ್ರಂಥ ಕೂತ್ತಾನೂಲ್, ಶಿಲಪ್ಪದಿಗಾರಂನಲ್ಲಿ ಕಂಡುಬರುತ್ತದಾದರೂ ಹೆಜ್ಜೆಗಾರಿಕೆಯೆಂಬ ಮಟ್ಟಿಗೆ ಮಾತ್ರ ವಿವರ ದೊರಕುತ್ತದೆ. ಚೋಳ ಚಕ್ರವರ್ತಿ ಮೂರನೇ ಪರಾಕೇಸರಿ ಕುಲೋತ್ತುಂಗನ (1128–1220) ಕಾಲದ ಶಿವ ದೇವಾಲಯದಲ್ಲಿ ಕುಲತ್ತೂರು ಅಡವು ಎಂಬುದರ ಉಲ್ಲೇಖ ಕಂಡುಬಂದಿದೆ. ತಮಿಳು ಗ್ರಂಥಗಳಾದ ಭರತಸಂಗ್ರಹ, ಮಹಾಭರತಚೂಡಾಮಣಿಯಲ್ಲಿ 25 ಬಗೆಯ ಉತ್ತಮ, ಅಧಮವೆಂಬ ಅಡವುಗಳ ಪ್ರಸ್ತಾಪವಿದೆ.ವಿಜಯನಗರ ಸಾಮ್ರಾಜ್ಯ ಕಾಲಕ್ಕೆ ಚಂದ್ರಶೇಖರ ಕವಿಯು ಹೆಸರಿಸುವ ಕಾಲ್ಚಲನೆಗಳು ಅವಗಢದ ಅಡವುಗಳೆಂದು ಕರೆಸಿಕೊಂಡಿದ್ದು ಆ ಯಾವ ಅಡವುಗಳ ಪ್ರಯೋಗದ ಕುರಿತು ಈವರೆಗೂ ಸ್ಪಷ್ಟ ಮಾಹಿತಿ ದೊರಕಿಲ್ಲ.ಜಾಯಸೇನಾಪತಿಯ ಶಾಸ್ತ್ರಗ್ರಂಥ

ನೃತರತ್ನಾವಳೀಯಲ್ಲೂ ಅಡವಿನ ಮೂಲ ಕಾಲಿನ ಚಲನೆಗಳ ವಿವರ ದೊರೆಯುತ್ತದೆ. 18ನೇ ಶತಮಾನದಲ್ಲಿ ಮರಾಠ ಮಹಾರಾಜ ತುಲಜಾಜಿ ಬರೆದ ಸಂಗೀತ ಸಾರಾಮೃತವೇ ಅಡವುಗಳ ಇಂದಿನ ರೂಪುರೇಷೆಯನ್ನು ಸ್ವಲ್ಪ ಮಟ್ಟಿಗಾದರೂ ಕಾಣಿಸುವ ಪ್ರಮುಖ ಶಾಸ್ತ್ರಗ್ರಂಥ. ಇವು ಸೊಲ್ಕಟ್ಟು ಸಮೇತವಾಗಿ 18 ವಿಧವಾಗಿ ವಿವರಿಸಲ್ಪಟ್ಟಿವೆ. ತಂಜಾವೂರು ಸಹೋದರರು ಸದಿರ್ ನೃತ್ಯದ ಅಡವುಗಳನ್ನು ಪರಿಷ್ಕರಿಸಿ ಸರಳವಾಗಿ ಅರ್ಥವಾಗುವಂತೆ ಪದಪ್ರಯೋಗ ಮಾಡಿದರು. ಆ ಬಳಿಕ ಪಾರಂಪರಿಕ ಗುರುಗಳ ಕೈಯ್ಯಲ್ಲಿ ಹಲವು ಬಗೆಯ ಅಡವು ಪ್ರಕಾರಗಳು ಬೆಳೆದಿವೆ. ಹಾಗೆಂದೇ ಪ್ರಾಚೀನಕಾಲದ ಅಡವುಗಳಿಗೂ, ಇಂದಿನ ಕಾಲದ ಅಡವುಗಳಿಗೂ ವಿಷಯ ಮತ್ತು ಮಾಡುವ ವಿಧಾನಗಳೆರಡರಲ್ಲೂ ಸಾಕಷ್ಟು ವ್ಯತ್ಯಾಸವಿದೆ. ಅಂತೆಯೇ ವೈವಿಧ್ಯ ವಿಸ್ತಾರವಾಗಿ ಹಬ್ಬಿದೆ (ಮನೋರಮಾ, 2018).

ದಶವಿಧ ಅಡವು– ಪುನರ್ ವರ್ಗೀಕರಣದ ಆವಶ್ಯಕತೆ ಮತ್ತು ಮಹತ್ತ್ವ

ಭರತನಾಟ್ಯವನ್ನು ಕಲಿಸುವ ಹಂತದಲ್ಲಿ ಕರ್ನಾಟಕದಲ್ಲಿ ಪರೀಕ್ಷಾಸಂಬಂಧಿಯಾಗಿ ಪ್ರಚುರವಾದ ಪ್ರಖ್ಯಾತ ಕ್ರಮ ದಶವಿಧ ಅಡವುಗಳೆಂಬುದು. ಆದರೆ ಈ ಹತ್ತು ಬಗೆಯ ಅಡವುಗಳೆಂದು ಕರ್ನಾಟಕದಲ್ಲಷ್ಟೇ ಪ್ರಸಿದ್ಧವಾದ ಸರ್ಕಾರೀ ಪಠ್ಯಕ್ರಮದ ಫಲವಾಗಿ ರೂಢಿಗೆ ಬಂದ ಆಡುನುಡಿಯ ವರ್ಗೀಕರಣ ಎಂಬುದನ್ನು ಗಮನದಲ್ಲಿರಿಸಿಕೊಳ್ಳಬೇಕು. ಈ ವರ್ಗೀಕರಣಕ್ಕೆ ಯಾವುದೇ ನಿರ್ದಿಷ್ಟ ಲಕ್ಷಣಗ್ರಂಥ ಅಥವಾ ಪರಂಪರೆಯ ಇತಿಹಾಸ ಕಂಡುಬರುವುದಿಲ್ಲ. ದಶವಿಧವಾಗಿ ಏಕೆ ಮತ್ತು ಹೇಗೆ ವರ್ಗೀಕರಣ ಬಂತೆಂಬುದರ ಕುರಿತು ಯಾವ ಶಾಸ್ತ್ರಗ್ರಂಥಗಳ ದಾಖಲೆಯೂ ಇಲ್ಲ ಮತ್ತು ಆ ಹತ್ತುವಿಧಗಳ ಚಲನೆಗಳನ್ನು ಒಂದು ಸಮೂಹವಾಗಿಸುವ ನೆಲೆಯಲ್ಲಿ ಅವಶ್ಯವಿರುವ ಏಕಸೂತ್ರತೆ ಅವುಗಳಿಗಿಲ್ಲ. ಈ ಹಿನ್ನಲೆಯಲ್ಲಿ ಗಮನಿಸಬೇಕಾದ ಅಂಶವೆಂದರೆ ದಶವಿಧ ಅಡವುಗಳ ವರ್ಗೀಕರಣದ ಕುರಿತಾಗಿ ಸರ್ಕಾರೀ ಪಠ್ಯ(ಪ್ರಾಥಮಿಕ)ದಲ್ಲೂ ದಶವಿಧ ಅಡವುಗಳ ಕುರಿತು ನಿರ್ದಿಷ್ಟತೆ ಇಲ್ಲದಿರುವ ಬಗ್ಗೆ ಪಠ್ಯರಚನಾಸಮಿತಿಯವರೇ ಬರೆದಿರುವುದು(ಪುಟ 43, ಭರತನಾಟ್ಯ ಪ್ರಾಥಮಿಕ ಪಠ್ಯ–ಕರ್ನಾಟಕ ಸರ್ಕಾರ). ವಿಪರ್ಯಾಸವೆಂದರೆ ಇಂದಿನ ಕಾಲಕ್ಕೆ ನೃತ್ಯಕಲೆಯ ಪರೀಕ್ಷಾಸನ್ನಾಹದಲ್ಲಿ ಇಂತಹ ಮೌಲ್ಯಯುತ ಅಭಿಪ್ರಾಯ–ನಿರ್ಣಯಗಳನ್ನು ಗಮನಿಸದೆಯೇ ಮುನ್ನಡೆಯುತ್ತಿರುವ ಚರ್ಯೆಯೇ ಅಧಿಕವಾಗಿದೆ. ಇದರಿಂದಾಗಿ ಅಭ್ಯಾಸದ ಅನಂತರದ ಪ್ರಯೋಗ/ಪರೀಕ್ಷಾಕ್ರಮಗಳಲ್ಲಿ ಸಾಕಷ್ಟು ಸಂದೇಹ, ಮಿತಿಗಳಿಗೆ ಅನೇಕರು ತುತ್ತಾಗುತ್ತಾರೆ. ಬಾಲಪಾಠದಲ್ಲಿರುವಂತೆಯೇ ಅಡವುಗಳನ್ನು ಪ್ರಯೋಗಪಾರಿಣ್ಯತೆಗೂ ನಿದರ್ಶಿಸುವುದು ಇಂತಹ ವಿಭಾಗೀಕರಣದಿಂದಾದ ಮಿತಿ.ಇವುಗಳನ್ನು ಗುರುತಿಸಿಕೊಳ್ಳುವುದು ಕಲಾಮುಖವಾಗಿ ನಿಜಕ್ಕೂ ಆವಶ್ಯಕ.

ಉದಾಹರಣೆಗೆ: ತಟ್ಟಡವು, ಕಟ್ಟಡವು, ನಾಟ್ಟಡವು, ಮೆಟ್ಟಡವು, ಮಂಡಿ ಅಡವು ಇತ್ಯಾದಿ ಅಡವಿಗೆ ಬಳಸುವ ಪಾದಭೇದಗಳಿಂದ ಗುರುತಿಸಲ್ಪಟ್ಟಿದ್ದರೆ, ತತ್ತೈತಾಂ, ತಾತೈತೈತಾ, ತಾಹತಜೊಂತರಿತ ಅಡವು ಎಂಬುದು ಸೊಲ್ಕಟ್ಟಿನ(ಸೊಲ್ಲು+ಕಟ್ಟು= ಪದಗುಂಫನ/ತತ್ಕಾರ) ಹೆಸರಿನಿಂದ ಗುರುತಿಸಲ್ಪಟ್ಟಿದೆ. ಇನ್ನೂ ಕೆಲವು ನೃತ್ತಹಸ್ತವಿನ್ಯಾಸಗಳ ಹೆಸರಿನಿಂದ(ಕರ್ತರೀ, ಶಿಖರ) ಸುಲಭವಾಗಿ ನೆನಪಿಟ್ಟುಕೊಳ್ಳುವಂತಾಗಿವೆ. ಇನ್ನೊಂದಷ್ಟು ಅಡವುಗಳು ಬಹುವಾಗಿ ಬಳಸಲ್ಪಡುವ ನೃತ್ತಸಂದರ್ಭಗಳಿಂದ(ಕೋರ್ವೆ, ತೀರ್ಮಾನ, ಮುಕ್ತಾಯ, ರಂಗಾಕ್ರಮಣ) ಗುರುತಿಸಲ್ಪಟ್ಟಿವೆ. ರಂಗಾಕ್ರಮಣ ಅಡವು ಎಂಬ ಅಡವಿನ ವರ್ಗದಲ್ಲಿ ರಂಗಾಕ್ರಮಣವು

ಮೂಲತಃ ಸಂಸ್ಕೃತದ ಶಬ್ದ.ನಾಟ್ಯಶಾಸ್ತ್ರದ ಜನಿತ ಚಾರಿಯನ್ನು ಆಧರಿಸಿ ಮಾಡಿದ ಅಡವು ಅದು. ಆದರೆ ಅದು ಗುರುತಿಸಲ್ಪಡುವುದು ದ್ರಾವಿಡಪದಪ್ರವೃತ್ತಿಯಿಂದ. ಇಂಥಹ ಅನೇಕ ಪ್ರಸಕ್ತಿಗಳಿವೆ. ಇನ್ನೂ ಕೆಲವು ಅಡವುಗಳ ಹೆಸರುಗಳಿಗೆ ಏಕರೂಪವಾದ ಪ್ರಯೋಗಕ್ರಮವೂ ಇಲ್ಲ(ಹಾರಡವು, ಎಗರಡವು) ಅಂತೆಯೇ ಪಾದಚಲನೆಗಳನ್ನು ನಿಶ್ಚಿತವಾಗಿ ಸೂಚಿಸುವ ಶಾಸ್ತ್ರಕ್ರಮವೂ ಇಲ್ಲ.ಕಾರಣ ಪ್ರಾಂತ್ಯದಿಂದ ಪ್ರಾಂತ್ಯಕ್ಕೆ ಅವುಗಳ ಹೆಸರು ಮತ್ತು ಪ್ರಯೋಗ ಕ್ರಮದಲ್ಲಿ ಭಿನ್ನತೆ ಕಂಡುಬಂದಿವೆ.

ಆದ್ದರಿಂದಲೇ ಈ ಗೊಂದಲಗಳನ್ನು ನಿವಾರಿಸುವಂತೆ ಅಡವುಗಳ ವೈಜ್ಞಾನಿಕ ವಿನ್ಯಾಸದ ಪ್ರಮುಖ ವರ್ಗೀಕರಣಗಳು ಕೆಳಗಿನಂತಿವೆ. ಇವೆಲ್ಲವೂ ಪಾದಾಂಗವಿನ್ಯಾಸಗಳನ್ನು ಆಧರಿಸಿಯೇ ಕ್ರಮವತ್ತಾಗಿ ಪರಿಷ್ಕರಿಸಲಾಗಿರುವಂತದ್ದು. ಇವುಗಳಿಂದಲೇ ಉಳಿದೆಲ್ಲಾ ಅಡವುಗಳ ಸರಣಿ ಬೆಳೆಯುತ್ತವೆ ಎನ್ನುವುದು ಗಮನಾರ್ಹ. ಹಾಗಾಗಿ ಗೊಂದಲಕ್ಕೆಡೆಮಾಡುವ ಯಾವುದೇ ಪರ್ಯಾಯ ನಾಮಗಳನ್ನೂ ಬಳಕೆಯ ಅನುಕೂಲಕ್ಕಷ್ಟೇ ಸೂಚಿಸಿ ದೇಶೀ ಹೆಸರುಗಳನ್ನೇ ಪ್ರಧಾನವಾಗಿ ಆಧರಿಸಿ ಅಡವಿನ ಸೂತ್ರವನ್ನು ಕೊಡಲಾಗಿದೆ. ಹೆಚ್ಚುವರಿ ಅಡವಿನ ಪ್ರಕಾರಕ್ಕೆ ಸೇರುವ ಅದೆಷ್ಟೋ ಅಡವುಗಳೂ ಇದರಿಂದ ಪ್ರಧಾನಚಲನೆಯ ಪರಿಷ್ಕಾರದಲ್ಲಿ ಒಳಬಂದಿವೆ. ಉದಾಹರಣೆಗೆ : ಪಾದವನ್ನು ನಾಟಿ ಮಾಡುವ ಕ್ರಮವಿರುವ ವಿಸ್ತಾರ ಅಥವಾ ವಿಕರ್ಷಿತ ಅಡವು ಹೆಚ್ಚುವರಿ ಅಡವೆಂದೇ ಪ್ರಸಿದ್ಧ. ಆದರೆ ಅದು ಮೂಲತಃ ನಾಟ್ಟಡವಿನ ಮತ್ತೊಂದು ವಿಧವಲ್ಲದೆ ಬೇರಲ್ಲ. ಹಾಗೆ ನೋಡಿದರೆ ಈಗಾಗಲೇ ಭರತನಾಟ್ಯದಲ್ಲಿ ನಾಟ್ಟಡವಿನ ಹಲವು ಬಗೆಗಳೆಂದೇ ಕಲಿಸಲಾಗುವ ನಾಟ್ಟುತಟ್ಟಡವು, ನಾಟ್ಟುಕಟ್ಟಡವು, ಮಿಶ್ರ(ಶಿಖರ)ಅಡವು ಮೂಲತಃ ಇಲ್ಲಿ ಕೆಳಗೆ ವಿವರಿಸಲಾದ ಸಂಯೋಜನಾ ಅಡವಿನ ಪ್ರಕಾರಕ್ಕೆ ಸೇರುವಂತದ್ದು. ಆದರೆ ಅವೆಲ್ಲವನ್ನೂ ನಾಟ್ಟಡವು ಎಂಬ ಏಕಶ್ರೇಣಿಯಲ್ಲಿ ಹೆಸರಿಸಲಾಗುತ್ತಿದೆ. ಇದೇ ಬಗೆಯಲ್ಲಿ ಮಂಡಿಗೆ ಸಂಬಂಧಿಸಿದ ಸರಕ್ಕ್ ಅಡವು ಜಾರಡವಿನ ಬಗೆಯೆಂದು ಹೇಳಲಾಗಿದೆ. ಇವೆಲ್ಲಾ ಅಡವುಗಳ ಮೂಲ ಹೆಸರುಗಳು ಕ್ರಮೇಣ ಮರೆಗೆ ಸರಿದಿರುವ ಪರಿಣಾಮವಾಗಿದೆ. ಇನ್ನು ಸುತ್ತಡವೆಂದು ಇಲ್ಲಿ ಪ್ರಧಾನವಾಗಿ ಸೂಚಿಸಿರುವ ವಿಚಾರ ಅಭಿನಯದರ್ಪಣದ ಭ್ರಮರೀ ಭೇದಗಳೇ ಆಗಿವೆ. ಈಗಾಗಲೇ ಪಾದವನ್ನು ನಾಟ್ಟಡವಿನ ರೀತಿಯಲ್ಲಿ ಇರಿಸಿ ಇಲ್ಲವೇ ಅರೆಮಂಡಿಯಲ್ಲಿ ನಿಂತು ಮಾಡುವ ಮೈಅಡವುಕೂಡಾ ಸುತ್ತಡವಿನ ಪ್ರಭೇದಕ್ಕೆ ಸೇರುತ್ತದೆ ಎನ್ನುವುದು ಗಮನಿಸಬೇಕಾದ ಅಂಶ.ಇದುಭರತನಾಟ್ಯವು ರೂಢಿಸಿಕೊಂಡ ಪ್ರಮುಖವಾದ ಭ್ರಮರೀಭೇದಗಳಲ್ಲೊಂದು. ಆದರೆ ಅದು ಈವರೆಗೆ ಭ್ರಮರೀಭೇದಗಳ ಅಭ್ಯಾಸಕ್ರಮದಲ್ಲಿ ಒಳಪಡದೇ ಪ್ರತ್ಯೇಕವಾದ ಅಡವಾಗಿ ಚಾಲ್ತಿಯಲ್ಲಿದೆ. ಅಂಗಭ್ರಮರಿಯೆಂಬ ಭ್ರಮರೀಭೇದವನ್ನು ಹೋಲುವ ಇದರ ಮೂಲಚಲನೆಯಲ್ಲಿ ಸಾಮಾನ್ಯವಾಗಿ ಆಲೀಢ, ಪ್ರತ್ಯಾಲೀಢ ಸ್ಥಾನಕಗಳಿಗೆ ಪಾದವನ್ನು ನಾಟಿ ಮೈಯನ್ನು ವರ್ತುಲಾಕಾರವಾಗಿ ಸುತ್ತುವುದೇ ಪ್ರಧಾನಕ್ರಮ. ಪಾದಚಲನೆ ಇಲ್ಲಿ ಮೈಯ್ಯ ಸುತ್ತುವಿಕೆಯ ಮುಂದೆ ಆಂಶಿಕ. ಈ ಮೈ ಅಡವು ಪ್ರಚಲಿತದಲ್ಲಿರುವ ದಶವಿಧ ಅಡವಿನಲ್ಲಿ ಸ್ಥಾನ ಪಡೆದಿದ್ದರೂ ಸುಲಭವಾಗಿ ವಿಶಾಲವಾದ ಸುತ್ತಡವಿನ ಕಕ್ಷೆಯೊಳಗೆ ಸೇರಬಹುದಾದ ಅವಕಾಶವನ್ನು ಕಳೆದುಕೊಂಡಿದೆ.ಇನ್ನು ಭ್ರಮರೀ ಭೇದಗಳನ್ನು ಕಲಿಯುವ ನೃತ್ಯಾಭ್ಯಾಸಿಗಳು ಭರತನಾಟ್ಯಕ್ಕೆ ಒಪ್ಪುವಂತೆ ಸುತ್ತಡವಿನ ಆಯಾಮವನ್ನು ವಿಸ್ತರಿಸಿಕೊಳ್ಳುವ ಸಾಧ್ಯತೆಗಳಿವೆ ಅನ್ನುವುದಕ್ಕೆ ಇದೇ ಮಹತ್ತರವಾದ ನಿದರ್ಶನ.

ನಂದಿಕೇಶ್ವರನ ಅಭಿನಯದರ್ಪಣದ ಪ್ರಕಾರ 4 ಬಗೆಯ ಪಾದಭೇದಗಳಿವೆ. ಅವುಗಳು

ಮಂಡಲ ಉತ್ಪ್ಲವನ ಭ್ರಮರೀ ಚಾರೀ
ಸ್ಥಾನಕಗಳ ರೀತಿ ನೆಗೆಯುವ ರೀತಿ ತಿರುಗುವ ರೀತಿ ಚಲನೆಯ ರೀತಿ

ಇವು ನಾಟ್ಯಶಾಸ್ತ್ರದಂತೆ ಕೇವಲ ಪಾದಗಳ ನಿಲುವಿನ ವಿಧಿವಿಧಾನಗಳನ್ನಷ್ಟೇ ಹೇಳದೆ, ಸಮಗ್ರವಾಗಿ ತೊಡೆಯಿಂದ ಮೊಣಕಾಲು, ಪಾದ ಮತ್ತು ಬೆರಳುಗಳ ಚಲನೆಗಳನ್ನೂ ಒಟ್ಟಾಗಿಸಿ ಚಲನೆಯ ದೇಶೀಶಾಸ್ತ್ರವನ್ನು ಮುಂದಿಡುತ್ತದೆ. ಈ ನೂತನ ಅಡವು ವರ್ಗ ಪರಿಷ್ಕರಣದಲ್ಲಿ ಈ ನಾಲ್ಕೂ ವಿಭಾಗಗಳಿಗೆ ಸಮಾನವಾದ ಸ್ಥಾನವು ಏಕಕಾಲಕ್ಕೆ ದೊರೆಯುತ್ತದೆ ಎನ್ನುವುದು ಗಮನಾರ್ಹ. ಅಂದರೆ ಸ್ಥಾನಕದಲ್ಲಿದ್ದು ಮಾಡುವ ಅಡವಿನ ಕ್ರಮ, ನೆಗೆಯುತ್ತಾ ಮಾಡುವ ಅಡವಿನ ಕ್ರಮ, ತಿರುಗುವ ಮಾದರಿಗಳು, ಚಲನೆಯ ಗತಿಯ ವಿಧಾನಗಳು ಈ ವರ್ಗೀಕರಣದಲ್ಲಿ ಸಂಯುಕ್ತವಾಗಿವೆ.

ಇಂತಹ ವೈಜ್ಞಾನಿಕ ರೂಪದ ಪುನರ್ ಪರಿಷ್ಕಾರದಿಂದ ಆಗುವ ಲಾಭವೆಂದರೆ ನೃತ್ಯಭ್ಯಾಸಿಗಳಿಗೆ ಹೆಚ್ಚಿನ ಲೆಕ್ಕಾಚಾರವಿಲ್ಲದೆ ಸುಲಭವಾಗಿ ಅಡವುಗಳ ಆಧಾರವನ್ನು ಅನ್ವಯಿಸಿ ಗುರುತಿಟ್ಟುಕೊಳ್ಳುವ ಪಾದಚಲನೆಯ ಸಂವಿಧಾನದ ಸೌಲಭ್ಯ. ದ್ರಾವಿಡ ಪದವಿಶೇಷವಾಗಿರುವ ಅಡವನ್ನು ಅದರದ್ದೇ ಆದ ಸಂವಿಧಾನ, ಪಠ್ಯದಲ್ಲಿ ನೋಡುವುದೇ ಸರಿಯಾದ ಕ್ರಮ. ಅಂತೆಯೇ ಹೇಗೆ ನಾನಾ ಬಗೆಯಾಗಿ ಮೂಲಚಲನೆಗಳನ್ನು ಸಂಯೋಗಗೊಳಿಸಿ ಹಲವು ವಿಧವಾದ ಸಂಯೋಜನಾ ಅಡವುಗಳನ್ನು ಹೊಸತಾಗಿ ಶೋಧಿಸಬಹುದು ಎನ್ನುವುದಕ್ಕೂ ಇದು ಮಾರ್ಗದರ್ಶನ. ಇದರಿಂದ ಪಾದಚಲನೆಯ ವ್ಯಾಕರಣದಲ್ಲಿ ಕಲಾವಿದರ ಸೃಷ್ಟಿಶೀಲತೆಯ ವ್ಯಾಪ್ತಿಯು ಇನ್ನಷ್ಟು ಹಿರಿದಾಗಿ ಹಿಗ್ಗುತ್ತದೆ. ಬೇರೆ ಬೇರೆ ಕರಣ, ನೃತ್ಯಪದ್ಧತಿಗಳಿಂದಲೂ ಹೊಸತಾಗಿ ಅಡವುಗಳನ್ನು ರೂಪಿಸಬಹುದು ಎನ್ನುವ ಅನುಕೂಲಗಳು ಸಹಜವಾಗಿ ಕಣ್ಣಮುಂದೆ ಇಣುಕುತ್ತವೆ. ಮಾತ್ರವಲ್ಲ ಅಡವಿನ ಬಳಕೆಯ ವಿಚಾರವಾಗಿ ಕಪೋಲಕಲ್ಪಿತವಾಗಿ ಬಂದಿರುವ ಅದೆಷ್ಟೋ ಪೂರ್ವಾಗ್ರಹಗಳು, ಮಡಿವಂತಿಕೆಯು ದೂರವಾಗುತ್ತವೆ. ಅಡವಿನ ಮೂಲ ಚಲನೆಗಳನ್ನು ಉಳಿಸಿಕೊಂಡೇ ಹಸ್ತವಿನ್ಯಾಸಗಳ ಅಂದವನ್ನು ಹೆಚ್ಚಿಸುವಂತೆ ಮಾಡಬಹುದಾದ ಸಾಧ್ಯತೆಗಳು,ಕಥೆ–ಸನ್ನಿವೇಶಕ್ಕೆ ಪೂರಕವಾದ ಭಾವಪೂರಿತವಾದ ವಿಭಿನ್ನ ನಿರೂಪಣೆಗಳ ನೃತ್ತಸಿದ್ಧಿ ಲಭಿಸುತ್ತದೆ.

ಸರಳವಾದ ಉದಾಹರಣೆಯೆಂದರೆ–ಸಮಪಾದದಲ್ಲಿ ನಿಂತು ಕಾಲನ್ನು ಮಡಚಿ ಸಹಜಗತಿಯಲ್ಲಿ ನಡೆಯುತ್ತಾ ಬಗೆಬಗೆಯಾದ ಅಡವುಗಳನ್ನು (ತಟ್ಟಡವು, ಕಟ್ಟಡವು, ನಾಟ್ಟಡವು, ನಾಟ್ಟು ತಟ್ಟಡವು, ಜಾರಡವು ಇತ್ಯಾದಿ) ತತ್ಕಾರಕ್ಕೆ ಅನುಸಾರವಾಗಿ ಹೊಂದಿಸಿಕೊಳ್ಳುವುದು ನಡೆ ಅಥವಾ ನಡೆ ಅಡವು ಎನಿಸಿಕೊಂಡಿದೆ. ಯತಾರ್ಥದಲ್ಲಿ ಇದು ನೃತ್ಯಚಲನೆಯ ಸಹಜವಾದ ನಡೆಯೇ ಆಗಿದ್ದು ಇದಕ್ಕೆ ಪ್ರತ್ಯೇಕ ಅಡವಿನ ವರ್ಗೀಕರಣದ ಆವಶ್ಯಕತೆಯಿಲ್ಲ. ಇದು ಸನ್ನಿವೇಶ, ಸಂದರ್ಭಕ್ಕೆ ತಕ್ಕಂತೆ ಬದಲಾಯಿಸಿಕೊಳ್ಳುತ್ತದೆ ಕೂಡಾ. ವಿದ್ಯಾರ್ಥಿಗಳಿಗೆ ಸುಲಭ ಗ್ರಹಿಕೆಗೆಂದು ಇದನ್ನು ಅಡವು ಎಂಬ ಹೆಸರಿನಲ್ಲಿ ರೂಢಿಸಿರಬಹುದಾದರೂ ಇದೇ ಬಗೆಯ ಅನೇಕ ಪ್ರಸಕ್ತಿಗಳನ್ನು ಅಡವಿನ ಅನೇಕ ವಿಧಗಳಲ್ಲಿ ಕಾಣಬಹುದು. ಹಾಗೆ ನೋಡಿದರೆ ರಂಗದ ಮುಂಬದಿಯಿಂದ ಹಿಂದೆ ತಟ್ಟುತ್ತಾ ಹಿಂದೆ ಸರಿಯುವ 'ನಿಷ್ಕ್ರಮಣ'ಕೂಡಾ ನಡೆಯಂತೆಯೇ ಒಂದು ವಿಧವಾಗಿದೆ. ಇದನ್ನು ಅಲರಿಪ್ಪುವಿನ ಅಂತ್ಯಕ್ಕೆ ಬಳಸುವುದನ್ನು ಕಾಣಬಹುದು. ಆದರೆ ಇಂತಹ ನಡೆಯನ್ನು ಅಡವೆಂದು ಶಿಸ್ತಾಗಿ ನಿಯಮಿಸಿದರೆ ಚಲನೆಯಲ್ಲಿ ದೊರಕಬಹುದಾದ ಸೌಖ್ಯ, ಸ್ವಾತಂತ್ರ್ಯ, ಕ್ರಮದ ವೈವಿಧ್ಯಕ್ಕೆ ಮಿತಿ ಹೇರಿದಂತಾಗಬಹುದು.

ಆದಾಗ್ಯೂ ಈಗಾಗಲೇ ದಶವಿಧ ಅಡವುಗಳೆಂಬುದಾಗಿಪ್ರಸಿದ್ಧಿಯಾಗಿರುವ ಚಲನೆಗಳು ಪ್ರಚಲಿತದಲ್ಲಿ ಕರ್ನಾಟಕದಲ್ಲಿ ವ್ಯಾಪಕವಾಗಿ ಬಳಕೆ ಬಂದಿದೆ. ಹಾಗೆಂದೇ ಕಲಾವರ್ಗದಲ್ಲಿ ಆಪ್ತವಾಗಿರುವ 'ದಶವಿಧ' ಎಂಬ ತೀರ್ಮಾನವನ್ನು ಅಳಿಸಿ ಹೊಸತೊಂದನ್ನು ಸ್ಥಾಪನೆ ಮಾಡುವ ಸಾಹಸ ನಿಜಕ್ಕೂ ಶೋಭೆಯಲ್ಲವೇನೋ !ಮತ್ತು ಹಾಗೊಂದುವೇಳೆ ಮಾಡಿದರೂ ಅದು ಅನೇಕ ಗೊಂದಲಗಳನ್ನು ಉಂಟುಮಾಡಬಹುದು ಎಂಬುದು ಲೇಖಕಿಯ ತರ್ಕ. ಈ ಔಚಿತ್ಯವನ್ನು ಮನಗಂಡೇ ಅಡವಿನ ವರ್ಗೀಕರಣದಲ್ಲಿ ಹತ್ತು ಸಂಖ್ಯೆಯಷ್ಟು ಅಡವುಗಳನ್ನು ಈ ಪುನರ್ವರ್ಗೀಕರಣದಲ್ಲಿಯೂ ಉಳಿಸಿಕೊಳ್ಳಲಾಗಿದೆ. ಈ ಪರಿಷ್ಕಾರದ ಮಾದರಿಯಲ್ಲಿ ಕಲಾಭ್ಯಾಸವು ಮುಂದುವರಿದಲ್ಲಿ ಹೆಚ್ಚಿನ ಪ್ರಯೋಜನ–ಫಲ–ಸಾಧ್ಯತೆಗಳನ್ನು ಭವಿಷ್ಯದಲ್ಲಿ ನಿರೀಕ್ಷಿಸಬಹುದು.ಅಂತೆಯೇ ಭರತನಾಟ್ಯದಿಂದ ಬಹಳವಾಗಿ ಪ್ರೇರಣೆ, ಪ್ರಯೋಜನ ಪಡೆಯುತ್ತಲೇ ಬಂದಿರುವ ಯಕ್ಷಗಾನಾದಿ ಸೋದರಕಲೆಗಳ ಅಭ್ಯಾಸ ಮತ್ತು ಪ್ರಯೋಗಸಂವಿಧಾನದಲ್ಲಿಯೂ ಈ ಪಾದಕ್ರಮಣದ ಆಂಗಿಕಾನ್ವಯವು ಹೊಸ ಚಿಂತನೆಗಳಿಗೆ ಅವಕಾಶ ನೀಡಬಹುದು.

	ಅಡವುಗಳು	**ಅರ್ಥ ಮತ್ತು ಮಾಡುವ ವಿಧಾನ /*ಪರ್ಯಾಯ ಪ್ರಸಿದ್ಧ ಹೆಸರುಗಳು ಆವರಣದ ಒಳಗಿವೆ**
1	ತಟ್ಟಡವು	ಪಾದವನ್ನು ತಟ್ಟಿ ಮಾಡುವ ಅಡವು
2	ಮೆಟ್ಟಡವು	ಪಾದವನ್ನು ಮೆಟ್ಟಿ ಮಾಡುವ ಅಡವು
3	ಕಟ್ಟಡವು	ಪಾದವನ್ನು ಕತ್ತರಿಯಂತೆಕಟ್ಟಿಟ್ಟು ಮಾಡುವ ಅಡವು(ದಿತ್ತೈ/ದಿದ್ದಿತ್ತೈ)
4	ನಾಟಡವು	ಪಾದವನ್ನು ನಾಟಿ (ಹಿಮ್ಮಡಿಯನ್ನು ಊರಿ ಕಾಲಿನ ಬೆರಳುಗಳನ್ನು ಎತ್ತಿ) ಮಾಡುವ ಅಡವು
5	ಎಗರಡವು	ಪಾದಗಳನ್ನು ಎಗರಿಸಿ ಮಾಡುವ ಅಡವು(ಪ್ಲವನ, ಉತ್ಪ್ಲವನ/ ಪೊಯ್ಯಡವು)
6	ಹಾರಡವು	ಪಾದಗಳನ್ನು ನೆಲದಿಂದ ಹಾರಿಸಿ ಮಾಡುವ ಅಡವು(ಕುದಿತ್ತಮೆಟ್ಟು)
7	ಸುತ್ತಡವು	ಪಾದ/ಮೈಯನ್ನು ಸುತ್ತುತ್ತಾ ಮಾಡುವ ಅಡವು(ಭ್ರಮರಿ)
8	ಜಾರಡವು	ಪಾದಗಳನ್ನು ಜಾರಿಸುತ್ತಾ ಮಾಡುವ ಅಡವು
9	ಪಕ್ಕಡವು	ಪಾದಗಳನ್ನು ಜೊತೆಯಾಗಿ ಪಕ್ಕಕ್ಕೆ ಜರುಗಿಸಿ/ನಿಲ್ಲಿಸಿ/ತಾಡಿಸಿ/ಚಿಮ್ಮಿಸಿ ಮಾಡುವ ಅಡವು
10	ಮಂಡಿಅಡವು	ಪ್ರಧಾನವಾಗಿ ಮಂಡಿಯನ್ನು ಬಳಸಿಅಡವು ಮಾಡಲಾಗುತ್ತದೆ. ಇಲ್ಲಿ ಪಾದಗಳನ್ನು ಮುಳುಮಂಡಿಯಲ್ಲಿ ಬರುವಂತೆ ನಿಲ್ಲಿಸಿ ಮಂಡಿಯನ್ನು ನೆಲಕ್ಕೆ ಒತ್ತುತ್ತಾ ಅಥವಾ ಜಾರಿಸಿಕೊಂಡ ಮಾಡುವ ಅಡವು

ಕೆಳಗಿನ ಕೋಷ್ಟಕವು ಈಗಾಗಲೇ ಪ್ರಚಲಿತದಲ್ಲಿರುವ ದಶವಿಧ ಅಡವು ಮತ್ತು ಅಂಗಭೇದಗಳನ್ನಾಧರಿಸಿ ಮಾಡಿದ ಅಡವು ಪರಿಷ್ಕಾರಗಳ ವರ್ಗೀಕರಣದಲ್ಲಿನ ಸಾಮ್ಯ–ವ್ಯತ್ಯಾಸಗಳ ಸಾಧ್ಯತೆಗಳನ್ನು ಹೇಳುತ್ತದೆ.

ಪ್ರಚಲಿತವಿರುವ ದಶವಿಧ ಅಡವುಗಳು	**ಅಂಗಬೇಧಗಳನ್ನಾಧರಿಸಿದ ಅಡವು ವರ್ಗೀಕರಣದ ಪರಿಷ್ಕಾರ**
ತಟ್ಟಡವು	ತಟ್ಟಡವು
ಮೆಟ್ಟಡವು	ಮೆಟ್ಟಡವು

–	ಕಟ್ಟಡವು
ನಾಟಡವು	ನಾಟ್ಟಡವು
ಎಗರುತಟ್ಟಡವು	ಎಗರಡವು
ಎಗರುಮೆಟ್ಟಡವು	ಹಾರಡವು
–	ಸುತ್ತಡವು
ಜಾರಡವು	ಜಾರಡವು
–	ಪಕ್ಕಡವು
ಮಂಡಿ ಅಡವು	ಮಂಡಿ ಅಡವು
ತಟ್ಟುಮೆಟ್ಟಡವು	ಸಂಯೋಜನ ಅಡವು–ತಟ್ಟುಮೆಟ್ಟಡವು
ರಂಗಾಕ್ರಮಣ	ಸಂಯೋಜನ ಅಡವು–ಎಗರು ತಟ್ಟು ಕಟ್ಟಡವು
ತೀರ್ಮಾನ ಅಡವು	ಸಂಯೋಜನ ಅಡವು– ನಾಟ್ಟು ತಟ್ಟಡವು

ಸಂಯೋಜನೆಯ ಅಡವುಗಳು

ಒಂದಕ್ಕಿಂತ ಹೆಚ್ಚಿನ ಪ್ರಾಥಮಿಕ ಅಡವುಗಳು ಒಟ್ಟಾದರೆ ಅವುಗಳನ್ನು ಸಂಯೋಜನೆಯ ಅಡವುಗಳೆಂದು ಕರೆಯಬಹುದು ಎಂಬುದು ಲೇಖಿಕೆಯ ತರ್ಕ. ಹೀಗೆ ಅಡವುಗಳು ಸಂಯೋಗವಾಗುವ ರೀತಿ ಮತ್ತು ಅವುಗಳ ಹೆಸರನ್ನು ಕೆಳಕಂಡಂತೆ ಪಟ್ಟಿ ಮಾಡಲಾಗಿದೆ. ಇದು ಈಗಾಗಲೇ ಪ್ರಚಲಿತದಲ್ಲಿ ಅಭ್ಯಾಸ ಮತ್ತು ಪ್ರಯೋಗಕ್ರಮದಲ್ಲಿರುವ ಕೆಲವು ಅಡವುಗಳನ್ನು ಆಧರಿಸಿ ಮಾಡಿದ ವಿಭಾಗೀಕರಣ. ಇಂತಹ ಹಲವು ಸಂಯೋಗಗಳನ್ನು ಹಿಗ್ಗಿಸಿಕೊಳ್ಳುವುದು ಕಲಾವಿದರ ಸೃಷ್ಟಿಶೀಲ ಜಾಣ್ಮೆಗೆ ಬಿಟ್ಟಿರುವ ವಿಚಾರ.

ಪ್ರಾಥಮಿಕ ಅಡವುಗಳಲ್ಲಿ ಸಂಯೋಗ ಸಂಯೋಜನಾ ಅಡವುಗಳು

ತಟ್ಟಡವು +ಮೆಟ್ಟಡವು = ತಟ್ಟುಮೆಟ್ಟಡವು

ತಟ್ಟಡವು + ನಾಟ್ಟಡವು= ನಾಟ್ಟುತಟ್ಟಡವು

ತಟ್ಟಡವು +ಕಟ್ಟಡವು = ತಟ್ಟು ಕಟ್ಟಡವು (ತಾತ್ಕೈತ್ಕೈತ ಮತ್ತು ರಂಗಾಕ್ರಮಣ/ಪೆರಿಯ ಅಡವು)

ನಾಟ್ಟಡವು + ಕಟ್ಟಡವು= ನಾಟ್ಟುಕಟ್ಟಡವು

ನಾಟ್ಟಡವು + ತಟ್ಟಡವು = ನಾಟ್ಟುತಟ್ಟಡವು (ತೀರ್ಮಾನ ಮತ್ತು ಮುಕ್ತಾಯ ಅಡವು)

ಎಗರು+ ಮೆಟ್ಟು = ಎಗರುಮೆಟ್ಟು ಅಥವಾ ಎಗರಡವು

ಎಗರು +ತಟ್ಟು = ಎಗರುತಟ್ಟು ಅಥವಾ ತದ್ಧಿತ್ತ ಅಡವು

ಎಗರು+ತಟ್ಟು+ನಾಟ್ಟಡವು= ತಾಹತಜೊಂತರಿತಕೋರ್ವೆ ಅಡವು

ಎಗರು +ಕಟ್ಟು = ಕರ್ತರೀ ಅಡವು

ಜಾರು+ಮಂಡಿ = ಜಾರುಮಂಡಿ ಅಡವು (ಸರಕ್ಕ್/ ತಾಂಡವ ಅಡವು)

ತಟ್ಟು+ಮೆಟ್ಟು+ಕಟ್ಟು+ನಾಟ್ಟು+ಎಗರು+ಹಾರು+ಸುತ್ತು+ಮಂಡಿ+ಜಾರು= ಮಿಶ್ರ ಅಡವು (ತತ್ತೈತಾಂ ಸರಣಿ – ಶಿಖರ ಅಡವು)

ಅಡವಿಗೆ ಸಂಬಂಧಿಸಿದ ಅರಮಂಡಿ ಸ್ಥಾನಕದ ಬಗ್ಗೆ ಲೇಖಿಕೆಯ ಹೊಳಹುಗಳು

ಸಾಮಾನ್ಯವಾಗಿ ಹೆಚ್ಚಿನಎಲ್ಲಾ ಅಡವುಗಳಿಗೆ ಭರತನಾಟ್ಯದ ಮುಖ್ಯ ಸ್ಥಾನಕ ಅರಮಂಡಿ/

ಅರ್ಧ ಮಂಡಿ. ಅರ/ಅರೆ ಇದು ತಮಿಳು/ಕನ್ನಡದಲ್ಲಿ ಅರ್ಧ ಎನ್ನುವುದನ್ನು ಸೂಚಿಸಲು ಇರುವ ಪದ. ಇಂಗ್ಲೀಷ್ ಆಡು ಭಾಷೆಯಲ್ಲಿ ಹಾಫ್‌ಸಿಟ್ಟಿಂಗ್ ಎಂದು ಕರೆಯುತ್ತಾರೆ. ಇದನ್ನು ಚತುರಶ್ರಸ್ಥಾನಕ, ಅರ್ಧಮಂಡಲ, ಮಂಡಲ, ಆಯತಸ್ಥಾನಕ ಎಂದು ಕರೆಯುವ ಪದ್ಧತಿಯೂ ಶಾಸ್ತ್ರಗಳಲ್ಲಿ ಇದೆ. ಸಂಗೀತರತ್ನಾಕರ ಗ್ರಂಥದಲ್ಲಿ ಹೇಳಿದ ಜಾನುಭೇದಗಳಲ್ಲಿ ಅರ್ಧಕುಂಚಿತ ಎಂಬ ಹೆಸರಿನ ಉಪಾಂಗ ವ್ಯಾಯಾಮವೂ ಅರಮಂಡಿಯನ್ನೇ ಸೂಚಿಸುತ್ತದೆ.ಮುಳುಮಂಡಿ ಅಥವಾ ಉಕ್ಕಾರುಮಂಡಿ ಎಂದು ಕರೆಯಲ್ಪಡುವ ಮತ್ತೊಂದು ಸ್ಥಾನಕದಲ್ಲಿ ಅರೆಮಂಡಿಯನ್ನು ಪೂರ್ತಿಯಾಗಿ ಬಗ್ಗಿಸಿ ಕಾಲುಗಳ ಮೇಲೆ ಕೂರಲಾಗುತ್ತದೆ. ಇದಕ್ಕೆ ಕುಂಚಿತಜಾನು ಎಂಬ ಹೆಸರೂ ಪ್ರಸಿದ್ಧವಾಗಿ ಬಳಕೆಯಲ್ಲಿದೆಯಾದರೂ ಸಂಗೀತ ರತ್ನಾಕರ ಲಕ್ಷಣಗ್ರಂಥವು ಕುಂಚಿತಜಾನು ಎಂಬುದನ್ನು ಕುಬ್ಜರಂತೆ ಮಂಡಿಯನ್ನು ಪರಸ್ಪರ ತಿರುಗಿಸಿಟ್ಟುಕೊಳ್ಳುವ ಕ್ರಮಕ್ಕೆ ಲಕ್ಷಣವಾಗಿ ಹೇಳಿದೆ. ನತ ಎಂಬ ಹೆಸರು ಮುಳುಮಂಡಿಯ ಸ್ಥಾನಕ್ಕೆ ಜಾನುಭೇದಗಳಲ್ಲಿ ಸಂಗೀತ ರತ್ನಾಕರದಲ್ಲಿ ಬಳಕೆಯಾಗಿರುವ ಹೆಸರು.

ಅರಮಂಡಿಯ ಪಾರಂಪರಿಕ ಪ್ರಯೋಗದಂತೆ ಮಂಡಿಗಳನ್ನು ವಿರುದ್ಧದಿಕ್ಕುಗಳಿಗೆ ಪಕ್ಕಕ್ಕೆ ತಿರುಗಿಸುತ್ತಾ ದೇಹದ ಮೇಲ್ಭಾಗದ ಭಾರವನ್ನು ಮಂಡಿಗಳಿಗೆ ವರ್ಗಾಯಿಸಿ ಬೆನ್ನನ್ನು ನೇರವಾಗಿಸಿ ಕೂತಂತೆ ಮಾಡುವುದು ಕ್ರಮ. ಅದಕ್ಕೆ ಅನುಗುಣವಾಗಿ ಪಾದಗಳೂ ಅಕ್ಕಪಕ್ಕಕ್ಕೆ (ಸುಮಾರಾಗಿ 120–140 ಕೋನ) ಚಾಚಿಕೊಂಡಿರಬೇಕು. ಕೈಗಳನ್ನು ಸೊಂಟಕ್ಕೆ ಕಟ್ಟಿಕೊಳ್ಳುವುದು ಪದ್ಧತಿ.

ಆದರೆ ನಾಟ್ಯಶಾಸ್ತ್ರದಲ್ಲಿ ಹೇಳಲಾದ ಮಂಡಲಭೇಧಗಳಿಗೂ ಭರತನಾಟ್ಯದ ಆಧಾರಗ್ರಂಥವೆಂದು ನಂಬಿಕೊಂಡು ಬರಲಾಗುತ್ತಿರುವ ನಂದಿಕೇಶ್ವರನ ಅಭಿನಯದರ್ಪಣದ ಮಂಡಲಭೇದಗಳಿಗೂ ಆಶಯದಲ್ಲಿ ಒಂದಕ್ಕೊಂದು ತಾಳೆಯಾಗುವುದಿಲ್ಲ. ನಾಟ್ಯಶಾಸ್ತ್ರದಲ್ಲಿ ಮಂಡಲವು ಸ್ಥಾನಕವಾಗಿಯೂ, ಯುದ್ಧಗತಿಯ ಚಲನೆಗಳು ಎಂಬುದಾಗಿಯೂ ಪ್ರಯೋಗದಲ್ಲಿದೆ. ನಾಟ್ಯಶಾಸ್ತ್ರದ ಮಂಡಲಚಲನೆಗಳಲ್ಲಿ ತಲಾ ಹತ್ತು ಪ್ರಕಾರಗಳಿದ್ದು ಭೂಮಿ ಮತ್ತು ಆಕಾಶಕೀ ಎಂದು ವಿಭಾಗಿಸಲ್ಪಟ್ಟಿವೆ. ಆದರೆ ಅಭಿನಯದರ್ಪಣದ ಸ್ಥಾನಕ ಮಂಡಲಗಳು ಒಟ್ಟು 6. ಇವು ಮಂಡಲಭೇದಗಳಂತೆ ಚಲನೆಗೆ ಒದಗುವ ಸ್ಥಾನಕಗಳಲ್ಲ. ನಿರ್ದಿಷ್ಟ ಪಾತ್ರಗಳನ್ನು ಹೇಳುವಾಗ ನಿಲ್ಲುವುದಕ್ಕೆ ಬಳಸಲಾಗುತ್ತದೆ.

ಅರ್ಧಮಂಡಿ ಸ್ಥಾನಕಕ್ಕೆ ಮಂಡಿಗಳು ಹೆಚ್ಚು ಶ್ರಮ, ನೋವನ್ನು ತಾಳದಂತೆ ಬಗ್ಗಿಸಿಕೊಂಡು ಹಿತವಾಗಿ ಕುಳಿತುಕೊಳ್ಳುವುದು ಮಂಡಿಗಳ ಮತ್ತು ಬೆನ್ನಿನ ಆರೋಗ್ಯದ ದೃಷ್ಟಿಯಿಂದಲೂ ಕ್ಷೇಮ. ಅರಮಂಡಿಯಲ್ಲಿ ನಿಂತಾಗ ಮಂಡಿ ಮತ್ತು ಪಾದಗಳ ಸಮನ್ವಯದಿಂದ ತ್ರಿಕೋನ (ತ್ರ್ಯಶ್ರ) ಏರ್ಪಡುವಂತಿದ್ದರೆ ಅದುವೇ ಸರಿಯಾದ ನಿಲುವು. ನರ್ತನದಲ್ಲಿಯೂ ದೇಹದ ಸೌಖ್ಯವೂ ತ್ರ್ಯಶ್ರದಲ್ಲೇ ಇದೆ. ಶಾಸ್ತ್ರಾದಿ ಗ್ರಂಥಗಳೂ ಮಂಡಲ ಸ್ಥಾನಕಕ್ಕೆ ತ್ರ್ಯಶ್ರಸ್ಥಾನದ ಸೂಚನೆಯನ್ನೇ ಹೇಳಿವೆ. ಪಾರ್ಶ್ವಕೋನ ಅದರಲ್ಲೂ ಪೃಷ್ಠವನ್ನು ಹಿಂದೊತ್ತಿ ಅರ್ಧ ಮಂಡಲದಲ್ಲಿ ನಿಲ್ಲುವ ಪಾರ್ಶ್ವಪಾದಕ್ರಮ ಇತ್ತೀಚಿನ ದಶಕದಲ್ಲಿ ಪ್ರಚಲಿತವಾದ ಶಿಸ್ತಾಗಿ ಬಳಕೆಗೆ ಬಂದಿದೆಯಷ್ಟೇ. ತೀರಾ ಪಾರ್ಶ್ವಕ್ಕೆ 180 ಕೋನದಲ್ಲಿ ಪಾದಗಳನ್ನು ದೀರ್ಘಾವಧಿಗೆ ಇಟ್ಟುಕೊಂಡರೆ ನಿಧಾನವಾಗಿ ಮಧ್ಯ–ಇಳಿವಯಸ್ಸಿಗೆ ಮಂಡಿಯ ಸೌಖ್ಯ ತಪ್ಪಿ ಆರೋಗ್ಯದ ಸಮಸ್ಯೆಗಳು ಕಾಡುತ್ತವೆ. ಇದಕ್ಕೆ ಸಾಕ್ಷಿಯೋ ಎಂಬಂತೆ ಭರತನಾಟ್ಯದ ಅನೇಕ ಕಲಾವಿದರು ಮಂಡಿಸಮಸ್ಯೆ, ಬೆನ್ನುಹುರಿ ಸಮಸ್ಯೆಗಳಿಂದ ಬಳಲುವ ಅನೇಕ ನಿದರ್ಶನಗಳನ್ನು ಪ್ರಸ್ತುತ ಕಾಣಲೂಬಹುದು. ಮೂಳೆವೈದ್ಯರೂ ಇದನ್ನು ಅಂಗೀಕರಿಸುತ್ತಾರೆ ಎಂಬುದು ಮಹತ್ತ್ವದ

ಅಂಶ.

ಪರಾಮರ್ಶನ ಗ್ರಂಥಗಳು

ಭರತಮುನಿಯ ನಾಟ್ಯಶಾಸ್ತ್ರದ ಬೇರೆ ಬೇರೆ ಆವೃತ್ತಿಗಳು

ನಂದಿಕೇಶ್ವರನ ಅಭಿನಯದರ್ಪಣದ ವಿವಿಧ ಆವೃತ್ತಿಗಳು

ಶಾರ್ಙ್ಗದೇವನ ಸಂಗೀತ ರತ್ನಾಕರ

ಜಾಯಸೇನಾಪತಿಯ ನೃತರತ್ನಾವಳೀ

ತುಲಜಾಜಿಯ ಸಂಗೀತ ಸಾರಾಮೃತ

Karana- Common dance code of India and Indonesia- Research work by Dr. Padma subhramaniam

ನೃತ್ಯಮಾರ್ಗಮುಕುರ– ಡಾ.ಮನೋರಮಾ ಬಿ.ಎನ್ ರ ಅಧ್ಯಯನಕೃತಿ, 2011

ಕರ್ನಾಟಕ ಪ್ರಾಥಮಿಕ ಪರೀಕ್ಷಾ ಮಂಡಳಿಯ ಜೂನಿಯರ್ ಭರತನಾಟ್ಯ ಪರೀಕ್ಷಾವಿಭಾಗದ ಪಾಠ್ಯಕೃತಿ

ಈ ಲೇಖನದ ಕುರಿತಾದ ಹೆಚ್ಚಿನ ವಿವರಗಳನ್ನು ಲೇಖಕಿಯು ಭರತನಾಟ್ಯಕ್ಕಾಗಿ ಸಿದ್ಧಪಡಿಸಿ ನೂಪುರಭ್ರಮರಿ ಮತ್ತು ಕಲಾಗೌರಿಯಿಂದ ಪ್ರಕಾಶಿತವಾದ ಪಾಠ್ಯಕೃತಿ – 'ಭರತನಾಟ್ಯ ಬೋಧಿನಿ'ಯಲ್ಲಿಯೂ(2018) ಪ್ರಸ್ತಾಪಿಸಲಾಗಿದ್ದು, ಪಾಠ್ಯ ಮತ್ತು ಅಧ್ಯಯನಮಂಡನೆಯ ದೃಷ್ಟಿಯಿಂದ ಇಲ್ಲಿ ಲೇಖನರೂಪದಿಂದ ಪ್ರತ್ಯೇಕವಾಗಿ ಸಿದ್ಧಪಡಿಸಲಾಗಿದೆ.

✠✠✠

ಬೆಳಕನರಸುತ್ತ
ನಡೆದಕುರುಡನಿಗೆ
ಜೊತೆಯ ಬಯಸುವ
ನೆರಳ ಸ್ನೇಹ ಬೆಳೆದಿತ್ತು

ಪಂಚತಂತ್ರ ಕಥೆಗಳಲ್ಲಿ ವ್ಯಕ್ತವಾಗುವ ಪ್ರಾಣಿ ಬೇಟೆಯ ನಿರಾಕರಣೆಯ ನಿಲುವುಗಳು

ರವಿಶಂಕರ ಜಿ.ಕೆ.
ಪಿಹೆಚ್.ಡಿ. ಸಂಶೋಧನ ವಿದ್ಯಾರ್ಥಿ
ಕನ್ನಡ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನ ವಿಭಾಗ
ಸರಕಾರಿ ಕಾಲೇಜು, ಕಾಸರಗೋಡು

ಬೇಟೆ ಮನುಷ್ಯನ ಮೂಲಭೂತ ಪ್ರವೃತ್ತಿಗಳಲ್ಲಿ ಒಂದು. ಕ್ರೂರ ಪ್ರಾಣಿಗಳಿಂದ ಸ್ವಯಂ ರಕ್ಷಣೆಯ ಅನಿವಾರ್ಯತೆಗಾಗಿ, ಆಹಾರಕ್ಕಾಗಿ, ವಿನೋದಕ್ಕಾಗಿ ಹೀಗೆ ಬೇರೆ ಬೇರೆ ಕಾರಣಗಳಿಂದ ಮನುಷ್ಯ ಪ್ರಾಣಿಗಳನ್ನು ಬೇಟೆಯಾಡುತ್ತಾ ಬಂದಿದ್ದಾನೆ. ಹಾಗಾಗಿ ಕನ್ನಡ ಸಾಹಿತ್ಯದಲ್ಲೂ ಪ್ರಾಣಿಬೇಟೆ ಕುರಿತ ವಿಚಾರಗಳು ಸಾಕಷ್ಟು ಅಭಿವ್ಯಕ್ತಗೊಂಡಿದೆ. ಪ್ರಾಚೀನ ಕನ್ನಡ ಸಾಹಿತ್ಯವನ್ನೇ ವಿಶೇಷವಾಗಿ ಗಮನಿಸುವುದಿದ್ದರೆ, ಅಷ್ಟಾದಶ ವರ್ಣನೆಗಳಲ್ಲಿ ಕಾಡಿನ ಜೊತೆಗೆ ಬೇಟೆಯನ್ನು ವರ್ಣಿಸಿರುವ ಹಲವಾರು ಉದಾಹರಣೆಗಳು ಪ್ರಾಚೀನ ಚಂಪೂ ಕಾವ್ಯಗಳಲ್ಲಿ ಉಪಲಬ್ಧವಿದೆ. ಅಲ್ಲದೆ ಬೇಟೆಯನ್ನು ಸಪ್ತವ್ಯಸನಗಳಲ್ಲಿ ಒಂದು ಎಂದು ಪರಿಗಣಿಸಿರುವುದರಿಂದ ಸಾಹಿತ್ಯ ಕೃತಿಗಳಲ್ಲಿ ಬೇಟೆಯ ಕುರಿತಾದ ಪ್ರಸ್ತಾಪಗಳು ಹಲವು ಕಡೆಗಳಲ್ಲಿ ಬಂದಿವೆ.

ಸಾಹಿತ್ಯದಲ್ಲಿ ಅಭಿವ್ಯಕ್ತಗೊಂಡಿರುವ ಪ್ರಾಣಿ ಬೇಟೆಯ ಕುರಿತಾಗಿ ಮತ್ತು ಬೇಟೆಯನ್ನು ಜನಪದದ ಆಚರಣೆ ಎನ್ನುವ ನೆಲೆಗಳಲ್ಲಿ ಪರಿಗಣಿಸಿ ಬಹಳಷ್ಟು ಅಧ್ಯಯನಗಳು ಕೂಡ ನಡೆದಿವೆ. ಆದರೆ ಅಲ್ಲಿ ಬೇಟೆಯನ್ನು ನಿರಾಕರಿಸುವ ಪ್ರಸಂಗಗಳ ಕುರಿತಾಗಿ ಅಷ್ಟಾಗಿ ಗಮನಹರಿಸಿದಂತಿಲ್ಲ. ಜೈನ ಕವಿಗಳು ತಮ್ಮ ಚಂಪೂ ಸಾಹಿತ್ಯದಲ್ಲಿ ಪ್ರತಿಪಾದಿಸುವ ಅಹಿಂಸೆಯ ಕುರಿತಾಗಿ ಸಾಕಷ್ಟು ಚರ್ಚೆಗಳು ನಡೆದಿವೆಯಾದರೂ ನೇರವಾಗಿ ಬೇಟೆಯನ್ನು ನಿರಾಕರಿಸುವ ಪ್ರಸಂಗಗಳ ಕುರಿತಂತೆ ಹೆಚ್ಚಿನ ಚರ್ಚೆ–ಅಧ್ಯಯನಗಳು ನಡೆದಿಲ್ಲ.

ದುರ್ಗಸಿಂಹನಿಂದ ರಚಿತವಾಗಿರುವ ಕರ್ನಾಟಕ ಪಂಚತಂತ್ರಂ ಕೃತಿಯ ಭೇದ ಪ್ರಕರಣದಲ್ಲಿ ಸಂಜೀವಕ ಮತ್ತು ಪಿಂಗಳಕನ ನಡುವೆ ನಡೆಯುವ ಸಂಭಾಷಣೆಯಲ್ಲಿ ಪ್ರಾಣಿಹಿಂಸೆಯನ್ನು ಖಂಡಿಸುವ ಸುದೀರ್ಘ ಪ್ರಸಂಗವಿದೆ. ಈ ಪ್ರಸಂಗವನ್ನು ಇಟ್ಟುಕೊಂಡು ಪಂಚತಂತ್ರ ಕೃತಿಯ ಮೇಲಾಗಿರುವ ಜೈನಧರ್ಮದ ಪ್ರಭಾವವನ್ನು ಡಾ.ವರದರಾಜ ಹುಯಿಲಗೋಳ, ರಂ.ಶ್ರೀ. ಮುಗಳಿ ಮುಂತಾದವರು ಚರ್ಚಿಸಿದ್ದಾರೆ . ಈ ಪ್ರಸಂಗದಲ್ಲಿ ಪ್ರಾಣಿಪಾತ್ರವೊಂದು ಪ್ರಾಣಿಹಿಂಸೆಯನ್ನು ಖಂಡಿಸುತ್ತದೆ.

ಪಂಚತಂತ್ರದ ಕಥೆಯ ಪೀಠಿಕಾ ಭಾಗದಲ್ಲಿ ನಿರೂಪಿತಗೊಂಡಿರುವಂತೆ ಅದರಲ್ಲಿರುವ ಕಥೆಗಳೆಲ್ಲವೂ ಮೃಗೀಯ ವರ್ತನೆಯನ್ನು, ಹಿಂಸಾಪ್ರವೃತ್ತಿಯನ್ನು ರೂಢಿಸಿಕೊಂಡಿದ್ದ ಮೂವರು ರಾಜಕುಮಾರರನ್ನು ಸರಿಯಾದ ದಾರಿಗೆ ತರುವ ಉದ್ದೇಶದಿಂದ ರಚಿತವಾದುದಾಗಿದೆ. ಅಲ್ಲದೆ ಆ ಮೂವರು ರಾಜಕುಮಾರರು ಬೇಟೆಗೆ ಹೊರಟಿದ್ದ

ಸಂದರ್ಭದಲ್ಲಿಯೇ ಈ ಕಥೆಗಳು ನಿರೂಪಿತವಾಗುತ್ತದೆ ಎಂಬುದು ಗಮನಾರ್ಹ. ಹಾಗಾಗಿ ಮನುಷ್ಯ ಪ್ರಾಣಿಗಳನ್ನು ಬೇಟೆಯಾಡುವ ಬಗೆಗೆ ಕವಿಗೆ ಅಸಹನೆ ಇದೆ. ಅಲ್ಲದೆ ಕೃತಿಯುದ್ದಕ್ಕೂ ಮನುಷ್ಯ ಪ್ರಾಣಿಗಳನ್ನು ಬೇಟೆಯಾಡುವ ಸಂದರ್ಭ ಬಂದಾಗಲೆಲ್ಲ ಬೇಟೆಯ ಕುರಿತಾದ ಖಂಡನೆ ವ್ಯಕ್ತವಾಗುತ್ತದೆ. ಪಂಚತಂತ್ರದ ಹಲವು ಕಥೆಗಳಲ್ಲಿ ಒಂದು ಪ್ರಾಣಿ ಇನ್ನೊಂದು ಪ್ರಾಣಿಯನ್ನು ಬೇಟೆಯಾಡುವ ಕಾಡಿನ ಸಹಜ ನಿಯಮವನ್ನು ತಿರಸ್ಕರಿಸುವ ಕಥೆಗಳಿರುವುದು ಕೂಡ ಗಮನಾರ್ಹ.

ರಾಜನೀತಿಯ ಬೋಧನೆ ಪಂಚತಂತ್ರ ಕಥೆಗಳ ಮುಖ್ಯ ಉದ್ದೇಶವಾಗಿರುವುದರಿಂದ ಇದರಲ್ಲಿ ಬರುವ ಪ್ರಾಣಿಪಾತ್ರಗಳು ಮನುಷ್ಯ ಪಾತ್ರಗಳಿಗೆ ಸಂವಾದಿಯಾಗಿ ಬಂದಿರುವಂಥದ್ದು. ಹಾಗಾಗಿ ಇಲ್ಲಿ ಬರುವ ಪ್ರಾಣಿಗಳು ಮನುಷ್ಯ ವ್ಯವಹಾರಗಳನ್ನು ರೂಢಿಸಿಕೊಂಡ ಪ್ರಾಣಿಗಳು ಮಾತ್ರ. ಹಾಗಿದ್ದರೂ ಕೂಡ ಕವಿ ಪ್ರಾಣಿಗಳನ್ನು, ಪ್ರಾಣಿಪಾತ್ರಗಳ ವರ್ತನೆಗಳನ್ನು ಚಿತ್ರಿಸುವಲ್ಲಿ ಬಹಳ ಸೂಕ್ಷ್ಮತೆಯನ್ನು ವಹಿಸಿದ್ದಾನೆ. ಆತ ಪ್ರಾಣಿಜಗತ್ತಿನ ಸಹಜ ವ್ಯವಹಾರಗಳನ್ನು ಮನುಷ್ಯ ಜಗತ್ತಿನ ಕೃತಕ ರೀತಿನೀತಿಗಳ ಚೌಕಟ್ಟಿನೊಳಗೆ ತಂದು ನಿರೂಪಿಸುವ ಕೆಲಸವನ್ನು ಮಾಡುತ್ತಾನೆ.

ಕರ್ಣಾಟಕ ಪಂಚತಂತ್ರದ ಭೇದಪ್ರಕರಣದಲ್ಲಿ ಒಟ್ಟು ಮೂರು ಕಥೆಗಳಲ್ಲಿ ಮನುಷ್ಯನಿಂದ ಪ್ರಾಣಿಗಳ ಬೇಟೆ, ಬೇಟೆಗಾರನ ಕುರಿತ ಉಲ್ಲೇಖಗಳಿವೆ. ವಿಶ್ವಾಸ ಪ್ರಕರಣದಲ್ಲಿ ಪಾರಿವಾಳವೊಂದು ಬೇಟೆಗಾರನ ಮೇಲೆ ಕನಿಕರಗೊಂಡು ಸ್ವಯಂ ಆಹಾರವಾಗುವ ಕಥೆ ಇದೆ. ಮಿತ್ರಕಾರ್ಯಪ್ರಕರಣದುದ್ದಕ್ಕೂ ಪಾರಿವಾಳ, ಇಲಿ, ಕಾಗೆ, ಆಮೆ, ಸಾರಂಗ ಪ್ರಾಣಿಗಳು ಸಂಘಟಿತರಾಗಿ ಬೇಟೆಯಾಡುವ ಮನುಷ್ಯ ಪ್ರಯತ್ನದ ವಿರುದ್ಧ ಹೋರಾಡುತ್ತವೆ.

ಭೇದಪ್ರಕರಣದಲ್ಲಿರುವ 'ಉಪಕಾರ ಮಾಡಿ ಕೆಟ್ಟ ಕಪಿಯ ಕಥೆ' ಯಲ್ಲಿ ಹುಲಿಯೊಂದು ಬೇಟೆಗಾರನನ್ನು ಅಟ್ಟಿಸಿಕೊಂಡು ಬಂದಾಗ ಹುಲಿಯಿಂದ ಪಾರಾಗುವುದಕ್ಕೆ ಕಪಿಯೊಂದು ಸಹಕರಿಸುತ್ತದೆ. ಹುಲಿ ಬೇಟೆಗಾರನ ಕುರಿತಂತೆ ಕಪಿಯಲ್ಲಿ ಹೇಳುವ ಈ ಮಾತುಗಳು ಗಮನಾರ್ಹ.

"ಎಲೈ ಶಾಖಾಚರ, ನೀನೀ ವನೇಚರನಂ ತೆಗೆದೆನಗೆಯ್ದಲ್ಬಾರದಂತು ದೂರಮಾಡಲ್ವೇಡ. ಇವನಪ್ಪೊಡೆ, ಮಹಾಪಾತಕಂ, ವಿಶ್ವಾಸಘಾತುಕಂ, ತನಗಿಂಬುವರೆ ನಿನಗಂ ತಪ್ಪದಿರ್ಪನಲ್ಲಿವನನದಱಿಂ ಕೆಡೆನೂಂಕು, ಕೊಂದು ತಿಂದಪೆನೆಂದೊಡಾ....." (ಕರ್ನಾಟಕ ಪಂಚತಂತ್ರಂ, ಎನ್.ಅನಂತರಂಗಾಚಾರ್, ಪು.ಸಂ.82)

ಇಲ್ಲಿ ಬೇಟೆಗಾರನನ್ನು ಹುಲಿ ಮಹಾಪಾತಕ, ವಿಶ್ವಾಸಘಾತುಕ, ಸಮಯ ನೋಡಿ ನಿನಗೂ ಕೆಡುಕು ಉಂಟುಮಾಡದೇ ಇರಲಾರನು ಎಂದು ವರ್ಣಿಸುತ್ತದೆ. ಇದಕ್ಕೆ ದೃಷ್ಟಾಂತ ಕೊಡುವುದಕ್ಕಾಗಿ ಹುಲಿಯು ಬೇಟೆಗಾರನ ಕುರಿತಾಗಿ ಒಂದು ಕಥೆಯನ್ನು ಹೇಳುತ್ತದೆ. ಹುಲಿಯು ನಿರೂಪಿಸುವ 'ಶಿವಭೂತಿಯ ಕಥೆ'ಯಲ್ಲಿ ಬೇಟೆಗಾರ, ಹುಲಿ, ಹಾವು, ಕಪಿ ನಾಲ್ವರು ಒಂದು ಬಾವಿಗೆ ಬೀಳುತ್ತಾರೆ. ಆ ದಾರಿಯಲ್ಲಿ ತೀರ್ಥಯಾತ್ರೆಗೆ ಬಂದ ಶಿವಭೂತಿ ಎಂಬ ಬ್ರಾಹ್ಮಣ ಮೊದಲು ಬಾವಿಯಲ್ಲಿದ್ದ ಹುಲಿಯನ್ನು ರಕ್ಷಿಸಿದಾಗ ಅದು ಬೇಟೆಗಾರನನ್ನು ಮಾತ್ರ ರಕ್ಷಿಸದಂತೆ ಎಚ್ಚರಿಸಿ ಪ್ರತ್ಯುಪಕಾರದ ಭರವಸೆ ನೀಡಿ ಮುಂದಕ್ಕೆ ಹೋಗುತ್ತದೆ. ಆದರೆ ಶಿವಭೂತಿ ಉಳಿದ ಪ್ರಾಣಿಗಳ ಜೊತೆಗೆ ಬೇಟೆಗಾರನನ್ನು ಕೂಡ ಮೇಲೆ ಎತ್ತುತ್ತಾನೆ.

ಈ ಕಥೆಯಲ್ಲಿ ಹುಲಿಯ ಮಾತುಗಳಲ್ಲಿ ಬೇಡನ ವ್ಯಕ್ತಿತ್ವದ ಚಿತ್ರಣ ಈ ರೀತಿಯಾಗಿ ಬರುತ್ತದೆ.–

“.....ಈ ವ್ಯಾಧನಂ ತೆಗೆಯದಿರಿಂ. ನೀಚಂಗೆನಿತುಪಕಾರಂಗೆಯ್ದೊಡಮೊಳ್ಳಿತ್ತುಗೆಯ್ವನಲ್ಲದೆಂತೆನೆ :

ಶ್ಲೋ॥ ಉಪಕಾರೋಪಿ ನೀಚಾನಾಂ ಅಪಕಾರಾಯ ಕಲ್ಪತೇ

ಪಯಃಪಾನಂ ಭುಜಂಗಾನಾಂ ಕೇವಲಂ ವಿಷವರ್ಧನಂ ॥70॥

ಟೀ॥ ನೀಚಂಗುಪಕಾರವಂ ಮಾಡಿದೊಡೆ ಅಪಕಾರವನೆ ಮಾಡುವನಲ್ಲದೆ ಶಾಂತನಾಗಲರಿಯಂ, ಅದೆಂತೆಂದೊಡೆ ಪಾವಿಂಗೆ ಹಾಲನೆರೆಕೆದೊಡೆ ವಿಷಂ ಪೆರ್ಚುವಂತೆ– ಎಂಬೀ ಶ್ಲೋಕಾರ್ಥಮನವಧರಿಸಿ ನೆಗಟ್ಟುದೆಂದು ಪುಲಿ ಪೇಟ್ದು ಪೋಪುದುಂ;....” (ಕರ್ನಾಟಕ ಪಂಚತಂತ್ರಂ, ಎನ್.ಅನಂತರಂಗಾಚಾರ್, ಪು.ಸಂ.83–84)

ಇಲ್ಲಿಯೂ ಕೂಡ ಬೇಟೆಗಾರ ನೀಚನಾಗಿಯೇ ಚಿತ್ರಿತನಾಗುತ್ತಾನೆ. ನೀಚನಾದವನಿಗೆ ಎಷ್ಟು ಉಪಕಾರವನ್ನು ಮಾಡಿದರೂ ಆತ ಒಳ್ಳೆಯದನ್ನು ಮಾಡಲಾರ, ಹಾವಿಗೆ ಹಾಲೆರದರೂ ವಿಷ ಅಧಿಕವೇ ಆಗುತ್ತದೆ ಎಂಬುದಾಗಿ ಶಿವಭೂತಿಯನ್ನು ಎಚ್ಚರಿಸುತ್ತದೆ. ತೀರ್ಥಯಾತ್ರೆ ಮುಗಿಸಿ ಬಂದ ಶಿವಭೂತಿಗೆ ಉಳಿದ ಮೂರು ಪ್ರಾಣಿಗಳು ಪ್ರತ್ಯುಪಕಾರವನ್ನು ಮಾಡಿದರೆ ಬೇಟೆಗಾರ ಮಾತ್ರ ಕೇಡನ್ನೆ ಬಯಸುತ್ತಾನೆ. ಹುಲಿಯು ಕೊಟ್ಟಿದ್ದ ಅತ್ಯಮೂಲ್ಯ ಆಭರಣಗಳನ್ನು ನೋಡಿದ ಬೇಟೆಗಾರ ಶಿವಭೂತಿಗೆ ಕೆಡುಕು ಉಂಟುಮಾಡುವುದಕ್ಕಾಗಿ ರಾಜನ ಬಳಿ ಹೋಗಿ ಶಿವಭೂತಿಯು ನಿಮ್ಮ ಆಭರಣಗಳನ್ನು ಕದ್ದಿರುವುದಾಗಿ ದೂರುತ್ತಾನೆ. ಅದರಂತೆ ಶಿವಭೂತಿಗೆ ಸೆರೆಮನೆ ಶಿಕ್ಷೆ ಲಭಿಸುತ್ತದೆಯಾದರೂ ಈ ಹಿಂದೆ ತಾನು ರಕ್ಷಿಸಿದ್ದ ಹಾವಿನ ಸಹಾಯದಿಂದ ಅದರಿಂದ ಪಾರಾಗಿ ಬೇಟೆಗಾರನಿಗೆ ಶಿಕ್ಷೆಯಾಗುವಂತೆ ಮಾಡುತ್ತಾನೆ.

ಈ ಕಥೆಯನ್ನು ಕಪಿಗೆ ಹೇಳಿದ ಹುಲಿಯು ಆ ಬೇಟೆಗಾರನಂತೆಯೆ ಈತನೂ ಪಾಪಕರ್ಮದವನಾಗಿದ್ದಾನೆ, ಅವನನ್ನು ಕೆಳಗೆ ನೂಕು ಎಂದು ಪರಿಪರಿಯಾಗಿ ಕೇಳುತ್ತದೆ. ಆದರೆ ಕಪಿಯು ಹುಲಿ ಹೇಳಿದ ಮಾತನ್ನು ಕೇಳುವುದಿಲ್ಲ. ಶರಣಾಗತನಾಗಿರುವ ಈ ಬೇಟೆಗಾರನನ್ನು ರಕ್ಷಿಸುವುದು ತನ್ನ ಧರ್ಮ ಎಂದೇ ವಾದಿಸುತ್ತದೆ. ಹುಲಿಯು ಅಲ್ಲಿಂದ ಹೊರಟು ಹೋದ ನಂತರ ಕಪಿಯು ಆಹಾರ ಬೇಟೆಗಾರ ಮರದಲ್ಲಿದ್ದ ಕೋತಿಯ ಮರಿಗಳನ್ನು ತನ್ನ ಮಕ್ಕಳಿಗೆ ಆಹಾರವಾಗುತ್ತದೆ ಎಂದು ಹೇಳಿ ಹಿಡಿದುಕೊಂಡು ಹೋಗುತ್ತಾನೆ.

ಭೇದ ಪ್ರಕರಣದ ಈ ಎರಡೂ ಕಥೆಗಳು ಬೇಟೆಗಾರ ಅತ್ಯಂತ ಕೃತಘ್ನ ಎಂಬುದನ್ನು ಸಾಧಿಸುವುದಕ್ಕೆ ಯತ್ನಿಸುತ್ತದೆ. ಇದೇ ಪ್ರಕರಣದಲ್ಲಿರುವ ‘ಎರಡು ಗಿಣಿಗಳ ಕಥೆ’ಯಲ್ಲಿ ಶರಬರಾಜನ ಬಳಿ ಬೆಳೆದ ಗಿಳಿಯ ಸಂಸ್ಕಾರದ ಕುರಿತು ಪ್ರಸ್ತಾಪ ಬರುತ್ತದೆ. ವ್ಯಾಕುಲಗೊಂಡು ಬರುತ್ತಿರುವ ರಾಜನಿಂದ ನಿರ್ವ್ಯಾಕುಲನಾಗಿ ನೀನು ಆಭರಣಗಳನ್ನು ಕಸಿದುಕೋ ಎಂಬುದಾಗಿ ಗಿಳಿಯು ತನ್ನ ನಾಯಕನಿಗೆ ಹೇಳುತ್ತದೆ. ಈ ಮೂರು ಕಥೆಗಳಲ್ಲಿ ಬೇಟೆಗಾರನ ಕೃತಘ್ನತೆಯ ವಿವರಣೆಗಳು ಬರುವಷ್ಟು ಉಳಿದ ಕಥೆಗಳಲ್ಲಿ ಪ್ರಸ್ತಾಪವಾಗುವುದಿಲ್ಲ.

ವಿಶ್ವಾಸ ಪ್ರಕರಣದಲ್ಲಿ ಪರೋಪಕಾರಕ್ಕೆ ನಿದರ್ಶನಕ್ಕಾಗಿ ಬರುವ ಕಥೆಯೊಂದು ಕನ್ನಡ ಸಾಹಿತ್ಯದಲ್ಲಿಯೇ ವಿಭಿನ್ನವಾದ ಕಥೆ ಎನ್ನಬಹುದು. ಈ ಕಥೆಯಲ್ಲಿ ಬೇಟೆಗಾರರ ನಾಯಕನೊಬ್ಬ ಕಾಡಿಗೆ ಹೋಗಿ ಒಂದು ಪಕ್ಷಿಯೂ ಲಭಿಸದೆ ಹಸಿವಿನಿಂದ ಕಂಗೆಡುತ್ತಾನೆ. ಅದೇ ಸಂದರ್ಭದಲ್ಲಿ ಬರುವ ಚಂಡಮಾರುತ ಮತ್ತು ಅತಿ ಮಳೆಯಿಂದಾಗಿ ಆತ ಇನ್ನಷ್ಟು ಕಂಗೆಟ್ಟು ಹೋಗುತ್ತಾನೆ. ನಡುಗುತ್ತಿದ್ದ ಈ ಬೇಡನನ್ನು ನೋಡಿ ಪಾರಿವಾಳದ ರಾಜ ಕನಿಕರಗೊಂಡು ಎಲ್ಲಿಂದಲೋ ಕೆಂಡವನ್ನು ತಂದುಕೊಟ್ಟು ಬೆಂಕಿ ಮಾಡಿಕೊಡುತ್ತದೆ. ಆಗ ಬೇಡನು “ಸರ್ವಾಂಗಮಂ ಕಾಸಿಕೊಂಡು ಸಚೇತನನಾಗಿ ಬಾಹ್ಯಾಂತರಾಗ್ನಿಗಳೊಡಲ ನೊಡನೊಡನೆ ಸುಡೆ ಸೈರಿಸಲಾಱದಿಂತೆಂದಂ;– ಎನಗಿನಿತುಮುಪಚಾರಂಗೆಯ್ದ ದೈವವೇ!

ನೀನೆನ್ನ ಕ್ಷುದ್ಭಾಧೆಯಂ ಮಾಣಿಸಿ ಪ್ರಾಣಮಂ ರಕ್ಷಿಸಲ್ವೇಟ್ಕುಂ....."(ಕರ್ನಾಟಕ ಪಂಚತಂತ್ರಂ, ಎನ್.ಅನಂತರಂಗಾಚಾರ್, ಪು.ಸಂ.180) ಎಂದಾಗ ಪರೋಪಕಾರವನ್ನೇ ಧರ್ಮವೆಂದು ನಂಬಿದ್ದ ಕಪೋತವು ಬೆಂಕಿಗೆ ಬಿದ್ದು ತನ್ನ ಒಡಲನ್ನು ಸುಟ್ಟುಕೊಂಡು ಕಿರಾತಕನಿಗೆ ಆಹಾರವಾಗುತ್ತದೆ.

ಇಲ್ಲಿ ಪಾರಿವಾಳವನ್ನು ಬೇಟೆಗಾರ ಬೇಟೆಯಾಡುವುದಿಲ್ಲ. ಅಸಹಾಯಕನಾಗಿದ್ದ ಬೇಟೆಗಾರನನ್ನು ನೋಡಿದ ಪಾರಿವಾಳ ಕನಿಕರಗೊಂಡು ಆತನಿಗೆ ಸಹಾಯ ಮಾಡುವುದು ಮಾತ್ರವಲ್ಲ, ಆತನ ಆಹಾರವೇ ಆಗಿಬಿಡುತ್ತದೆ. ಪರೋಪಕಾರದ ಆದರ್ಶವನ್ನು ಇಲ್ಲಿ ಪಾರಿವಾಳದ ಮೂಲಕ ಪ್ರತಿಪಾದಿಸಲಾಗಿದೆ. ಅಷ್ಟು ಮಾತ್ರವಲ್ಲದೆ ಈ ಸಂದರ್ಭದಲ್ಲಿ ಜೀಮೂತವಾಹನನು ಗರುಡನನ್ನು ತೃಪ್ತಿಗೊಳಿಸುವುದಕ್ಕಾಗಿ ಮಾಡಿದ ದೇಹತ್ಯಾಗವನ್ನು ಪಾರಿವಾಳ ಸ್ಮರಿಸಿಕೊಳ್ಳುತ್ತದೆ ಎಂಬುದು ಗಮನಾರ್ಹವಾದುದು.

ಮಿತ್ರಕಾರ್ಯಪ್ರಕರಣದುದ್ದಕ್ಕೂ ಬೇಟೆಗಾರ ಬೇಟೆಯಾಡಲು ಬಂದಾಗ ಪ್ರಾಣಿಗಳು ಸಂಘಟಿತರಾಗಿ, ವಿವೇಕಯುತವಾಗಿ ಹೋರಾಡಿ ಬೇಟೆಯ ವಿರುದ್ಧ ಗೆಲ್ಲುವ ಚಿತ್ರಣಗಳು ಬರುತ್ತವೆ. ಅಂದರೆ ಈ ಪ್ರಕರಣದಲ್ಲಿ ಮನುಷ್ಯ ಪ್ರಯತ್ನಗಳನ್ನು ಮೀರಿ ಪ್ರಾಣಿಗಳು ವಿಜಯವನ್ನು ಸಾಧಿಸುತ್ತವೆ ಎಂಬಂತೆ ಚಿತ್ರಿಸುವುದನ್ನು ಗಮನಿಸಬೇಕಿದೆ. ಮನುಷ್ಯ ಅಥವಾ ಬೇಟೆಗಾರ ತನ್ನ ಬುದ್ಧಿವಂತಿಕೆಯಿಂದ ಬೇಟೆಯಾಡುವ ದಾರಿಯನ್ನು ಕಂಡುಕೊಂಡರೆ ಇಲ್ಲಿನ ಪ್ರಾಣಿಗಳು ಅದಕ್ಕಿಂತ ಹೆಚ್ಚಿನ ಬುದ್ಧಿವಂತಿಕೆಯನ್ನು ಬಳಸಿ ಅದರಿಂದ ಪಾರಾಗುತ್ತವೆ.

ಮಿತ್ರಕಾರ್ಯಪ್ರಕರಣದಲ್ಲಿ ಚಿತ್ರಿತವಾಗುವಂತೆ ಚಿತ್ರಗ್ರೀವ ಎಂಬ ಕಪೋತರಾಜ ಮತ್ತು ಹಿರಣ್ಯರೋಮ ಎಂಬ ಮೂಷಿಕ ಆತ್ಮೀಯ ಮಿತ್ರರಾಗಿದ್ದರು. ಒಂದು ದಿನ ಪರಿವಾರ ಸಮೇತವಾಗಿ ಹಿರಣ್ಯರೋಮನ ಅವಾಸಸ್ಥಾನಕ್ಕೆ ಭೇಟಿಕೊಟ್ಟು ಹೋಗುವುದನ್ನು ನೋಡಿದ ಬೇಡನೊಬ್ಬ ಕೂಳನ್ನು ಹರಡಿ ಎಲ್ಲ ಹಕ್ಕಿಗಳು ಸೆರೆಯಾಗುವಂತೆ ಬಲೆಯನ್ನಿಟ್ಟು ಹೋಗುತ್ತಾನೆ. ಬಲೆಯಲ್ಲಿ ಪರಿವಾರ ಸಮೇತ ಚಿತ್ರಗ್ರೀವ ಸಿಕ್ಕಿಹಾಕಿಕೊಳ್ಳುತ್ತದೆ. ಆ ಪಾರಿವಾಳ ಸಮೂಹದಲ್ಲಿ ಬುದ್ಧಿವಂತನಾಗಿದ್ದ ಪಾರಿವಾಳವೊಂದು ಬೇಟೆಗಾರನ ವಿರುದ್ಧ ವಿಜಯ ಸಾಧಿಸಿದ ಹಿಂದಿನ ಕಥೆಯೊಂದನ್ನು ಹೇಳುತ್ತದೆ.

ಕಾಡಿನಲ್ಲಿದ್ದ ಅತ್ಯಂತ ವಿಶಾಲವಾದ ಅತ್ಯುನ್ನತವಾದ ಮಹಾವಟವೃಕ್ಷವೊಂದರಲ್ಲಿ ಅನೇಕ ಪಕ್ಷಿಗಳು ವಾಸಿಸುತ್ತಿದ್ದಾಗ ಒಬ್ಬ ಬೇಡ ಬಂದು ಆ ಮರಕ್ಕೆ ಸುತ್ತು ಹಾಕಿ ಈ ಮರವನ್ನು ಏರುವುದಕ್ಕೆ ಅಸಾಧ್ಯ ಎಂಬುದನ್ನು ಮನಗಂಡು ಯುಷ್ಟಿಯ ಬೀಜವನ್ನು ಮರದ ಬುಡದಲ್ಲಿ ಬಿತ್ತಿ ಹೋಗುತ್ತಾನೆ. ಕೆಲವು ದಿನಗಳಲ್ಲಿ ಆ ಬೀಜವು ಮೊಳಕೆಯೊಡೆಯಲು ಕುಲವೃದ್ಧನೂ ಬದ್ಧವೃದ್ಧನೂ ಆಗಿದ್ದ ಹಕ್ಕಿಯೊಂದು ಇಲ್ಲಿವರೆಗೆ ನಾವು ಈ ಮರದಲ್ಲಿದ್ದೇವೆ, ಇದರ ಬುಡದಲ್ಲಿ ಹುಲ್ಲು ಕೂಡ ಹುಟ್ಟಿರಲಿಲ್ಲ. ಇದು ಖಂಡಿತಾ ಯಾವುದೋ ಅಪಾಯವಾಗುವ ಮುನ್ಸೂಚನೆ. ಆದ್ದರಿಂದ ಮೊಳಕೆಯನ್ನು ಚಿವುಟಿ ಹಾಕಿ ಎನ್ನುತ್ತದೆ. ಆದರೆ ಅದರ ಸಲಹೆಯನ್ನು ಉಳಿದ ಹಕ್ಕಿಗಳಾವುದೂ ಗಂಭಿರವಾಗಿ ಪರಿಗಣಿಸುವುದಿಲ್ಲ. ಯುಷ್ಟಿಯ ಬಳ್ಳಿಗಳು ಬೆಳೆದ ಮೇಲೆ ಅದನ್ನು ಹಿಡಿದುಕೊಂಡು ಮರವೇರಿದ ಬೇಡ ಮರದ ತುದಿಯಲ್ಲಿ ಬಲೆ ಹರಡಿ ಹೋಗುತ್ತಾನೆ. ಸಂಜೆಯಾಗುತ್ತಲೇ ಬಂದ ಹಕ್ಕಿಗಳೆಲ್ಲವೂ ಬಲೆಯಲ್ಲಿ ಸೆರೆಸಿಕ್ಕುತ್ತವೆ. ಮುದಿಹಕ್ಕಿಯ ಸಲಹೆಯನ್ನು ಕೇಳಿದಾಗ ಉಸಿರೆಳೆದುಕೊಂಡು ಸತ್ತಂತೆ ಬಿದ್ದುಕೊಳ್ಳಿ ಎಂದು ಅದು ಸಲಹೆ ನೀಡುತ್ತದೆ. ಅದರಂತೆ ನಡೆದುಕೊಂಡಾಗ ಹಕ್ಕಿಗಳೆಲ್ಲವೂ ಸತ್ತಿವೆ ಎಂದುಕೊಂಡ ಬೇಡ ಬಲೆಯನ್ನು ಕೆಳಕ್ಕೆ ಕೆಡವುತ್ತಾನೆ. ಕೆಳಕ್ಕೆ ಬಿದ್ದ

ಕೂಡಲೇ ಹಕ್ಕಿಗಳೆಲ್ಲವೂ ಬಲೆ ಸಮೇತ ಮೇಲಕ್ಕೆ ಹಾರಿ ಹೋಗಿ ಬದುಕಿಕೊಳ್ಳುತ್ತವೆ.

ಅದೇ ಉಪಾಯವನ್ನು ಇಲ್ಲಿಯೂ ಪ್ರಯೋಗಿಸಿ ಚಿತ್ರಗ್ರೀವನ ಸೈನ್ಯ ಬಲೆ ಸಮೇತ ಮೇಲೆ ಹಾರುತ್ತವೆ. ಹಕ್ಕಿಗಳೂ ಬಲೆಯೂ ಎರಡನ್ನೂ ಕಳೆದುಕೊಳ್ಳಬೇಕಾಯಿತು ಎಂದು ಚಿಂತಿಸುತ್ತಾ ಬೇಡ ಮನೆಗೆ ಹಿಂದಿರುಗುತ್ತಾನೆ. ಹಕ್ಕಿಗಳು ಬಲೆಯೊಡನೆ ಸಾಮೂಹಿಕವಾಗಿ ಹಿರಣ್ಯರೋಮನ ಬಳಿ ಬಂದು ಸೆರೆಯಿಂದ ಬಿಡಿಸುವಂತೆ ಕೇಳಿಕೊಳ್ಳಲು ಮೂಷಿಕನಾಯಕವು ಅವುಗಳ ಸೆರೆಯನ್ನು ಬಿಡಿಸುತ್ತದೆ.

ಹಿರಣ್ಯರೋಮ ಮತ್ತು ಚಿತ್ರಗ್ರೀವನ ಮಿತ್ರತ್ವವನ್ನು ನೋಡಿ ಲಘುಪತಕ ಎಂಬ ಕಾಗೆ ಇವುಗಳ ಸ್ನೇಹವನ್ನು ಬಯಸುತ್ತದೆ. ಆಗ ಕಾಗೆ ಈ ಕಥೆಯನ್ನು ನೆನಪಿಸುತ್ತದೆ. ವನದಲ್ಲಿ ಕಟ್ಟುಬಿದ್ದಿದ್ದ ಆನೆಯನ್ನು ಇಲಿಯೊಂದು ಬಿಡಿಸಿದ ಕಥೆಯನ್ನು ಕಾಗೆ ಹೇಳುತ್ತದೆ. ಆನೆ ಹಿಂದೊಮ್ಮೆ ಪ್ರವಾಹದಲ್ಲಿ ಕೊಚ್ಚಿ ಹೋಗುತ್ತಿದ್ದ ಮೂಷಿಕ ಸಮೂಹವನ್ನು ರಕ್ಷಿಸಿದ್ದಕ್ಕೆ ಪ್ರತ್ಯುಪಕಾರವಾಗಿ ಆನೆ ಬೇಟೆಗಾರನ ಬಳಿಯಲ್ಲಿ ಸಿಕ್ಕಿಹಾಕಿದ್ದಾಗ ಇಲಿ ಬಂದು ಬಿಡಿಸಿದ ಕಥೆಯನ್ನು ಹೇಳಿ ಅವುಗಳಿಗೆ ಸ್ನೇಹಿತನಾಗುತ್ತದೆ. ಅನಂತರ ಇವರ ಗುಂಪಿಗೆ ಸಾರಂಗವೂ ಸೇರಿಕೊಳ್ಳುತ್ತದೆ.

ಪಾರಿವಾಳ, ಆಮೆ, ಕಾಗೆ, ಸಾರಂಗ, ಇಲಿ ಈ ಐದು ಪ್ರಾಣಿಗಳು ಆತ್ಮೀಯ ಮಿತ್ರರಾಗಿರಲು ಒಂದು ದಿನ ಚಿತ್ರಾಂಗದ ಆಹಾರಕ್ಕಾಗಿ ಅಡವಿಗೆ ಹೋಗಿದ್ದಾಗ ಬೇಡನೊಬ್ಬನ ಬಲೆಯಲ್ಲಿ ಸಿಕ್ಕಿ ಬೀಳುತ್ತದೆ. ಆಮೆ ಇದನ್ನು ಹಿರಣ್ಯರೋಮನಿಗೆ ತಿಳಿಸುತ್ತದೆ. ಹಿರಣ್ಯರೋಮ ಪುನಃ ಅದರ ಪಾಶವನ್ನು ಬಿಡಿಸಿ ರಕ್ಷಿಸುತ್ತದೆ. ಆಗ ಆ ಸ್ಥಳಕ್ಕೆ ಬೇಡ ಬಂದದ್ದರಿಂದ ಕಾಗೆ ಹಾರಿ ಹೋಗುತ್ತದೆ. ಇಲಿ ಬಿಲವನ್ನು ಸೇರಿಕೊಳ್ಳುತ್ತದೆ. ಸಾರಂಗವು ಓಡಿಹೋಗುತ್ತದೆ. ಆಮೆ ಮಾತ್ರ ಸಿಕ್ಕಿಬೀಳುತ್ತದೆ. ಆಮೆಯನ್ನು ಬೇಡನಿಂದ ಬಿಡಿಸಲು ಸಾರಂಗವು ನದಿತೀರದಲ್ಲಿ ಸತ್ತಂತೆ ಬಿದ್ದುಕೊಳ್ಳುತ್ತದೆ. ಸಾರಂಗದ ಹೆಣ ಕಂಡ ಖುಷಿಯಲ್ಲಿ ಬೇಟೆಗಾರ ಆಮೆಯನ್ನು ಕೆಳಕ್ಕಿಳಿಸಿ ಜಿಂಕೆಯ ಬಳಿ ಬರುತ್ತಾನೆ. ಬೇಟೆಗಾರ ಸಮೀಪಿಸುತ್ತಿದ್ದಂತೆ ಜಿಂಕೆ ಛಂಗನೆ ನೆಗೆದು ಮಾಯವಾದರೆ ಇತ್ತ ಆಮೆಯು ತೆವಳುತ್ತಾ ನೀರನ್ನು ಸೇರಿಕೊಳ್ಳುತ್ತದೆ. ಹೀಗೆ ಒಬ್ಬರಿಗೊಬ್ಬರು ಪರಸ್ಪರ ಸಹಕಾರಿಯಾದ ಜೀವನವನ್ನು ಮಾಡುತ್ತಾ ಕಾಡಿನಲ್ಲಿ ಈ ಪ್ರಾಣಿಗಳು ಸುಖಿಯಾಗಿ ಬಾಳುವ ಚಿತ್ರಣ ಮಿತ್ರಕಾರ್ಯ ಪ್ರಕರಣದಲ್ಲಿದೆ.

ಮಿತ್ರಕಾರ್ಯಪ್ರಕರಣ ಉದ್ದೇಶ ಪರಸ್ಪರ ಸ್ನೇಹಿತರಾಗಿದ್ದಲ್ಲಿ ವೈರಿಗಳ ವಿರುದ್ಧ ವಿಜಯವನ್ನು ಹೇಗೆ ಸಾಧಿಸಬಹುದು ಎಂಬುದನ್ನು ಪ್ರತಿಪಾದಿಸುವುದಾಗಿದ್ದರೂ ಅದನ್ನು ಚಿತ್ರಿಸುವಾಗ ಇಲ್ಲಿನ ಪ್ರಾಣಿ ಪಾತ್ರಗಳು ಮನುಷ್ಯರಿಗಿಂತ ಹೆಚ್ಚಿನ ಬುದ್ಧಿವಂತಿಕೆಯನ್ನು ಪ್ರದರ್ಶಿಸಿವೆ ಎಂಬುದನ್ನು ಗಮನಿಸಬೇಕು.

ಒಟ್ಟಿನಲ್ಲಿ ಪ್ರಾಣಿಗಳನ್ನೇ ಮುಖ್ಯಪಾತ್ರಗಳನ್ನಾಗಿಟ್ಟುಕೊಂಡು ಕಥೆ ನಿರೂಪಿಸುವ ಪಂಚತಂತ್ರ ಕಥೆಗಳಲ್ಲಿ ಬೇಟೆಯನ್ನು ನಿರಾಕರಿಸುವ ಪ್ರಸಂಗಗಳು ಕೆಲವೆಡೆಗಳಲ್ಲಿ ಹಿಂಸೆಗೆ ಬಲಿಯಾಗುವ ಪ್ರಾಣಿಯ ದೃಷ್ಟಿಕೋನದಲ್ಲಿ ಖಂಡಿಸಲ್ಪಟ್ಟಂತೆ ಕಂಡರೆ ಇನ್ನು ಕೆಲವು ಕಡೆ ಪ್ರಾಣಿಗಳ ಕುರಿತಾಗಿ ಮನುಷ್ಯ ಕರುಣಾ ದೃಷ್ಟಿಯನ್ನು ರೂಢಿಸಿಕೊಳ್ಳಬೇಕು ಎಂಬಂತೆ ಚಿತ್ರಿಸಲಾಗಿದೆ. ಬೇಟೆ ಮತ್ತು ಬೇಡನ ಕುರಿತಾಗಿ ಪಂಚತಂತ್ರ ಕೃತಿಯಲ್ಲಿ ಅಲ್ಲಲ್ಲಿ ದೊರಕುವ ವಿಚಾರಗಳನ್ನು ಒಟ್ಟಾಗಿ ಗಮನಿಸಿದಾಗ ಬೇಟೆಯ ಬಗೆಗೆ ಕವಿಗಿರುವ ತಿರಸ್ಕಾರದ ಮನೋಭಾವವನ್ನು ಅರ್ಥೈಸಿಕೊಳ್ಳಬಹುದು. ಭೇದಪ್ರಕರಣದಲ್ಲಿನ ಸಂಜೀವಕವು ಪ್ರಾಣಿಹಿಂಸೆಯನ್ನು ತ್ಯಜಿಸುವಂತೆ ಉಪದೇಶ ಮಾಡುವ ಪ್ರಸಂಗವನ್ನು ಹೊರತುಪಡಿಸಿದರೆ

ಉಳಿದ ಕಡೆಗಳಲ್ಲಿ ಜೈನಧರ್ಮದ ಅಹಿಂಸಾ ತತ್ವಕ್ಕಿಂತ ಭಿನ್ನವಾಗಿ ಬೇಟೆ ಅನಾಗರಿಕವಾದ ಸಂಸ್ಕೃತಿ ಎಂಬ ನೆಲೆಯಲ್ಲಿ ಖಂಡಿಸಲ್ಪಡುತ್ತದೆ.

ಆಕರ ಕೃತಿಗಳು

1. ಅನಂತರಂಗಾಚಾರ್ ಎನ್, ಕರ್ನಾಟಕ ಪಂಚತಂತ್ರಂ, ಶಾರದಾ ಮಂದಿರ, ಮೈಸೂರು, 1973
2. ಚಂದ್ರಶೇಖರ ಐತಾಳ ಗುಂಡ್ಮಿ, ದುರ್ಗಸಿಂಹ ಕವಿಯ ಕರ್ನಾಟಕ ಪಂಚತಂತ್ರಂ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2014
3. ವರದರಾಜ ಹುಯಿಲಗೋಳ, ದುರ್ಗಸಿಂಹನ ಪಂಚತಂತ್ರ ಸಮೀಕ್ಷೆ, ಸಾಹಿತ್ಯ ಭಂಡಾರ, ಹುಬ್ಬಳ್ಳಿ, 1976

✠✠✠

Form IV

Statement about ownership and other particulars about
CHINTHANA BAYALU (Quarterly)

1.	Place of Publication	:	Bantwal, Dakshina Kannada
2.	Periodicity of its publication	:	Quarterly
3.	Printers Name	:	Reshma G. Bhat
	Nationality	:	Indian
	Address	:	No. 15-109, Modankapu Bantwal Taluk, D.K. - 574 219
4.	Publishers Name	:	Reshma G. Bhat
	Nationality	:	Indian
	Address	:	No. 15-109, Modankapu Bantwal Taluk, D.K. - 574 219
5.	Editors Name	:	Reshma G. Bhat
	Nationality	:	Indian
	Address	:	No. 15-109, Modankapu Bantwal Taluk, D.K. - 574 219
6.	Names and address of individuals who own the newspaper and partners or sharesholders holding more than one percent of the total capital	}	

I, Reshma G. Bhat, hereby declare that the particulars given above are true to the best of my knowledge and belief.

Date: 31 March 2020

Reshma G. Bhat
(Publisher)

ಸಂಸ್ಕೃತ–ಕನ್ನಡ ಭಾಷಾಂತರ ಪ್ರಕ್ರಿಯೆ

ಡಾ. ಮೋಹನ ಕುಂಟಾರ್
ಪಯಸ್ವಿನಿ, ಶಾಂತಿನಗರ
ಕಾಲೇಜು ರಸ್ತೆ, ಹೊಸಪೇಟೆ–583 201

ಸಂಸ್ಕೃತ ಭಾಷೆಯಿಂದ ಅನೇಕ ಕೃತಿಗಳು ಕನ್ನಡಕ್ಕೆ ಅನುವಾದಗಳಾಗಿವೆ. ಆಗುತ್ತಲೂ ಇವೆ. ಅವುಗಳು ಮರುನಿರೂಪಣೆಯ ರೂಪದಲ್ಲಿಯೋ, ಪುನರ್‌ವ್ಯಾಖ್ಯಾನದ ನೆಲೆಯಲ್ಲಿಯೋ ಮತ್ತೆ ಮತ್ತೆ ಪ್ರಕಟವಾಗುತ್ತಲೇ ಬರುತ್ತಿವೆ. ಪ್ರಾಚೀನ ಕಾಲದ ಕನ್ನಡದ ಅನೇಕ ರಚನೆಗಳಿಗೆ ಸಂಸ್ಕೃತ ಕೃತಿಗಳು ಆಕರಗಳಾಗಿವೆ. ಈ ಅರ್ಥದಲ್ಲಿ ಕನ್ನಡದ ಬಹುತೇಕ ಕೃತಿಗಳು ಸಂಸ್ಕೃತದ ಭಾಷಾಂತರಗಳೇ ಆಗಿವೆ. ಪ್ರಸ್ತುತ ಭಾಷಾಂತರ ಎಂದರೆ ಆಧುನಿಕ ಅರ್ಥದಲ್ಲಿ ಆಕರ ಪಠ್ಯದ ಯಥಾವತ್ತಾದ ನಕಲು ಅಲ್ಲ. ಮೂಲ ಸಂಸ್ಕೃತ ಪಠ್ಯವನ್ನು ಆಧರಿಸಿ ಕನ್ನಡದಲ್ಲಿ ಕವಿಗಳು ರೂಪಿಸಿದ ಸ್ವತಂತ್ರ ರಚನೆಗಳು. ಅವು ಮೂಲ ಭಾಷೆಯ ಪಠ್ಯದ ಪರ್ಯಾಯ ಪಠ್ಯವೊಂದನ್ನು ಸೃಷ್ಟಿಸುವ ಉದ್ದೇಶದಿಂದ ಹುಟ್ಟಿಕೊಂಡ ರಚನೆಗಳಲ್ಲ. ಮೂಲ ಸಂಸ್ಕೃತದಲ್ಲಿ ಯಾವ ಉದ್ದೇಶಕ್ಕಾಗಿ ಕೃತಿಗಳು ರಚನೆಯಾದುವೋ ಕಾಲಾಂತರದಲ್ಲಿ ಕನ್ನಡದಲ್ಲಿ ಅದೇ ಉದ್ದೇಶಕ್ಕಾಗಿ ಆ ಕೃತಿಗಳ ಪುನಾರಚನೆಯಾಗಲಿಲ್ಲ. ಕನ್ನಡದ ಕೃತಿಕಾರರಿಗೆ ತಮ್ಮ ಕಾಲದ ರಾಜಕೀಯ, ಸಾಮಾಜಿಕ, ಧಾರ್ಮಿಕವಾದ ಬೇರೆ ಬೇರೆ ಕಾರಣಗಳಿಗಾಗಿ ಅವು ಮುಖ್ಯವೆನಿಸಿದವು. ಅನ್ಯಭಾಷೆಯೊಂದರ ಮೂಲ ಪಠ್ಯಗಳನ್ನು ಕನ್ನಡದಲ್ಲಿ ಮರು ಸೃಷ್ಟಿಸುವ ಕೆಲಸ ನಿರಂತರವಾಗಿ ನಡೆಯುತ್ತಲೇ ಬಂದಿದೆ. ಇಂತಹ ಮರುಸೃಷ್ಟಿಗಳ ಹಿಂದೆ ಭಾಷಾಂತರ ಸಂಬಂಧಿ ಪ್ರಕ್ರಿಯೆಗಳು ಇರುವುದರಿಂದ ಸಂಸ್ಕೃತ ಕನ್ನಡ ಸಂಬಂಧಗಳ ಸ್ವರೂಪವನ್ನು ವಿಭಿನ್ನ ದೃಷ್ಟಿಕೋನಗಳಿಂದ ಪರಿಭಾವಿಸಬೇಕಾಗಿದೆ.

ಭಾಷೆ, ಸಾಹಿತ್ಯ, ಸಂಸ್ಕೃತಿ, ರಾಜಕೀಯ ನೆಲೆಗಳಿಂದ ಸಂಸ್ಕೃತ–ಕನ್ನಡ ಸಂಬಂಧಗಳನ್ನು ಗುರುತಿಸುವ ಕೆಲಸಗಳು ನಡೆದಿವೆ. ಆದರೆ ಭಾಷಾಂತರದ ನೆಲೆಯಿಂದ ಈ ಎರಡೂ ಭಾಷೆಗಳ ನಡುವೆ ಆರೋಗ್ಯಕರವಾದ ತಾತ್ವಿಕ ಚೌಕಟ್ಟನ್ನು ಗುರುತಿಸುವ ಪ್ರಯತ್ನ ಆಗಬೇಕಾಗಿದೆ. ಆ ಮೂಲಕ ಕನ್ನಡ–ಸಂಸ್ಕೃತ ಸಂಬಂಧಗಳನ್ನು ಪುನರ್ ವ್ಯಾಖ್ಯಾನ ಮಾಡಿಕೊಳ್ಳಬೇಕಾದ ಅಗತ್ಯ ಇದೆ.

ಬೇರೆ ಬೇರೆ ಮೂಲಗಳ ಭಾಷೆಗಳಾದರೂ ಕನ್ನಡ–ಸಂಸ್ಕೃತ ಒಂದನ್ನೊಂದು ಪೋಷಿಸಿ ಆಶ್ರಯಿಸಿ ಬೆಳೆದಿದೆ. ಹಾಗೆ ನೋಡಿದರೆ ಭಾರತದ ಬಹುತೇಕ ಭಾಷೆಗಳಿಗೆ ಸಂಸ್ಕೃತ ಭಾಷೆ ಆಕರ ಸ್ಥಾನದಲ್ಲಿದೆ. ಈ ಅರ್ಥದಲ್ಲಿಯೇ ಸಂಸ್ಕೃತವನ್ನು ಕನ್ನಡದ ತಾಯಿ ಎಂಬ ರೀತಿಯ ಹೇಳಿಕೆಗಳು ಪ್ರಚಾರಕ್ಕೆ ಬಂದಿವೆ. ಭಾರತೀಯ ಭಾಷೆಗಳಲ್ಲಿನ ವ್ಯಾಕರಣ, ಮೀಮಾಂಸೆ ಇತ್ಯಾದಿ ಶಾಸ್ತ್ರ ವಿಚಾರಗಳ ಪರಿಭಾಷೆಗಳನ್ನು ಸಂಸ್ಕೃತಾವಲಂಬಿಯಾಗಿಯೇ ವಿವರಿಸಿಕೊಳ್ಳಲಾಗಿದೆ. ಭಾರತೀಯ ಭಾಷೆಗಳನ್ನು ಸಂಸ್ಕೃತದ ಕಣ್ಣಿನಿಂದ ನೋಡುವ ಓದಿನ, ಅಧ್ಯಯನದ ಕ್ರಮವೊಂದು ಪ್ರಚಲಿತಕ್ಕೆ ಬಂದಿದ್ದು ಇದು ಸಂಸ್ಕೃತ ಮತ್ತು ಇತರೇ

ಭಾರತೀಯ ಭಾಷೆಗಳ ಸಂಬಂಧಗಳ ಅಗಾಧತೆಯನ್ನು ಸೂಚಿಸುತ್ತದೆ. ಭಾರತದ ಅನೇಕ ಭಾಷೆಗಳನ್ನು ತಂತ್ರಜ್ಞಾನವೇ ಮೊದಲಾದ ಆಧುನಿಕ ವ್ಯವಸ್ಥೆಗಳಿಗೆ ಅಳವಡಿಸುವುದು ಇನ್ನೂ ಸಾಧ್ಯವಾಗಿಲ್ಲ, ಆದರೆ ಭಾರತೀಯವಾದ ಎಲ್ಲಾ ಭಾಷೆಗಳಿಗೂ ಕೊಂಡಿಯಂತಿರುವ ಸಂಸ್ಕೃತ ಭಾಷೆಯನ್ನು ಆಧುನಿಕ ತಂತ್ರಜ್ಞಾನಕ್ಕೆ ಒಗ್ಗಿಸುವುದು ಸಾಧ್ಯವಾಗಿದೆ. ಅಷ್ಟೇ ಅಲ್ಲದೆ ವ್ಯಾಕರಣ ಸ್ವರೂಪ(Grammatical Structure)ವನ್ನು ಖಚಿತವಾಗಿ ನಿರೂಪಿಸಿಕೊಂಡಿರುವ ಭಾಷೆಗಳಲ್ಲಿ ಸಂಸ್ಕೃತವೂ ಒಂದು.

ಸಂಸ್ಕೃತ ಗ್ರಾಂಥಿಕ ಭಾಷೆ. ಅದು ಎಂದೂ ಆಡು ನುಡಿಯಾಗಿ ಬಳಕೆಯಲ್ಲಿ ಇರಲಿಲ್ಲ. ಮಾತಿನ ಬಳಕೆಯಲ್ಲಿರುವ ಭಾಷೆಯಂತೆ ನಿರಂತರ ಬದಲಾವಣೆಗೆ ಒಳಗಾಗದ ಕಾರಣಕ್ಕೆ ಅದರ ವ್ಯಾಕರಣದ ಸ್ವರೂಪವೂ ಅಷ್ಟೇ ಖಚಿತವಾಗಿ ಬದಲಾವಣೆ ಆಗದೆ ಉಳಿದಿದೆ. ಬರವಣಿಗೆಯ ಭಾಷೆಯಾಗಿರುವುದರಿಂದ ಅದಕ್ಕೆ ನಿಖರವಾದ ವ್ಯಾಕರಣ ಲಕ್ಷಣಗಳನ್ನು ಹೇಳುವುದು ಸಾಧ್ಯವಾಗಿದೆ. ಇದರಲ್ಲಿ ಪ್ರಾದೇಶಿಕ ವೈವಿಧ್ಯಗಳೂ ಇಲ್ಲವಾಗಿದೆ. ಈ ಕಾರಣಕ್ಕಾಗಿಯೇ ಮೂಲ ಸಂಸ್ಕೃತ ಪಠ್ಯಗಳು ಲಭ್ಯವಿಲ್ಲವಾದರೂ ಅವುಗಳನ್ನು ಆಧರಿಸಿದ ಕೆಲವೊಂದು ಭಾಷಾಂತರಗಳು ಅನ್ಯ ಭಾಷೆಯಲ್ಲಿ ಲಭ್ಯವಿದೆ. ಅವುಗಳನ್ನು ಮರುರೂಪಿಸುವ ಭಾಷಾಂತರ ಕೆಲಸಗಳು ನಡೆಯುತ್ತಿವೆ. ಆಗ ಭಾಷಾಂತರದಿಂದ ಮೂಲ ಪಠ್ಯವನ್ನು ರೂಪಿಸುವ ಪ್ರಯತ್ನ ಸಂಸ್ಕೃತ ಸಂದರ್ಭದಲ್ಲಿ ವಿಶಿಷ್ಟವಾಗಿರಬಹುದು. ಹಾಗೆ ಮರುರೂಪಿಸುವ ಭಾಷಾಂತರಗಳು ಬಹುತೇಕ ಮೂಲ ಪಠ್ಯವನ್ನು ಯಥಾವತ್ತಾಗಿ ಹೋಲದೆ ಇರಬಹುದಾದರೂ ಅತ್ಯಂತ ಸಾಮೀಪ್ಯದ ಪಠ್ಯವೊಂದನ್ನು ರೂಪಿಸುವುದು ಸಾಧ್ಯವಾಗಬಹುದು. ಬೌದ್ಧಮತಕ್ಕೆ ಸಂಬಂಧಿಸಿದ ಕೆಲವೊಂದು ಭಾಷಾಂತರಗಳು ಟಿಬೆಟಿಯನ್ ಭಾಷೆಯಲ್ಲಿ ಲಭ್ಯವಿವೆ. ಅವುಗಳ ಮೂಲ ಸಂಸ್ಕೃತವಾಗಿದ್ದು ಆದರೆ ಅವು ಲಭ್ಯವಿಲ್ಲ. ಆ ಕಾರಣಕ್ಕಾಗಿ ಟಿಬೆಟಿಯನ್ ಪಠ್ಯಗಳನ್ನು ಆಧರಿಸಿ ಮೂಲ ಸಂಸ್ಕೃತ ಪಠ್ಯಗಳನ್ನು ಮರುರೂಪಿಸುವ ಪ್ರಯತ್ನವನ್ನು ಮಾಡಲಾಗುತ್ತಿದೆ. ಸಂಸ್ಕೃತಕ್ಕೆ ಖಚಿತವಾದ ವ್ಯಾಕರಣ ಮತ್ತು ಭಾಷಾ ವ್ಯವಸ್ಥೆ ಇರುವ ಕಾರಣಕ್ಕೆ ಇಂತಹ ಪ್ರಯತ್ನಗಳು ಬಹುತೇಕ ಯಶಸ್ಸು ಕಾಣಬಹುದು. ಬದಲಾಗುತ್ತಿರುವ ಭಾಷೆಗಳಲ್ಲಿ ಮಾತ್ರ ಮೂಲ ಭಾಷೆಯಿಂದ ಲಕ್ಷ್ಯ ಭಾಷೆಗೆ ಮತ್ತೆ ಲಕ್ಷ್ಯ ಭಾಷೆಯಿಂದ ಮೂಲ ಭಾಷೆಗೆ ಮರಳಿ ಬರುವಾಗ ಅದು ಇನ್ನೊಂದು ಬಗೆಯ ಭಾಷಾಂತರವೇ ಆಗಿಬಿಡಬಹುದು. ಮೂಲದ ಸಾಮೀಪ್ಯದೆಡೆಗೆ ಬರಲಾರದು.

ಸಂಸ್ಕೃತವನ್ನು ಧಾರ್ಮಿಕ ಚಾಕಟ್ಟಿನಲ್ಲಿಯೇ ನೋಡುವ ಪ್ರಯತ್ನ ಅಥವಾ ಒಂದು ಸಮುದಾಯದ ಪಾಂಡಿತ್ಯವನ್ನು ದಾಖಲಿಸಿದ ಭಾಷೆ ಎಂಬಿತ್ಯಾದಿಯಾಗಿ ನೋಡುವ ಪ್ರವೃತ್ತಿ ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿ ಕಾಣಿಸುತ್ತಿದೆ. ವೈದಿಕ ಸಂಸ್ಕೃತಿಯ ಭಾಗವಾಗಿಯೋ, ವೇದ ಉಪನಿಷತ್ತು ಮಂತ್ರಗಳಿರುವ ಭಾಷೆಯಾಗಿಯೋ ಸಂಸ್ಕೃತವನ್ನು ಸಾಮಾನ್ಯ ಜನರು ಭಾವಿಸುವಂತಾಗಿದೆ. ಒಂದು ನಿರ್ದಿಷ್ಟ ಸಮುದಾಯದ ಭಾಷೆಯಾಗಿ ಸಂಸ್ಕೃತವನ್ನು ದೂರವಿಡುವ ಪ್ರಯತ್ನಗಳು ಕನ್ನಡದ ಸಂದರ್ಭದಲ್ಲಿಯೂ ಕಾಣಬಹುದು. ಇದರಿಂದ ಸಂಸ್ಕೃತದಲ್ಲಿ ಸೃಷ್ಟಿಯಾದ ಅಗಾಧ ಶಾಸ್ತ್ರ, ಸಾಹಿತ್ಯ, ಪುರಾಣಗಳನ್ನು ತಿರಸ್ಕರಿಸುವಷ್ಟರಮಟ್ಟಿಗೂ ಮುಂದುವರಿದಿದೆ. ಸಂಸ್ಕೃತದ ನಡೆ ಗಂಭೀರವಾದುದು. ಅದರ ರಚನೆ ಪಾಂಡಿತ್ಯಪೂರ್ಣವಾದುದು. ಆಶಯ ಆದರ್ಶಪ್ರಾಯವಾದುದು ಇತ್ಯಾದಿ ತಿಳುವಳಿಕೆಯನ್ನು ಹೊಂದಿರುವ ಕಾರಣಕ್ಕೆ ಸ್ವಾಭಾವಿಕವಾಗಿಯೇ ಸಂಸ್ಕೃತ ಬದುಕಿನಿಂದ ದೂರವೇ ಉಳಿಯುವಂತಾಯಿತು. ಸಂಸ್ಕೃತ ಎಂದೂ ಆಡು ಭಾಷೆಯಾಗಿರಲಿಲ್ಲ.

ಜನಸಾಮಾನ್ಯರ ಬರಹದ ಭಾಷೆಯೂ ಆಗಿರಲಿಲ್ಲ. ಆ ಕಾರಣಕ್ಕಾಗಿ ಅದನ್ನು ಪ್ರತಿಗಾಮಿ ಎಂಬ ನೆಲೆಯಲ್ಲಿಯೇ ಕಾಣಲಾಗಿದೆ. ಸಂಸ್ಕೃತ ಭಾಷೆಯ ಕೃತಿಗಳ ಬಹುತೇಕ ಕನ್ನಡ ಅನುವಾದಗಳೂ ಸಹ ಸಾಮಾನ್ಯ ಕನ್ನಡಗಳಿಗಿಂತ ಹೆಚ್ಚು ಗ್ರಾಂಥಿಕವಾಗಿ ಜಟಿಲವಾಗಿ ಸಂಸ್ಕೃತ ಭೂಯಿಷ್ಠವಾಗಿದ್ದುದರಿಂದ ಅವುಗಳ ಓದೂ ಸಹ ಕ್ಲಿಷ್ಟವೆನಿಸಿತು. ರಾಮಾಯಣ, ಮಹಾಭಾರತಗಳ ಕತೆಗಳು, ಉಪಕತೆಗಳು ಕತೆಗಳ ಸ್ವಾರಸ್ಯದ ಕಾರಣಕ್ಕಾಗಿ ಹಾಗೂ ಸರಳವಾಗಿ ನಿರೂಪಿಸಿದ ಕಥನ ಕಾರಣಕ್ಕಾಗಿ ಜನಪ್ರಿಯವಾದವು. ಆದರೆ ಇತರೆ ಸಂಸ್ಕೃತ ಕೃತಿಗಳನ್ನು ಕನ್ನಡಕ್ಕಿಂತಲೂ ಶ್ರೇಷ್ಠ ಪಠ್ಯ ಎಂಬ ಸಂಕಲ್ಪದಿಂದಲೇ ಭಾಷಾಂತರಿಸಿದ್ದು ಸರಳ ಓದಿಗೆ ನಿಲುಕದಾದುವು. ಸಂಸ್ಕೃತ ಸಾಹಿತ್ಯವನ್ನು ವೈದಿಕ ಆವರಣದಿಂದ ಹೊರತಂದು ಅದರ ಆಶಯಗಳನ್ನು ಜನಮುಖಿಯಾಗಿ ನೋಡುವ ಅಗತ್ಯವಿದೆ.

ಸಂಸ್ಕೃತ ಕನ್ನಡಗಳ ಸಂಬಂಧಗಳಲ್ಲಿ ಕಾಲದಿಂದ ಕಾಲಕ್ಕೆ ಪಲ್ಲಟಗಳಾಗಿವೆ. ಪಂಪಕವಿಯು ತನ್ನ ಕೃತಿಗಳಲ್ಲಿ ಸಂಸ್ಕೃತದ ಮಾರ್ಗ ಪರಂಪರೆಯನ್ನು ಅನುಸರಿಸಿಯೇ ದೇಸಿಯನ್ನು ಅಳವಡಿಸಿಕೊಂಡ ಸಂಸ್ಕೃತದ ಕಾವ್ಯಮಾರ್ಗ ಪಂಪನಿಗೆ ಆದರ್ಶವಾಗಿತ್ತು. ಆದರೆ ಅದನ್ನು ಕಣ್ಣುಮುಚ್ಚಿ ಅನುಸರಿಸದೆ ಸೃಜನಶೀಲವಾಗಿ ಹೊಸ ಬಗೆಯ ಕಾವ್ಯದಾರಿಯನ್ನು ಕಂಡುಕೊಂಡ. ಪಂಪನಿಗೆ ಸಂಸ್ಕೃತ ಕಾವ್ಯಮಾರ್ಗದ ಆದರ್ಶಗಳು ಬೇಕಾಗಿದ್ದುವು. ಆದರೆ ಅದನ್ನು ಸ್ಥಳೀಯ ಪಂಡಿತವರ್ಗಕ್ಕೆ ಪ್ರಿಯವಾಗಿಸುವಲ್ಲಿ ಕನ್ನಡತನದ ಸ್ವಂತಿಕೆಯನ್ನು ಮೆರೆಯಬೇಕಾಗಿತ್ತು. ಪಂಪನಿಗೆ ಸಂಸ್ಕೃತದ ಜೊತೆಗೆ ಹೊಕ್ಕುಬಳಕೆಯ ಸಾಹಚರ್ಯವಿತ್ತು. ಸಂಸ್ಕೃತವು ತನ್ನ ಕಾವ್ಯಕೃತಿಗಳ ರಚನೆಗೆ ರಹದಾರಿಯಾಗಿತ್ತು. ಆದರೆ ತನ್ನ ಕಾವ್ಯಗಳ ನಡೆಗೆ ಸ್ವಯಂ ಮಾರ್ಗವೊಂದನ್ನು ರೂಪಿಸಿಕೊಳ್ಳುವಲ್ಲಿ ಸಂಸ್ಕೃತದ ಜೊತೆಗೆ ಸಂಬಂಧವನ್ನು ಉಳಿಸಿಕೊಂಡೇ ಅಂತರವನ್ನು ಕಾಯ್ದುಕೊಂಡಿದ್ದಾನೆ. ಪಂಪನ ಈ ಕಾವ್ಯಮಾರ್ಗ ಆ ಯುಗದ ಹೊಸ ಪರಂಪರೆಯೆಂಬಷ್ಟರ ಮಟ್ಟಿಗೆ ಕವಿಗಳಿಂದ ಸ್ವೀಕೃತವಾಗಿತ್ತು. ಪಂಪನಂತೆ ಇತರ ಕವಿಗಳು ಸಂಸ್ಕೃತವನ್ನು ಸಾಂದರ್ಭಿಕವಾಗಿ ಒಪ್ಪಿ ಬಳಸಿಕೊಂಡರೂ ತಮ್ಮ ಸ್ವಂತಿಕೆಯನ್ನು ಉಳಿಸಿಕೊಂಡಿದ್ದಾರೆ. ಹಾಗಾಗಿ ಪಂಪಾದಿ ಕವಿಗಳು ಸಂಸ್ಕೃತ ಕೃತಿಗಳನ್ನು ಕನ್ನಡದಲ್ಲಿ ಭಾಷಾಂತರ ಮಾಡಲಿಲ್ಲ. ಆದರೆ ಸಂಸ್ಕೃತ ಮೂಲಪಠ್ಯಗಳನ್ನು ಆಧರಿಸಿ ಪುನರ್‌ಸೃಷ್ಟಿಸಿದರು. ತಮ್ಮ ಪುನರ್‌ಸೃಷ್ಟಿಗೆ ಸಂಸ್ಕೃತ ಕೃತಿಗಳು ಪ್ರೇರಣೆ, ಸ್ಫೂರ್ತಿಯ ರೂಪದಲ್ಲಿ ಒದಗಿದವು. ಇದು ಸಂಸ್ಕೃತವನ್ನು ಸ್ವೀಕರಿಸಿಯೂ ಅದರಿಂದ ಅಂತರವನ್ನು ಕಾಯ್ದುಕೊಳ್ಳುವ ಪರಿಕ್ರಮದ ಭಾಗವೂ ಹೌದು. ಪಂಪನಂತಹ ಕವಿಗಳ ಸೃಜನಶೀಲರಿಗೆ ಇದು ಅನಿವಾರ್ಯವೂ ಆಗಿತ್ತು.

ಮುಂದೆ ಹನ್ನೆರಡನೆಯ ಶತಮಾನದ ಶಿವಶರಣರು ಸಂಸ್ಕೃತವನ್ನು ದೂರ ಮಾಡದೆ ತಮ್ಮ ವಚನಗಳಲ್ಲಿ ಉಪನಿಷತ್‌ವಾಕ್ಯಗಳನ್ನು ಸರಳವಾಗಿ ಮಂಡಿಸಿದರು. ಹಾಗಾಗಿ ವಚನಗಳ ಕಾಲವನ್ನು ಕನ್ನಡ ಅನುವಾದಗಳ ಕಾಲವೆಂದೂ ಹೇಳಬಹುದು.

'ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ' ಎಂಬೀ ವಚನವು ಪತಂಜಲಿಯೋಗದ ಯಮನಿಯಮ ಅನುಷ್ಠಾನದಲ್ಲಿ ಬರುವ ಶ್ಲೋಕದ ಅನುವಾದವಾಗಿದೆ. ಹಾಗೆಯೇ

'ಏಕಂ ಸತ್ ವಿಪ್ರಾಬಹುಧಾ ವದಂತಿ'ಯು
ದೇವನೊಬ್ಬ ನಾಮ ಹಲವು
'ದೇಹೋ ದೇವಾಲಯೋ ಪ್ರೋಕ್ತ' ಇದು

–ದೇಹವೇ ದೇಗುಲ

'ದಯಾ ಮೂಲೋ ಭವೇದ್ಧರ್ಮ' ಎಂಬುದನ್ನು

'ದಯವೇ ಧರ್ಮದ ಮೂಲವಯ್ಯ' ಎಂಬಿತ್ಯಾದಿಯಾಗಿ ಅನುವಾದ ರೂಪಗಳಲ್ಲಿರುವುದನ್ನು ವಚನಗಳಲ್ಲಿ ಕಾಣಬಹುದು. ಅಲ್ಲದೆ ವಚನಕಾರರು ಸಂಸ್ಕೃತದ ಬಿಡಿ ಪದಗಳನ್ನು ಕನ್ನಡಿಸಿದ್ದಾರೆ.

ಶೂನ್ಯ–ಬಯಲು

ಜ್ಞಾನ–ಅರಿವು

ಅಜ್ಞಾನ–ಮರೆವು

ಲಿಂಗ–ಕುರುಹು ಎಂಬಿತ್ಯಾದಿಯಾಗಿ ಕನ್ನಡ ಪದಗಳನ್ನು ಪರ್ಯಾಯವಾಗಿ ರೂಪಿಸಿದ್ದಾರೆ. ಸಂಸ್ಕೃತದಲ್ಲಿದ ತಿಳುವಳಿಕೆ ಹಾಗೂ ವಚನಕಾರರ ಲೋಕಾನುಭವಗಳೆರಡೂ ಸಮ್ಮಿಳಸಿ ಜನ ಸಾಮಾನ್ಯರನ್ನು ತಲುಪುವ ದಾರಿಯೊಂದನ್ನು ಕಂಡುಕೊಂಡರು. ಸಂಸ್ಕೃತದ ವಿದೂರತೆಯಿಂದಾಗಿ ಜನರಿಗೆ ತಲುಪದೇ ಇದ್ದ ತಿಳುವಳಿಕೆಯನ್ನು ಕನ್ನಡದಲ್ಲಿ ಕೊಡುವ ಪ್ರಾಮಾಣಿಕ ಪ್ರಯತ್ನ ವಚನಕಾರರಿಂದ ನಡೆದಿದೆ.

ಇವೆಲ್ಲವುಗಳನ್ನು ಮೀರಿ ಮುಂದೆ ಆಂಡಯ್ಯನು ಅಚ್ಚಗನ್ನಡದಲ್ಲಿ ಬರೆಯುವುದರ ಮೂಲಕ ವಿನೂತನ ಪ್ರಯೋಗವನ್ನು ಮಾಡಿದ. ಆಂಡಯ್ಯ ಸಂಸ್ಕೃತವನ್ನು ನಿರಾಕರಿಸುವ ಮೂಲಕ ಕಥಾ ವಸ್ತು, ಶೈಲಿಗಳಲ್ಲಿ ಸ್ವಂತಿಕೆಯನ್ನು ಪ್ರದರ್ಶಿಸಿದ. ಚಂಪೂ ರೂಪವನ್ನು ಅನುಸರಿಸಿದ್ದರೂ ಸಂಸ್ಕೃತ ಬೆರೆಸದೆ ಕನ್ನಡದಲ್ಲಿ ಬರೆಯುವುದು ಸಾಧ್ಯ ಎಂದು ತೋರಿಸಲು ಪ್ರಯತ್ನಿಸಿದ ಮೊದಲಿಗನೆನಿಸಿದ್ದಾನೆ. ತನ್ನಿಂದ ಮೊದಲಿಗೆ ಯಾರೂ ಮಾಡದ ಸಾಹಸವೊಂದನ್ನು ಕಾವ್ಯ ರಚನೆಯಲ್ಲಿ ಮಾಡಿ ವಿಶಿಷ್ಟನೆನಿಸಿದ್ದಾನೆ. ಸಂಸ್ಕೃತ ಬೆರೆಸದೆ "ಅಚ್ಚಗನ್ನಡಂ ಬಿಗಿವೊಂದಿರೆ" ಕಬ್ಬಿಗರನ್ನು ಕಾಯುವ 'ಕಬ್ಬಿಗರ ಕಾವ್ಯ' ಕೃತಿಯನ್ನು ಬರೆದ. ಅಚ್ಚಗನ್ನಡದ ಹೆಸರಲ್ಲಿ ಸಂಸ್ಕೃತವು ತದ್ಭವರೂಪವಾಗಿ ಒಂದು ದೇಸೀಯತೆಯ ಸಾಹಸ ಸೌಂದರ್ಯವನ್ನು ಪ್ರಕಟಿಸಿದೆ. ಮುಂದಿನ ಕವಿಗಳ ಮೇಲೆ ಆಂಡಯ್ಯನ ಪ್ರಭಾವ ಆಗಿದೆಯಾದರೂ ಯಾರೂ ಆತನ ಕಾವ್ಯ ಮಾರ್ಗವನ್ನು ಅನುಸರಿಸಲಿಲ್ಲ.

ಮುಂದೆ ಮುದ್ದಣ ತನ್ನ ರಾಮಾಶ್ವಮೇಧದಲ್ಲಿ ಕನ್ನಡದಲ್ಲಿ ಸಂಸ್ಕೃತದ ಹಿತಮಿತವಾದ ಬಳಕೆಯ ಬಗೆಗೆ ಪ್ರಜ್ಞಾಪೂರ್ವಕವಾಗಿಯೇ ಹೇಳಿದ್ದಾನೆ.

"ಕರ್ಮಣಿ ಸರದೊಳ್ ಚೆಂಬವಳಮಂ ಕೋದಂತಿರೆ ರಸಮೊಸರೆ ಲಕ್ಷಣಂ ಮಿಕ್ಕಿರೆ ಎಡೆ ಎಡೆಯೊಳ್ ಸಕ್ಕದದ ನಲ್ನುಡಿ ಮೆಱೆಯೆ ತಿರುಳ್ಗನ್ನಡದೊಳ್ ಕತೆಯನುಸಿರ್ವೆಂ" ಎಂದು ಕನ್ನಡದ ಹೃದ್ಯವಾದ ಶೈಲಿಯೊಂದನ್ನು ಕಂಡುಕೊಂಡಿದ್ದಾನೆ ಸಂಸ್ಕೃತ ನಿರಾಕರಣೆಗೆ ಯೋಗ್ಯವಲ್ಲ. ಅದರಲ್ಲಿಯೂ ಅವನೇ ಹೇಳಿದ 'ತಿರುಳ್ಗನ್ನಡ'ದಲ್ಲು ಸಂಸ್ಕೃತದ ನಲ್ನುಡಿಗಳನ್ನು ಬಳಸಬೇಕೆಂಬ ಅವನ ಅಪೇಕ್ಷೆ ಕನ್ನಡ ಬರವಣಿಗೆಯ ಹೊಸ ಶೈಲಿಯೊಂದನ್ನು ದಾಖಲಿಸುತ್ತದೆ. ಕಷ್ಟವಲ್ಲದ ಸರಳ ಸಂಸ್ಕೃತ ಪದಗಳ ಬಳಕೆಯೇ ಅವನ ಉದ್ದೇಶವಾದರೂ ಕಾವ್ಯದಲ್ಲಿ ಎಷ್ಟರ ಮಟ್ಟಿಗೆ ಸಾಧ್ಯವಾಗಿದೆ ಎಂಬುದು ಮುಖ್ಯವಲ್ಲ. ಸಂಸ್ಕೃತದ ಬಗೆಗೆ ಮುದ್ದಣನು ತಾಳಿದ್ದ ನಿಲುವು ಮುಖ್ಯವಾಗುತ್ತದೆ.

ಸಂಸ್ಕೃತ ಕಾವ್ಯ ಪರಂಪರೆಯನ್ನು ಅನುಸರಿಸಿ ಕನ್ನಡದ ದೇಸಿ ಪ್ರಜ್ಞೆಯನ್ನು ಮೆರೆದ ಪಂಪ, ಸಂಸ್ಕೃತದ ತಿಳುವಳಿಕೆ ಹಾಗೂ ಬದುಕಿನ ಅನುಭವಗಳೆರಡೂ ಸಾಮಾಜಿಕರಿಗೆ ತಲುಪಿಸಲು ಬೇಕಾದ ಸರಳಗನ್ನಡದ ವಚನ ರಚನೆಯ ದಾರಿಯನ್ನು ಕಂಡುಕೊಂಡವರು

ವಚನಕಾರರು. ಸಂಸ್ಕೃತವನ್ನು ದೂರವಿಟ್ಟು ಅಚ್ಚಗನ್ನಡದಲ್ಲಿ ಬರೆಯುವುದು ಸಾಧ್ಯ ಎಂಬ ದೃಢ ನಿಲುವನ್ನು ಹೊಂದಿದವ ಆಂಡಯ್ಯ. ಹಿತಮಿತವಾದ ಸಂಸ್ಕೃತದ ಬಳಕೆಯಲ್ಲಿ ಸೊಗಸಿನ ಶೈಲಿಯನ್ನು ಗುರುತಿಸಿದವನು ಮುದ್ದಣ. ಹೀಗೆ ಆಧುನಿಕ ಪೂರ್ವ ಕನ್ನಡ ಕವಿಗಳು ಸಂಸ್ಕೃತವನ್ನು ಜೊತೆಗಿರಿಸಿಕೊಂಡು ನಿರ್ದಿಷ್ಟ ಅಂತರವನ್ನು ಕಾಯ್ದುಕೊಂಡವರೇ. ಸಂಸ್ಕೃತವನ್ನು ನೇರ ಅವಲಂಬಿಸದೆಯೇ ಕನ್ನಡತನವನ್ನು ಪ್ರತಿಪಾದಿಸಿದ ಕೃತಿಕಾರರಿವರು. ಇವರೆಲ್ಲರ ಆಲೋಚನೆಯ ಕೇಂದ್ರ ಪ್ರಜ್ಞೆ ಇದ್ದಿರುವುದು ಮಾತ್ರ ಸಂಸ್ಕೃತದಲ್ಲಿ ಎಂಬುದೂ ವಾಸ್ತವವೇ. ಇಷ್ಟಿದ್ದೂ ಕನ್ನಡ ಕವಿಗಳು ಸಂಸ್ಕೃತ ಕಾವ್ಯಕೃತಿಗಳನ್ನು ಅನುಸರಿಸಿ ಬಿಡಿ ಪದ್ಯಗಳನ್ನು ಅನುವಾದ ಮಾಡಿದ ದೃಷ್ಟಾಂತಗಳೂ ಇವೆ. ಪಂಪ, ಪೊನ್ನ, ನಾಗಚಂದ್ರರಲ್ಲಿ ಕಾಳಿದಾಸನನ್ನು, ಕವಿರಾಜಮಾರ್ಗಕಾರನಲ್ಲಿ ದಂಡಿ, ಭಾಮಹರನ್ನು, ಪಂಪ, ರನ್ನರಲ್ಲಿ ಭಟ್ಟನಾರಾಯಣನನ್ನು, ಜನ್ನನಲ್ಲಿ ವಾದಿರಾಜನನ್ನು, ರುದ್ರಭಟ್ಟನಲ್ಲಿ ಲೀಲಾಶುಕನನ್ನು, ವಾಗವರ್ಮನಲ್ಲಿ ರಾಜಶೇಖರನನ್ನು, ಪಂಪನಲ್ಲಿ ಜಿನಸೇನಾಚಾರ್ಯನನ್ನು ಪ್ರಭಾವ ಹಾಗೂ ಅನುವಾದಗಳ ರೂಪದಲ್ಲಿ ಕಾಣಬಹುದು. ಇಲ್ಲಿನ ಕೆಲವೊಂದು ಬಿಡಿ ಪದ್ಯಗಳು ಆಧುನಿಕಾರ್ಥದಲ್ಲಿ ಯಥಾವತ್ತಾದ ಅನುವಾದಗಳೇ ಆಗಿದೆ ಎಂಬುದನ್ನು ವಿದ್ವಾಂಸರು ಗುರುತಿಸಿದ್ದಾರೆ(ನೋಡಿ: ಸಿ.ಪಿ.ಕೆ., 2009). ಆದರೆ ಆಧುನಿಕ ದಿನಗಳ ಬರಹಗಾರರಿಗೆ ಸಂಸ್ಕೃದ ಜೊತಗಿನ ಸಂಬಂಧ ವಿಭಿನ್ನವಾದುದು.

ಕನ್ನಡ ಮಾತು ತಲೆಯೆತ್ತಬೇಕಾದರೆ ಸಂಸ್ಕೃತದ ಜಟಿಲತೆಯಿಂದ ಬಿಡುಗಡೆ ಪಡೆಯ ಬೇಕಾದ ಅಗತ್ಯವನ್ನು ಸಾರಿ ಹೇಳಿದವರು ಬಿ.ಎಂ.ಶ್ರೀಕಂಠಯ್ಯನವರು. ಸಂಸ್ಕೃತ ಸಮಾಸಗಳ ಆಡಂಬರದಿಂದ ಕನ್ನಡ ಸಾಮಾನ್ಯ ಓದುಗರಿಂದ ದೂರ ಉಳಿಯುವಂತಾಯಿತು. ಎಲ್ಲಾ ಬಗೆಯ ಓದುಗರಿಗೆ ಅರ್ಥವಾಗುವ ಬಳಕೆಯ ನುಡಿಯನ್ನು ಬರವಣಿಗೆಯಲ್ಲಿ ತರಬೇಕೆಂಬ ಆಶಯವನ್ನು ಬಿ.ಎಂ.ಶ್ರೀಯವರು ವ್ಯಕ್ತಪಡಿಸಿದರು. ಸಂಸ್ಕೃತದ ಕಾಠಿಣ್ಯವೇ ಕನ್ನಡದ ಸರಳತೆಗೆ ಮಾರಕವಾಗಿದೆ ಎಂಬುದು ಅವರ ಅಭಿಪ್ರಾಯವಾಗಿತ್ತು. ಅದುವರೆಗೆ ಕನ್ನಡವನ್ನು ಪೋಷಿಸಿ ಬೆಳೆಸಿದ ಸಂಸ್ಕೃತವನ್ನು ಮಾತೃಸ್ಥಾನದಲ್ಲಿ, ಆಕರ ಸ್ಥಾನದಲ್ಲಿ ಇರಿಸಿ ಮಾನ್ಯ ಮಾಡಿದ ಆಧುನಿಕಪೂರ್ವದ ಬರಹಗಾರರಿಗಿಂತ ಬೇರೆಯೇ ದಾರಿಯಲ್ಲಿ ಕ್ರಮಿಸುವಂತೆ ಶ್ರೀಯವರು ತಿಳಿಸಿದರು. ಸಂಸ್ಕೃತದ ನಡುವೆಯಿದ್ದು ಅನುಸಂಧಾನ ನಡೆಸುವ ಪ್ರಕ್ರಿಯೆಗಿಂತ ಅದರಿಂದ ಹೊರಬಂದು ಮುಕ್ತದಾರಿಯಲ್ಲಿ ಬರವಣಿಗೆಯನ್ನು ರೂಪಿಸುವುದು ಆಧುನಿಕ ಸಂದರ್ಭದ ಅಗತ್ಯವಾಗಿದೆ. ಇದರಿಂದ ಮುಂದೆ ಆಧುನಿಕ ಬರಹಗಾರರಲ್ಲಿ ಭಾಷೆ ಮತ್ತು ಸಾಹಿತ್ಯವನ್ನು ನೋಡುವ ದೃಷ್ಟಿಕೋನಗಳು ಬದಲಾದವು. ಸಂಸ್ಕೃತವು ನಿರ್ದಿಷ್ಟ ಸಮುದಾಯವೊಂದರ ಅದರದಲ್ಲಿಯೂ ಮೇಲುವರ್ಗದವರರ ಭಾಷೆ. ಅಲ್ಲಿ ರಚನೆಯಾದ ಸಾಹಿತ್ಯ ಪ್ರತಿಗಾಮಿ ಧೋರಣೆಗಳಿಂದ ಕೂಡಿದ್ದು, ಅದು ಸಮಕಾಲೀನ ಜನ ಸಾಮಾನ್ಯದ ಬದುಕಿನ ಯಾವುದೇ ಆಶೋತ್ತರಗಳನ್ನು ಪ್ರತಿಪಾದಿಸುವುದಿಲ್ಲ ಎಂಬಿತ್ಯಾದಿ ಕಾರಣಗಳಿಂದಾಗಿ ಪರಂಪರಾಗತ ಸಂಸ್ಕೃತ ಸಾಹಿತ್ಯದ ಕುರಿತ ಚಿಂತನೆಗಳು ಬರಲಾರಂಭಿಸಿದವು. ಪಾಶ್ಚಾತ್ಯರಿಗೆ ಸಂಸ್ಕೃತ ಶಾಸ್ತ್ರ ಪುರಾಣಗಳು ಪ್ರಿಯವಾದರೂ ಭಾರತೀಯ ಸಂದರ್ಭದಲ್ಲಿ ಒಂದು ಬಗೆಯ ನಿರ್ಲಕ್ಷ್ಯವೇ ತಲೆದೋರಿತು. ಕನ್ನಡದಲ್ಲಿಯೂ ಇದೇ ತೆರನ ಧೋರಣೆಗಳು ಪ್ರಕಟವಾದುವು. ಆದರೂ ಸಂಸ್ಕೃತ ಬಲ್ಲ ವಿದ್ವಾಂಸರು ಅಲ್ಲಿನ ಕೃತಿಗಳನ್ನು ಕನ್ನಡಕ್ಕೆ ಅನುವಾದ ಮಾಡುತ್ತಲೇ ಬಂದಿದ್ದಾರೆ.

ಸಂಸ್ಕೃತ ಸಾಹಿತ್ಯವನ್ನು ಭಾರತೀಯ ಪರಂಪರೆಯ ಸಾಕ್ಷಿಪ್ರಜ್ಞೆಯಾಗಿ ಗ್ರಹಿಸಿದ ಆಧುನಿಕ

ವಿದ್ವಾಂಸರಿದ್ದಾರೆ. ಸಂಸ್ಕೃತವನ್ನು ದೂರವಾಗಿಸುವ ಪ್ರಯತ್ನದ ನಡುವೆ ಪರಂಪರಾಗತ ಜ್ಞಾನ ಪರಂಪರೆಯ ಬಗೆಗೆ ಅದಮ್ಯವಾದ ಪ್ರೀತಿಯಿಟ್ಟುಕೊಂಡಿರುವವರೂ ಅನೇಕರಿದ್ದಾರೆ. ಸರ್ದಾರ್ ಕೆ.ಎಂ.ಪಣಿಕ್ಕರ್ ಅವರು ಅಭಿಪ್ರಾಯ ಪಡುವಂತೆ "ಸಂಸ್ಕೃತ ನಮ್ಮ ಏಕೈಕ ಮಹತ್ತಮ ರಾಷ್ಟ್ರೀಯ ಆಸ್ತಿಯೂ ನಮ್ಮ ರಾಷ್ಟ್ರೀಯ ಸ್ವಭಾವದ ತಾಯಿ ಬೇರೂ ನಮ್ಮ ಆಲೋಚನೆಯ ವಿಧಾನವೂ ಆಗಿದೆ. ಮತ್ತು ನಮ್ಮ ಭಾವನೆಗಳೆಲ್ಲ ಸಂಸ್ಕೃತದಲ್ಲಿ ಅಡಗಿಕೊಂಡಿದೆ ಎಂಬ ವಿಷಯವನ್ನು ಲೆಕ್ಕಿಸದೆ ಬಿಟ್ಟರೂ ಕೂಡಾ ನಿಜವಾದ ಭಾರತೀಯನೆಂದು ಕರೆದುಕೊಳ್ಳುವ ಯಾರಿಗಾದರೂ ಅದರ ಪರಿಚಯ ಅಗತ್ಯ"(ಕಲಾಪ: ಪು. 143) ಸಂಸ್ಕೃತವನ್ನು ತಿಳಿದುಕೊಂಡಿದ್ದೇವೆಂದು ಹೇಳಿಕೊಳ್ಳಲು ಸಂಸ್ಕೃತದ ವ್ಯಾಕರಣದ ಸೂಕ್ಷ್ಮಗಳನ್ನು ಕರತಲಾಮಲಕ ಮಾಡಿಕೊಳ್ಳಲೇ ಬೇಕು ಎಂಬ ತಿಳುವಳಿಕೆ ಸಂಸ್ಕೃತ ವಿದ್ವಾಂಸರಲ್ಲಿದೆ. ಇಂತಹ ತಿಳುವಳಿಕೆಯ ಕಾರಣಕ್ಕೆ ಸಂಸ್ಕೃತದ ಬಗೆಗೆ ಸಾಮಾನ್ಯ ವಿದ್ವಾಂಸರು ತಿರಸ್ಕಾರದ ದೃಷ್ಟಿ ಬೀರಲು ಕಾರಣವಾಗಿರಬಹುದು. ಹಾಗಿದ್ದರೂ ಪಣಿಕ್ಕರಂತಹ ವಿದ್ವಾಂಸರು ಸಂಸ್ಕೃತದ ಬಗೆಗೆ ದೃಢವಾದ ನಿಲುವುಗಳನ್ನು ತಳೆದಿದ್ದರು. "ಸಂಸ್ಕೃತವೊಂದೇ ಭಾರತದ ರಾಷ್ಟ್ರೀಯ ಭಾಷೆ. ಭವಿಷ್ಯದ ಸಾಮಾನ್ಯ ಭಾಷೆಗಳ ವ್ಯವಹಾರ ಭಾಷೆಯಾಗಿ ಹಿಂದಿ ಯಾವ ಸ್ಥಾನವನ್ನಾದರೂ ಪಡೆದುಕೊಳ್ಳಲಿ, ಭಾರತದ ಐಕ್ಯವಂತೂ ಸಂಸ್ಕೃತದ ಸಂಬಂಧವನ್ನು ಕಳೆದುಕೊಂಡರೆ ಅಥವಾ ಸಂಸ್ಕೃತ ಪರಂಪರೆಯಿಂದ ದೂರ ಸಿಡಿದರೆ ಕುಸಿದುಬೀಳುತ್ತದೆ. ಮಹಾ ಪ್ರಾದೇಶಿಕ ಭಾಷೆಗಳನ್ನು ಮೀರಿಸುವ ಸರ್ವೋತ್ಕೃಷ್ಟತೆ ಸಂಸ್ಕೃತವೊಂದಕ್ಕೆ ಇರತಕ್ಕದ್ದು. ಆ ಹಕ್ಕು ಹಿಂದಿಗೆಂದೂ ಬರಲಾರದು. ಭಾರತೀಯ ಐಕ್ಯವನ್ನು ಭಾರತದ ಪ್ರಾಂತದಲ್ಲೂ ಎತ್ತಿ ಹಿಡಿಯಲು ಸಂಸ್ಕೃತಕ್ಕೆ ಸಾಧ್ಯವಾಗಿದೆ..."(ಕಲಾಪ, ಪು. 146).

ಆದರೆ ಆಧುನಿಕ ಭಾರತೀಯ ಸಾಹಿತ್ಯ ಮತ್ತು ಸಂಸ್ಕೃತ ಸಾಹಿತ್ಯ ಪರಂಪರೆಗಳ ನಡುವಿನ ಸಂಬಂಧ ತೆಳುವಾಗುತ್ತಲೇ ಬಂದಿದೆ. ಜಿ.ಎನ್. ದೇವಿಯಂತಹ ವಿದ್ವಾಂಸರು ಅದಕ್ಕಿರುವ ಕಾರಣಗಳನ್ನು ಶೋಧಿಸುವ ಪ್ರಯತ್ನವನ್ನು ಮಾಡಿದ್ದಾರೆ. ಅವರ ಪ್ರಕಾರ ಸಂಸ್ಕೃತ ಸಾಹಿತ್ಯ ಪರಂಪರೆಯಲ್ಲಿನ ಆಂತರಿಕ ದೌರ್ಬಲ್ಯ ವಿದೇಶೀ ಪ್ರಭಾವದ ಅಲೆಗಳ ಪುನರಾವರ್ತನೆ ಮತ್ತು ವಸಾಹತುಶಾಹಿ ಆಡಳಿತಗಳು ಅಸಂಸ್ಕೃತ ಸಾಹಿತ್ಯಕ್ಕೆ ರಾಜಾಶ್ರಯವನ್ನು ಒದಗಿಸದೇ ಇರುವುದು, ನಿರಂತರ ಸಾಮಾಜಿಕ ಪರಿವರ್ತನೆ ಮತ್ತು ಬೆಳೆಯುತ್ತಿದ್ದ ಭಾಷಿಕ ಅಸಂಪ್ರದಾಯಕತೆ, ಶತಮಾನಗಳ ಉದ್ದೇಶಪೂರ್ವಕ ನಿರ್ಲಕ್ಷ್ಯ ಇತ್ಯಾದಿಗಳು ಪ್ರಮುಖವಾದವುಗಳು.

ಆಧುನಿಕ ಬರಹಗಾರರಿಗೆ ಸಂಸ್ಕೃತ ಸಾಹಿತ್ಯ ಮತ್ತು ವಿಮರ್ಶೆಯ ಸಂಪ್ರದಾಯ ಕಾಲ್ಪನಿಕವಾದ ಆದರ್ಶವಾಗಿ ಗ್ರಹಿತಕ್ಕೆ ನಿಲುಕುತ್ತದೆ. ಸಾವಿರಾರು ವರ್ಷಗಳ ಹಿಂದಿನಿಂದಲೂ ಭಾರತವು ಅಮೋಘವಾದ ವಿಮರ್ಶಾ ಪರಂಪರೆಯನ್ನು ಹೊಂದಿತ್ತು ಎಂದು ಆಧುನಿಕರು ಹೆಮ್ಮೆಯಿಂದ ಹೇಳಿಕೊಳ್ಳಬಹುದು. ಆದರೆ ಅವರ್ಯಾರೂ ಆ ಪರಂಪರೆಯನ್ನು ಕ್ರಿಯಾತ್ಮಕವಾಗಿ ತಮ್ಮ ಬೌದ್ಧಿಕ ಚಟುವಟಿಕೆಯಲ್ಲಿ ಅಳವಡಿಸಿಕೊಳ್ಳಲಾರರು.

ಭಾರತದ ಪರಂಪರಿಕವಾದ ಸಾಂಸ್ಕೃತಿಕ ಸಂಪತ್ತು ಒಂದು ಕಾಲದಲ್ಲಿ ಪ್ರಖ್ಯಾತವಾಗಿತ್ತು. ಆದರೆ ಆಧುನಿಕ ದಿನಗಳಲ್ಲಿ ಅದು ಪತನದ ಹಾದಿಯಲ್ಲಿದೆ. ಹಾಗಾಗಿ ಪ್ರಾಚೀನ ಭಾರತ ಮತ್ತು ಆಧುನಿಕ ಭಾರತದ ನಡುವೆ ಯಾವುದೇ ಸಂಬಂಧವನ್ನು ಕಾಣಲು ಸಾಧ್ಯವಾಗದಂತೆ ಇತಿಹಾಸವನ್ನು ಪಾಶ್ಚಾತ್ಯ ವಿದ್ವಾಂಸರು ನಿರೂಪಿಸಿದ್ದಾರೆ. ಅವು ಭಾರತದ ಸಾಂಸ್ಕೃತಿಕ ಸಂಗತಿಗಳನ್ನು ವಸ್ತುಸಂಗ್ರಹಾಲಯದ ವಸ್ತುಗಳಂತೆ ಅಧ್ಯಯನ ಮಾಡುವುದನ್ನು

ಬಯಸುತ್ತವೆ. ಅಷ್ಟೇ ಅಲ್ಲದೆ ಪ್ರಾಚೀನವಾದುದನ್ನು ವೈಭವೀಕರಿಸಿ ರಂಜನೀಯವಾಗಿಸಿ ಚಿತ್ರಿಸುತ್ತವೆ. ಇವುಗಳನ್ನು ಪೂರ್ಣವಾಗಿ ಅಚಾರಿತ್ರಿಕ ದೃಷ್ಟಿಕೋನದಿಂದ ನೋಡುತ್ತವೆ. ಯುರೋಪಿಯನ್ ವಿದ್ವಾಂಸರು ಪ್ರಸ್ತುತಪಡಿಸಿದ ಇಂತಹ ದೃಷ್ಟಿಕೋನದಿಂದಾಗಿ ಭಾರತಕ್ಕೆ ಪರಂಪರೆಯ ಬಗೆಗೆ ಇರುವ ನಿಲುವು ದುರ್ಬಲವಾಯಿತು.

ಭಾರತೀಯ ಪ್ರಣೀತವಾದ ಜ್ಞಾನವು ಅನ್ಯ ಬೌದ್ಧಿಕ ಪ್ರಭಾವದ ಮುಂದೆ ಸುಲಭವಾಗಿ ಕ್ಷೀಣಿಸುವುದಕ್ಕಿರುವ ಕಾರಣಗಳನ್ನು ನಿರ್ವಚಿಸಿಕೊಳ್ಳುವುದು ಸುಲಭ ಸಾಧ್ಯವಲ್ಲ. ಭಾರತೀಯ ಶಾಸ್ತ್ರವು ಆಧುನಿಕ ದಿನಗಳಲ್ಲಿ ಸಶಕ್ತವಾಗಿ ಪ್ರಭಾವಿಸುವಲ್ಲಿ ಸಫಲವಾಗಲಿಲ್ಲ. ಇದಕ್ಕೆ ಮುಖ್ಯ ಕಾರಣವೆಂದರೆ ಶಿಕ್ಷಣದ ಬಗೆಗಿನ ಚರ್ಚೆಯಲ್ಲಿ ಇಂಗ್ಲಿಷ್ ಪ್ರಣೀತ ಚಿಂತನೆಗಳಿಗೆ ಭಾರತೀಯ ಶಾಸ್ತ್ರಜ್ಞರು ವಿಧೇಯರಾಗಿದ್ದರು. ವಸಾಹತುಶಾಹಿ ಭಾರತದ ಶಿಕ್ಷಣ ನೀತಿಯು ಪೌರಾತ್ಯವಾದಕ್ಕಿಂತ ಆಂಗ್ಲೀಕರಣವಾದವನ್ನು ಪ್ರೋತ್ಸಾಹಿಸಿತು. ಹಾಗಾಗಿ ಭಾರತಶಾಸ್ತ್ರದ ನಿಲುವುಗಳನ್ನು ಅನುಸರಿಸುವ ಒತ್ತಡಗಳಿಗೆ ಬಲಬರಲಿಲ್ಲ. ಅನ್ಯ ಪ್ರಭಾವಗಳನ್ನು ಒಪ್ಪಿಕೊಳ್ಳಲು ಸಂಸ್ಕೃತಿಯ ಒಳಗಿನ ಚಲನೆಗಳು ಎಷ್ಟರ ಮಟ್ಟಿಗೆ ಅನುಮತಿಸುತ್ತವೆಯೋ ಅಷ್ಟರಮಟ್ಟಿಗೆ ಹೊರಗಿನಿಂದ ಪ್ರಭಾವಿಸುವ ಶಕ್ತಿಗಳಿಂದ ಮಾರ್ಗದರ್ಶನವೂ ದೊರೆಯುತ್ತದೆ ಎಂಬಿತ್ಯಾದಿಯಾಗಿ ಜಿ.ಎನ್. ದೇವಿಯಂತಹ ವಿದ್ವಾಂಸರು ಅಭಿಪ್ರಾಯಿಸಿದ್ದಾರೆ.

ಆಧುನಿಕ ಚಿಂತನೆಯ ಸಂದರ್ಭದಲ್ಲಿನ ವಿರೋಧಾಭಾಸವನ್ನು ಸಹ ಅವರು ಗುರುತಿಸುತ್ತಾರೆ. ಪಾಶ್ಚಾತ್ಯ ಬೌದ್ಧಿಕ ಪ್ರಭಾವವನ್ನು ಆಧುನಿಕ ಚಿಂತನೆಯ ಚಾಲಕ ಶಕ್ತಿಯೆಂದು ಒಪ್ಪಿಕೊಳ್ಳಲಾಗುತ್ತದೆ. ಆದರೆ ಪಾಶ್ಚಾತ್ಯ ವಸಾಹತೀಕರಣವನ್ನು ಮಾರಕ ಎಂದು ತಿರಸ್ಕರಿಸಲಾಗುತ್ತದೆ. ಪಾಶ್ಚಾತ್ಯ ಹಾಗೂ ಇತರ ಸೃಜನಶೀಲ ಸಾಹಿತ್ಯವನ್ನು ಪ್ರಗತಿಪರ ಹಾಗೂ ಉದಾರತೆಯ ಸಂಕೇತವಾಗಿ ಕಾಣುವಾಗಲೇ ರಾಜಕೀಯ ನಿಲುವುಗಳನ್ನು ದುಷ್ಟ ಹಾಗೂ ಸಾಮ್ರಾಜ್ಯಶಾಹಿ ಎಂದು ಕರೆಯಲಾಗುತ್ತದೆ. ಭಾರತೀಯ ಸಾಹಿತ್ಯದ ಪ್ರಗತಿಪರ ಬೆಳವಣಿಗೆಗಳಿಗೆ ಪಾಶ್ಚಾತ್ಯ ಪ್ರಭಾವವನ್ನು ಕಾರಣವೆಂದು ಗುರುತಿಸಲಾಗುತ್ತದೆ. ಅದರಲ್ಲಿನ ಸೋಲಿಗೆ ವಸಾಹತುಶಾಹಿ ಆಡಳಿತ ಕಾರಣ ಎಂದು ಆರೋಪಿಸಲಾಗುತ್ತದೆ.

ಸಂಸ್ಕೃತದಲ್ಲಿರುವ ಶಾಸ್ತ್ರ ಸಾಹಿತ್ಯ, ಪುರಾಣಗಳು ಭಾರತೀಯ ಸಾಹಿತ್ಯ ಪರಂಪರೆಯ ಭಾಗವಾಗಿ ಒಪ್ಪಿಕೊಳ್ಳುತ್ತಲೇ ಅವುಗಳಿಂದ ಇತರ ಭಾರತೀಯ ಭಾಷಾ ಸಾಹಿತ್ಯ ಪರಂಪರೆಗಳು ದೂರ ಸರಿಯುವುದನ್ನೇ ಪ್ರಗತಿಪರ ಎಂದೂ ಜನಮುಖಿ ಎಂದೇ ಭಾವಿಸುವಂತಾಗಿದೆ. ಈ ಕಾರಣಕ್ಕಾಗಿಯಾದರೂ ಸಂಸ್ಕೃತ ಕೃತಿಗಳ ಕನ್ನಡ ಅನುವಾದಗಳನ್ನು ಜನ ಸಮೀಪ ತರಬೇಕಾದ ಅಗತ್ಯವಿದೆ. ಅದಕ್ಕಾಗಿ ಅನುವಾದಗಳನ್ನು ಜಟಿಲವಾಗಿ ರೂಪಿಸದೆ ಸರಳವಾಗಿ ಮರುನಿರೂಪಿಸಬೇಕಾಗಿದೆ. ಆಧುನಿಕ ಪೂರ್ವಕವಿಗಳು ಸಂಸ್ಕೃತ ಕೃತಿಗಳನ್ನಾಧರಿಸಿಯೂ ಕನ್ನಡದಲ್ಲಿ ಮರು ನಿರೂಪಿಸಿವಂತೆ ಸೃಜನಶೀಲ ಅನುವಾದಗಳನ್ನು ಇಂದಿನ ದಿನಗಳಲ್ಲಿಯೂ ರೂಪಿಸಿ ಓದುಗರನ್ನು ಆಕರ್ಷಿಸಬೇಕಾಗಿದೆ. ಆಕರ ಕೃತಿಗಳ ವಸ್ತು, ಆಶಯಗಳು ಆದರ್ಶವಾದದ ಅಮೂರ್ತ ನೆಲೆಯಲ್ಲಿರಬಹುದು. ಅವುಗಳಲ್ಲಿ ವಾಸ್ತವ ನೆಲೆಗೆ ತಂದು ಮರು ರೂಪಿಸುವ ಸಾಧ್ಯತೆಗಳನ್ನು ಗಮನಿಸಿ ಕನ್ನಡಕ್ಕೆ ತರಬೇಕಾಗಿದೆ. ಸಂಸ್ಕೃತದಿಂದ ಕನ್ನಡಕ್ಕೆ ಬಂದ ಭಾಷಾಂತರಗಳಲ್ಲಿ ಕನ್ನಡವನ್ನು ಅಧೀನ ಭಾಷೆಯ ಸ್ಥಾನದಲ್ಲಿಯೇ ಉಳಿಸಿದೆ. ಸಂಸ್ಕೃತವು ಮಾತೃಸ್ಥಾನದಲ್ಲಿದ್ದು ಮೂಲ ಕೃತಿಯನ್ನು ಯಥಾವತ್ತಾಗಿ ತರುವ ಅಚಲ ವಿಶ್ವಾಸದಿಂದ ಭಾಷಾಂತರವನ್ನು ರೂಪಿಸಿದುದೂ ಇದೆ. ಇದರಿಂದ ಭಾಷಾಂತರದ ಕನ್ನಡವು ಜನಬಳಕೆಯ ಭಾಷೆಯಾಗದೆ ಗ್ರಾಂಥಿಕ ಭಾಷೆಯ ಗಾಂಭೀರ್ಯದಲ್ಲಿಯೇ

ಉಳಿದು ಓದುಗರಿಂದ ಅಂತರವನ್ನು ಕಾಯ್ದುಕೊಂಡಂತಾಗಿದೆ. ಭಾಷಾಂತರಗಳು ಓದುಗರಿಗೆ ಆಪ್ತವಾಗದೆ ದೂರವುಳಿದಿವೆ. ಕೃತಿಯ ಆಶಯಗಳು ಜನಮುಖಿಯಾಗುವ ಸಮಕಾಲೀನ ಸಮಾಜದ ಜೊತೆ ಅನುಸಂಧಾನಗೊಳಿಸುವುದರ ಮೂಲಕ ಅನುವಾದಗಳು ಸಾಗಬೇಕಾದ ದಾರಿಯನ್ನು ಕಂಡುಕೊಳ್ಳಬೇಕಾಗಿದೆ. ಇತರೆ ಭಾಷೆಯ ಅನುವಾದಗಳು ಸಮಕಾಲೀನ ಓದುಗರಿಗೆ ಸ್ಪಂದಿಸುತ್ತಿರುವಂತೆ ಸಂಸ್ಕೃತದಿಂದ ಬರುವ ಅನುವಾದಗಳು ಸಹ ಸಮಕಾಲೀನ ಓದುಗರ ಸ್ಪಂದನಕ್ಕೆ ಕಾರಣವಾಗಬೇಕಾಗಿದೆ.

ಬೇರೆ ಬೇರೆ ಕಾಲಗಳಲ್ಲಿ ಸಂಸ್ಕೃತದಿಂದ ಬಂದ ಭಾಷಾಂತರಗಳ ಭಾಷೆ ಬೇರೆ ಬೇರೆಯಾಗಿಯೇ ಇದೆ. ಕಾಲದ ಅಗತ್ಯಕ್ಕೆ ಅನುಗುಣವಾಗಿ ಭಾಷಿಕ ನಿರೂಪಣೆ ಮಾಡುವುದರಿಂದ ಭಾಷಾಂತರಗಳ ಮೂಲಕ ಸಂಸ್ಕೃತದ ಜೊತೆಗೆ ಸಂಪರ್ಕ ಸಾಧಿಸಬಹುದು.

ಸಂಸ್ಕೃತದ ಪ್ರೌಢ ಗಂಭೀರ ಶೈಲಿಯಿಂದ ಕನ್ನಡವನ್ನು ಬಿಡುಗಡೆಗೊಳಿಸಿ ಸರಳ ಆಡುನುಡಿಯ ಬಳಕೆಯನ್ನು ಅನುವಾದಗಳಲ್ಲಿ ಮಾಡಬೇಕಾಗಿದೆ. ಅನುವಾದಗಳನ್ನು ಪ್ರಧಾನ ಆಕರಗಳಾಗಿ ಗಣಿಸಿ ಅಧ್ಯಯನಗಳನ್ನು ವಿಸ್ತರಿಸಬೇಕಾಗಿದೆ.

ಸಂಸ್ಕೃತ ಸಾಹಿತ್ಯದ ಅನುವಾದಗಳಲ್ಲಿ ಬೇರೆ ಬೇರೆ ಕಾಲಘಟ್ಟದಲ್ಲಿ ಬೇರೆ ಬೇರೆ ಕನ್ನಡದ ಬಳಕೆಯಾಗಿದೆ. ಮೂಲ ಸಂಸ್ಕೃತವನ್ನು ಸ್ಥಳೀಯ ಕನ್ನಡದೊಡನೆ ಭಾಷಿಕ ಅನುಸಂಧಾನಗಳ ಮಾದರಿಗಳನ್ನು ಇವುಗಳಲ್ಲಿ ಕಾಣಬಹುದು. ಸಂಸ್ಕೃತ ಸಾಹಿತ್ಯವನ್ನು ಕನ್ನಡ ಓದುಗರಿಗೆ ನೀಡುವುದಷ್ಟೆ ಭಾಷಾಂತರಕಾರರ ಉದ್ದೇಶವಾಗಿರಲಾರದು. ಹಾಗಿದ್ದರೆ ಒಂದಕ್ಕಿಂತ ಹೆಚ್ಚಿನ ಭಾಷಾಂತರಗಳನ್ನು ರೂಪಿಸುವ ಅಗತ್ಯವಿರುತ್ತಿರಲ್ಲಿಲ್ಲ. ಅನೇಕ ಭಾಷಾಂತರಕಾರರು ಹಿಂದಿನ ಭಾಷಾಂತರಗಳ ಇತಿಮಿತಿಗಳನ್ನು ಗುರುತಿಸಿಯೇ ಹೊಸ ಭಾಷಾಂತರಗಳನ್ನು ರೂಪಿಸುತ್ತಿದ್ದರು. ಆಗೆಲ್ಲ ಭಾಷಾಂತರಗಳು ಕನ್ನಡದ ಓದುಗರನ್ನು ಸರಿಯಾಗಿ ತಲುಪಿಲ್ಲ ಎಂಬ ಕಾರಣಕ್ಕಾಗಿಯೇ ಇನ್ನೊಂದು ಭಾಷಾಂತರರ ಅಗತ್ಯವನ್ನು ಕಂಡುಕೊಳ್ಳುತ್ತಿದ್ದರು. ಭಾಷಾಂತರರ ಇತಿಮಿತಿಗಳೇ ಕಾರಣವಾಗಿ ಹೊಸ ಭಾಷಾಂತರಗಳ ಸೃಷ್ಟಿಯಾಗುತ್ತಿದ್ದ ಒಂದು ಕಾಲಘಟ್ಟದ ನಿಲುವುಗಳಿಗೂ ಸಂಸ್ಕೃತ ಭಾಷಾಂತರಗಳನ್ನು ನಿರ್ಲಕ್ಷ್ಯದಿಂದ ನೋಡುವ ಸಮಕಾಲೀನ ದಿನಗಳಲ್ಲಿಯೂ ಭಾಷಾಂತರಗಳನ್ನು ರೂಪಿಸುವವರ ನಿಲುವುಗಳಿಗೂ ಭಿನ್ನತೆಯಿದೆ. ಅಂದರೆ ವಸಾಹತುಶಾಹಿ ಕಾಲಘಟ್ಟದ ಸಂಸ್ಕೃತ ಭಾಷಾಂತರಕಾರರ ಧೋರಣೆಗಳು ಮತ್ತು ವಸಾಹತ್ತೋತ್ತರ ಕಾಲದ ಸಂಸ್ಕೃತ ಭಾಷಾಂತರಕಾರರ ಧೋರಣೆಗಳಿಗೂ ಮೂಲಭೂತವಾದ ವ್ಯತ್ಯಾಸವಿದೆ ಅದಕ್ಕೆ ಕಾರಣಗಳನ್ನು ಲಕ್ಷ್ಯಭಾಷೆಯ–ಕನ್ನಡ–ಸಂದರ್ಭದಿಂದ ಪರಿಭಾವಿಸಬೇಕಾಗಿದೆ ಎಂದೆನಿಸುತ್ತಿದೆ.

ಸಂಸ್ಕೃತ ಕೃತಿಗಳು ಭಾರತದ ವಿವಿಧ ಭಾಗಗಳ ಸ್ಥಳೀಯ ವಿವರಗಳೊಡನೆ ನೆಲದ ಸಂಬಂಧವನ್ನು ಉಳಿಸಿಕೊಂಡಿರುವುದನ್ನು ನಗಣ್ಯವಾಗಿಸದಂತೆ ಅವುಗಳನ್ನು ಆತ್ಮೀಯವಾಗಿ ನಿರೂಪಿಸಬೇಕಾಗಿದೆ. ವ್ಯಾಸಕೃತ ಮಹಾಭಾರತದಲ್ಲಿ ಭಾರತದ ಅರಣ್ಯಗಳ, ಯಾತ್ರಾಸ್ಥಳಗಳ ವರ್ಣನೆಗಳಿವೆ. ವಾಲ್ಮೀಕಿ ರಾಮಾಯಣದಲ್ಲಿ ದಕ್ಷಿಣ ಭಾರತ, ಶ್ರೀಲಂಕಾದ ಭೌಗೋಳಿಕ ವಿವರಗಳನ್ನು ಕಾಣಬಹುದು. ಕಾಳಿದಾಸನಲ್ಲಿ ಉಜ್ಜಯನಿಯ ವೈಭವ ಹಿಮಾಲಯದ ಕಣಿವೆಗಳ ವರ್ಣನೆಗಳಿವೆ. ಶೂದ್ರಕನಲ್ಲಿ ಹರ್ಷಚಿತ್ತರಾದ ನಾಗರಿಕ ಬದುಕು, ಕಲ್ಹಣನಲ್ಲಿ ಕಾಶ್ಮೀರರಾಜನ ಬದುಕು, ಜೋನರಾಜನಲ್ಲಿ ಪೃಥ್ವಿರಾಜನ ವೈಭವ, ಜಯದೇವನಲ್ಲಿ ಆತನ ಆನಂದದ ಸೊಬಗು, ಭವಭೂತಿಯಲ್ಲಿ ಗೋದಾವರಿ ತೀರದ ವಿಹಾರ, ದಂಡಿಯಲ್ಲಿ ಕಂಚಿ, ನಾರಾಯಣ ಭಟ್ಟನಲ್ಲಿ ಕೇರಳ, ಜಗನ್ನಾಥ ಪಂಡಿತನಲ್ಲಿ ಷಹಜಹಾನನ ಭವ್ಯತೆ ಇತ್ಯಾದಿಗಳ

ಮೂಲಕ ಜನಜೀವನಕ್ಕೆ ಮುಖಾಮುಖಿಯಾಗುವ ಸಂದರ್ಭಗಳು ಸಂಸ್ಕೃತ ಸಾಹಿತ್ಯದ ತುಂಬಾ ಇವೆ. ಕೃತಿಗಳ ಸಮಗ್ರ ಆಶಯಗಳನ್ನು ಬದಿಗಿಟ್ಟು ಅಲ್ಲಿ ಹುದುಗಿರುವ ಜೀವನ ಸಂಬಂಧಿ ಹಾಗೂ ಸಾದೃಶ ವಿವರಗಳ ಮೂಲಕವೂ ಸಂಸ್ಕೃತ ಸಾಹಿತ್ಯವನ್ನು ಅನುವಾದಗಳ ಮೂಲಕ ಆಪ್ತಗೊಳಿಸಬಹುದೆಂದೆನಿಸುತ್ತದೆ.

ಸಂಸ್ಕೃತ–ಕನ್ನಡ ಸಂಬಂಧಗಳನ್ನು ವಾಸ್ತವ ನೆಲೆಗಟ್ಟಿನ ಮೇಲೆ ಮರು ನಿರೂಪಣೆಗೊಳಿಸುವುದರ ಮೂಲಕ ಆಧುನಿಕ ದಿನಗಳಲ್ಲಿ ಇನ್ನಷ್ಟು ಗಟ್ಟಿಗೊಳಿಸಬೇಕಾಗಿದೆ. ಹಿಂದುತ್ವದಿಂದ ಹೊರತೆಗೆದು ಮಾನವ ಸಂವೇದನೆಯ ನೆಲೆಯಿಂದ ಸಂಸ್ಕೃತ ಅನುವಾದಗಳನ್ನು ರೂಪಿಸುವುದರಿಂದ ಮೂಲ ಕೃತಿಯ ಸಮಗ್ರತೆಗೆ ಧಕ್ಕೆಯಾಗದೆ ಅನುವಾದಗಳ ರೂಪದಲ್ಲಿ ಅವುಗಳಿಗೆ ಹೊಸ ಚೈತನ್ಯ ದೊರೆಯಬಹು ದೆಂದೆನಿಸುತ್ತದೆ. ಆಗ ಅದು ಸಮಕಾಲೀನ ಓದಿಗೆ ಆಪ್ತವಾಗಬಹುದಾದ ಸಾಧ್ಯತೆಯಿದೆ.

ದುರ್ಗಸಿಂಹನ ಕನ್ನಡ ಪಂಚತಂತ್ರ(ಕ್ರಿ.ಶ. 1031)ವು ವಸುಭಾಗ ಭಟ್ಟನ ಸಂಸ್ಕೃತ ಪಂಚತಂತ್ರವನ್ನು ಆಧರಿಸಿದೆ. ವಸುಭಾಗ ಭಟ್ಟನ ಪಂಚತಂತ್ರ ಲಭ್ಯವಿಲ್ಲ. ಸಂಸ್ಕೃತದಲ್ಲಿ ವಸುಭಾಗ ಭಟ್ಟನ ಪಂಚತಂತ್ರವೊಂದಿತ್ತು ಎಂಬುದು ದುರ್ಗಸಿಂಹನಿಂದ ತಿಳಿಯುತ್ತದೆ. ಇಲ್ಲಿ ಸಂಸ್ಕೃತದಲ್ಲಿದ್ದ ವಸುಭಾಗ ಭಟ್ಟನ ಪಂಚತಂತ್ರ ಪರಂಪರೆಯೊಂದರ ಅನುವಾದ ದುರ್ಗಸಿಂಹನಿಂದ ಕನ್ನಡಕ್ಕೆ ದೊರೆಯಿತು. ವಸುಭಾಗ ಭಟ್ಟನ ಕೃತಿಯನ್ನು ಕನ್ನಡದಲ್ಲಿ 'ಪೊಸತಾಗಿರೆ ವಿರಚಿಸುವೆಂ' ಎಂದು ಹೇಳಿರುವುದರಲ್ಲಿ ಅನುವಾದದ ಸೂಚನೆಯಿದೆ.

ವಿಷ್ಣುಶರ್ಮನ ಸಂಸ್ಕೃತ ಪಂಚತಂತ್ರವು ಭಾಷಾಂತರದ ಮೂಲಕ ಪ್ರಪಂಚ ಯಾನ ಮಾಡಿದೆ. ಬೈಬಲನ್ನು ಹೊರತುಪಡಿಸಿದರೆ ಅತ್ಯಂತ ಹೆಚ್ಚು ಭಾಷಾಂತರಗಳನ್ನು ಕಂಡ ಕೃತಿ ಪಂಚತಂತ್ರ ಎಂದು ವಿದ್ವಾಂಸರು ಹೇಳುವುದಿದೆ. ಸಂಸ್ಕೃತ ಮೂಲವೊಂದು ಬಹುಮುಖಿ ಆಯಾಮವನ್ನು ಪಡೆಯುವಲ್ಲಿ ಅನುವಾದ ಪ್ರಕ್ರಿಯೆಯ ಪಯಣ ಕುತೂಹಲಕಾರಿಯಾದುದು. ಎಲ್ಲಾ ಅನುವಾದಗಳು ಮೂಲ ಸಂಸ್ಕೃತವನ್ನು ಆಧರಿಸಿದವುಗಳಲ್ಲ. ಅವು ಬಹುತೇಕ ಅನುವಾದಗಳನ್ನು ಆಧರಿಸಿದ ಅನುವಾದಗಳೇ ಆಗಿರಬಹುದು. ಮೂಲ ಭಾಷೆಯ ಸತ್ವದ ಕಾರಣಕ್ಕಾಗಿ ಅನುವಾದಗಳಲ್ಲ. ಕೃತಿಯ ಆಶಯಗಳ ಕಾರಣಕ್ಕೆ ಅನುವಾದದ ಅಗತ್ಯವನ್ನು ಕಂಡುಕೊಂಡಿರಬಹುದು. ಹಾಗಾಗಿ ಅನುವಾದಗಳ ಅನುವಾದ ಎನ್ನುವಲ್ಲಿ ಮೂಲ ಸಂಸ್ಕೃತ ಭಾಷೆ ಗೌಣವಾಗಿ ಕೇವಲ ಪಂಚತಂತ್ರ ಎಂಬ ಕೃತಿ ಮಾತ್ರವೇ ಉಳಿದುಕೊಳ್ಳುತ್ತದೆ.

ಬೈಬಲ್ ಭಾಷಾಂತರಗಳು ಪ್ರಪಂಚದ ಯಾವ ಭಾಷೆಯಿಂದ ಯಾವಭಾಷೆಗಾದರೂ ಅನುವಾದವಾಗಿರಲಿ ಅದರ ಮೂಲವನ್ನು ಹಿಬ್ರೂ ಭಾಷೆಯಲ್ಲಿ ಇರಿಸಿಯೇ ಹೇಳಲಾಗುತ್ತದೆ. ಹಾಗೆಯೇ ಪ್ರಪಂಚದಾದ್ಯಂತ ವ್ಯಾಪಿಸಿದ ಪಂಚತಂತ್ರ ಮೂಲ ಸಂಸ್ಕೃತ ಎಂಬ ತಿಳುವಳಿಕೆಯನ್ನು ಭಾಷಾಂತರ ಅಧ್ಯಯನಗಳ ಮೂಲಕ ಪ್ರಚಾರಪಡಿಸಬೇಕಾಗಿದೆ. ಭಾಷಾಂತರಯಾನದ ಚರಿತ್ರೆಯಲ್ಲಿ ಇದು ಮುಖ್ಯವಾಗಬಹುದು. ಆದರೆ ಭಾಷಾಂತರ ಅಧ್ಯಯನಗಳಲ್ಲಿ ಭಾಷಾಂತರ ಪ್ರಕ್ರಿಯೆಯ ಸ್ವರೂಪ, ಸ್ವಭಾವಗಳನ್ನು ವಿಶ್ಲೇಷಿಸುವುದು ಅಪೇಕ್ಷಣೀಯ. ಆಗ ಮಾತ್ರವೇ ಎರಡು ಭಾಷೆಗಳ ನಡುವಿನ ಅನುಸಂಧಾನದ ಬಗೆಯನ್ನು ಕಂಡುಕೊಳ್ಳಬಹುದು. ಸಂಸ್ಕೃತದಿಂದ ಬೇರೆ ಭಾಷೆಗಳಿಗೆ ಹೋದ ಭಾಷಾಂತರಗಳನ್ನು ಮೂಲ ಭಾಷೆಯ ಸಂಬಂಧದಿಂದಲೇ ನೋಡುವ ವಿಧಾನವನ್ನು ಅಳವಡಿಸಿಕೊಳ್ಳುವುದು ಸಹ ಅಗತ್ಯವಿದೆ. ಸಂಸ್ಕೃತ ವಿದ್ವಾಂಸರಲ್ಲದೆ ಈ ದಿಶೆಯಲ್ಲಿ ಇತರ ಭಾಷಿಕರು ಮೂಲ ಸಂಸ್ಕೃತದ ಪಠ್ಯವನ್ನು ಪರಿಶೀಲಿಸಿ ಮುಂದುವರಿಯಬೇಕಾಗಿದೆ.

ಬೇಂದ್ರೆ, ಕೆ.ಕೃಷ್ಣಮೂರ್ತಿ, ಬನ್ನಂಜೆ ಗೋವಿಂದಾಚಾರ್ಯ, ಎಚ್.ಎಸ್. ವೆಂಕಟೇಶಮೂರ್ತಿ ಮೊದಲಾದ ಹಿರಿಯರು ಈ ದಿಸೆಯಲ್ಲಿ ಸಂಸ್ಕೃತ ಕೃತಿಗಳನ್ನು ಕನ್ನಡಕ್ಕೆ ತಂದಿದ್ದಾರೆ. ಇವರ ಪ್ರಯೋಗಗಳು ಕನ್ನಡ ಓದುಗರಿಗೆ ಪ್ರಿಯವಾಗುತ್ತಿವೆ. ಆದರೆ ಸಂಸ್ಕೃತ ಸಮಗ್ರ ಸಾಹಿತ್ಯ ಕೃತಿಗಳ ಕನ್ನಡಾನುವಾದಗಳು ಕನ್ನಡದಲ್ಲಿ ಅನ್ಯವಾಗಿಯೇ ಉಳಿದಿವೆ. ಬಸವಪ್ಪಶಾಸ್ತ್ರಿಗಳ ಅಭಿಜ್ಞಾನಶಾಕುಂತಳ, ಬೇಂದ್ರೆಯವರ ಕನ್ನಡ ಮೇಘದೂತದಂತಹ ಬೆರಳೆಣಿಕೆಯ ಸಂಸ್ಕೃತ ಭಾಷಾಂತರಗಳು ಮಾತ್ರವೇ ಕನ್ನಡದಲ್ಲಿ ಹೆಸರಾಗಿವೆ.

ಸಂಸ್ಕೃತ ಅನುವಾದಗಳ ಸಂಖ್ಯೆ ಹೇರಳವಾಗಿದ್ದರೂ ಕನ್ನಡದಲ್ಲಿ ಅವುಗಳ ಬಗೆಗೆ ದಿವ್ಯ ನಿರ್ಲಕ್ಷ್ಯವನ್ನು ತಾಳಿದುದರ ಕಾರಣವನ್ನು ಶೋಧಿಸಬೇಕಾಗಿದೆ. ಭಾಷೆಯ ಜಟಿಲತೆ ಸಾಂಪ್ರದಾಯಕ ವಸ್ತು, ಕತೆಗಳು ಇತ್ಯಾದಿಗಳ ಕಾರಣದಿಂದಲೇ ಅವು ಅನ್ಯವಾಗುಳಿದಿವೆಯೇ? ಇತ್ಯಾದಿಗಳನ್ನು ಕುರಿತು ಕನ್ನಡದಲ್ಲಿ ಅಧ್ಯಯನಗಳು ನಡೆಯಬೇಕಾಗಿದೆ ಒಂದೇ ಕಾವ್ಯಕೃತಿಯ ಹಲವು ಅನುವಾದಗಳು ಕನ್ನಡದಲ್ಲಿ ಕಾಣಿಸಿಕೊಂಡಿವೆ. ಅಭಿಜ್ಞಾನಶಾಕುಂತಳ,ಉತ್ತರರಾಮ ಚರಿತ, ಮೃಚ್ಛಕಟಿಕ, ಮೇಘಸಂದೇಶ, ಭಗವದ್ಗೀತೆ ಇತ್ಯಾದಿ ಕೃತಿಗಳು ಅನೇಕ ಸಾರಿ ಕನ್ನಡದಲ್ಲಿ ಅನುವಾದಗೊಂಡಿವೆ. ಯಾಕೆ ಇವು ಮತ್ತೆ ಮತ್ತೆ ಬೇರೆ ಬೇರೆ ಲೇಖಕರಿಂದ ಅನುವಾದವಾಗಿವೆ? ಅನುವಾದವಾಗುತ್ತಲೇ ಇವೆ. ಇದಕ್ಕೆ ಇರಬಹುದಾದ ಕಾರಣಗಳು, ಅವುಗಳ ಅನುವಾದದ ಸ್ವರೂಪ ಇತ್ಯಾದಿಗಳನ್ನು ಭಾಷಾಂತರ ಕ್ಷೇತ್ರದ ಅಧ್ಯಯನಗಳಾಗಿ ಕೈಗೆತ್ತಿಕೊಳ್ಳಬೇಕು. ಇವು ಸಂಸ್ಕೃತ ಸಾಹಿತ್ಯಕ್ಕೆ ಸಂಬಂಧಿಸಿದ ಅಧ್ಯಯನಗಳಾಗಿರದೆ ಭಾಷಾಂತರ ಪ್ರಕ್ರಿಯೆಯ ತಾತ್ವಿಕತೆಗಳನ್ನು ಕಂಡುಕೊಳ್ಳುವ ಅಧ್ಯಯನಗಳಾಗಬೇಕಿದೆ. ಸಂಸ್ಕೃತ ಭಾಷಾಂತರದ ಬಹು ಆವೃತ್ತಿಗಳ ತೌಲನಿಕ ಪರಿಶೀಲನೆಯನ್ನು ಮಾಡುವುದಕ್ಕೆ ವಿಪುಲ ಆಕರ ಸಾಮಗ್ರಿಗಳು ಕನ್ನಡದಲ್ಲಿವೆ. ಇವುಗಳನ್ನು ಭಾಷಾಂತರ ಪ್ರಕ್ರಿಯೆಯ ಸ್ವರೂಪ ಹಾಗೂ ಸಿದ್ಧಾಂತದ ನೆಲೆಗಳನ್ನು ಕಂಡುಕೊಳ್ಳುವ ಸಲುವಾಗಿಯಾದರೂ ಅಧ್ಯಯನಕ್ಕೆ ಅಳವಡಿಸಬೇಕಾಗಿದೆ. ಆಗ ಮಾತ್ರ ಸಂಸ್ಕೃತ–ಕನ್ನಡ ಭಾಷಾಂತರ ಪ್ರಕ್ರಿಯೆಯ ವಿಭಿನ್ನ ಆಯಾಮಗಳನ್ನು ಕಂಡುಕೊಳ್ಳಬಹುದು.

ಪರಾಮರ್ಶನ ಗ್ರಂಥಗಳು

1. ದೇವಿ ಜಿ.ಎನ್., (2015), ವಿಸ್ಮೃತಿಯ ನಂತರ, ಅನು: ಬಿ.ಎ. ಶಾರದ, ಕುವೆಂಪು ಭಾಷಾಭಾರತಿ ಪ್ರಾಧಿಕಾರ, ಬೆಂಗಳೂರು.
2. ಮೋಹನ ಕುಂಟಾರ್, (2015), ಅನುವಾದ ಸಾಹಿತ್ಯ, ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆ, ಸಂಪುಟ–10, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.
3. ಸಿ.ಪಿ.ಕೆ. (1972) ಕಲಾಪ, ಶರತ್ ಪ್ರಕಾಶನ, ಮೈಸೂರು.
4. ಸಿ.ಪಿ.ಕೆ (ಡಾ), (2009) ಭಾಷಾಂತರ ಭಾರತಿ, ಶ್ರೀಲಲಿತಾ ಬುಕ್ ಬ್ಯೂರೋ, ಮೈಸೂರು.

✠✠✠

ನವೆ ನವೋನ್ಮೇಷಶಾಲಿನೀ

ಬಿ.ಎಂ. ರೋಹಿಣಿ
ಪಂಚಾಯತ್ ಕಛೇರಿ ಬಳಿ, ಕುಡುಪು, ಮಂಗಳೂರು

ಆನಂದವನ್ನು ಕೊಡುವ ವಿಷಯಗಳಲ್ಲಿ ಸಾಹಿತ್ಯವೂ ಒಂದು. ಕಾವ್ಯಾನಂದವು ಬ್ರಹ್ಮಾನಂದಕ್ಕೆ ಸಮೀಪವಾದುದು ಎಂಬ ಮಾತಿದೆ. ಕಾವ್ಯವೇ ಈಗ ಔಟ್ ಡೇಟೆಡ್ ಆಗಿ ಆಕರ್ಷಣೆ ಕಳೆದುಕೊಂಡಿರುವಾಗ ಬ್ರಹ್ಮಾನಂದದ ಉಸಾಬರಿ ನಮಗೇಕೆ? ಆನಂದದ ಮೂಲಗಳು ವೈವಿಧ್ಯಮಯವಾಗಿ ಹೆಚ್ಚುತ್ತಿರುವ ಈ ಕಾಲದಲ್ಲಿ ಸಾಹಿತ್ಯವನ್ನು ಮೆಚ್ಚಿ, ಓದಿ ಆನಂದಿಸುವ ವರ್ಗ ವೊಂದಿದೆಯೇ ಎಂದು ಹುಬ್ಬೇರಿಸಿ ನೋಡುವವರ ಕಾಲದಲ್ಲಿ ನಾವಿದ್ದೇವೆ. ಹೌದು ಅಕ್ಷರಸ್ಥರ ಸಂಖ್ಯೆ ಹೆಚ್ಚಿದಷ್ಟು ವೇಗದಲ್ಲಿ ಸಾಹಿತ್ಯಾಸಕ್ತರ ಸಂಖ್ಯೆ ಹೆಚ್ಚುತ್ತಿಲ್ಲ. ರಾಜ್ಯ ಭಾಷೆಯಾದ ಕನ್ನಡ ಇನ್ನೇನು ಅಲ್ಪಸಂಖ್ಯಾತರ ಆಡುನುಡಿಯಾಗುತ್ತಿದೆ ಎಂದು ಕಳವಳ ವ್ಯಕ್ತಪಡಿಸುತ್ತಿರುವವರ ಆರ್ತನಾದ ಕರ್ನಾಟಕದ ಹೃದಯಶಿವನನ್ನು ಎಚ್ಚರಿಸುವ ಕೆಲಸವನ್ನು ಮಾಡುತ್ತಿದೆ. ಓದುವವರಿಲ್ಲದೆ ಬರೆದು ಪ್ರಕಟಿಸುವುದು ಯಾರಿಗಾಗಿ ಎಂಬ ಪ್ರಶ್ನೆಯನ್ನು ಸಾಹಿತಿಗಳ ಮುಖಕ್ಕೆ ಎಸೆದು ವ್ಯಂಗ್ಯದ ನಗು ಬೀರುವ ಆಂಗ್ಲ ಭಾಷಾ ಮೋಹಿಗಳನ್ನು ಕಂಡಾಗ ನನಗೆ ಅಯ್ಯೋ ಪಾಪ ಎಂದು ಅನಿಸುತ್ತದೆ. ಯಾಕೆ ಗೊತ್ತೇ? ಶತಮಾನದ ಹಿಂದೆಯೂ ಹೀಗೆಯೇ ಕನ್ನಡ ಭಾಷೆಯ ಬಗ್ಗೆ ಉಪೇಕ್ಷೆ ಇತ್ತು. ಈ 21ನೆಯ ಶತಮಾನದವರೆಗೂ ಕನ್ನಡ ಉಳಿದು, ಬೆಳೆದು ಬಂದಿರುವಾಗ ಕನ್ನಡದ ಪವರು ಎಷ್ಟಿದೆಯೆಂದು ಅವರಿಗೆ ಅರ್ಥವಾದೀತು. ಅಂತರ್ಜಾಲದಲ್ಲಿ ಬರೆಯುವ ಹೊಸ ಪೀಳಿಗೆಯ ಯುವ ಸಮುದಾಯಗಳಲ್ಲಿರುವ ಕನ್ನಡ ಪ್ರೀತಿಯನ್ನು ಕಂಡರೆ ಮನ ಮುರಿಯುವವರಿಗೆ ಮನವರಿಕೆಯಾದೀತು. ವಿಭಿನ್ನ ಬ್ಲಾಗುಗಳಲ್ಲಿ ಬರೆಯುವ ಸಾವಿರಾರು ಮಂದಿಯ ಆಸಕ್ತಿ ಅಭಿರುಚಿಗಳು ಕನ್ನಡದ ಶ್ರೀಮಂತಿಕೆ ಯನ್ನು ವ್ಯಕ್ತಪಡಿಸುತ್ತದೆ. ನಾನಂತೂ ಆಶಾವಾದಿ. ಹೊಸಪೀಳಿಗೆಯ ಯುವ ಸಾಹಿತಿಗಳು ಕವಿಗಳು ಬರೆದ ಬರಹಗಳನ್ನು ಕಂಡಾಗ ಆನಂದದಿಂದ ಬೆರಗಾಗಿ ಮೂಕಳಾಗಿದ್ದೇನೆ. ಬ್ರಹ್ಮಾನಂದವೇನೆಂದು ನನಗೆ ಗೊತ್ತಿಲ್ಲ.

ಆದರೆ ಉತ್ತಮ ಕೃತಿಗಳನ್ನು ಓದಿದಾಗ ಉಂಟಾಗುವ ಆನಂದಕ್ಕೆ ಸಾಟಿಯಾದದ್ದು ನನ್ನ ಡಿಕ್ಷನರಿಯಲ್ಲಂತೂ ಇಲ್ಲ.

ಇಷ್ಟೆಲ್ಲ ಪೂರ್ವ ಪೀಠಿಕೆ ಯಾಕೆಂದು ವಿವರಿಸುವ ಅಗತ್ಯವಿಲ್ಲ. ಕಂಡಾಪಟ್ಟೆ ಓದಿನ ಹಸಿವಿರುವ ನಾನು ಹೊಸಬರು ಯಾರು ಬರೆದರೂ ಕುತೂಹಲದಿಂದ ಓದುತ್ತೇನೆ. ಅನ್ನ ಬೆಂದಿದೆ ಎಂದು ನೋಡಲು ಒಂದು ಅಗುಳಷ್ಟೇ ಸಾಕಲ್ಲವೇ? ಆಗಾಗ ಪತ್ರಿಕೆಗಳಲ್ಲಿ ಹೊಸ ಲೇಖಕ, ಲೇಖಕಿಯರ ಲೇಖನ, ಕತೆ, ಕವನ ಯಾವುದು ಪ್ರಕಟವಾದರೂ ಆಸಕ್ತಿಯಿಂದ ಗಮನಿಸುತ್ತೇನೆ. ಹಾಗೆ ಗಮನಿಸಿದ ಲೇಖಕಿಯರಲ್ಲಿ ರೇಶ್ಮಾ ಭಟ್ ಕೂಡಾ ಒಬ್ಬರು. ಅಕಸ್ಮಾತ್ತಾಗಿ ಒಮ್ಮೆ ಭೇಟಿಯಾದಾಗ ಈ ವಿಷಯವನ್ನು ಅವರಲ್ಲಿ ಹಂಚಿಕೊಂಡಾಗ ನನಗೆ ತುಂಬಾ ತೃಪ್ತಿಯಾಗಿತ್ತು. ನಿರಂತರವಾಗಿ ಸಣ್ಣ ಪತ್ರಿಕೆಗಳಿಗೆ ಬರೆಯುವ ಹವ್ಯಾಸವಿರಿಸಿಕೊಂಡ ನನಗೆ ಯಾರಾದರು ಅಪರೂಪಕ್ಕೊಮ್ಮೆ 'ಮೇಡಂ ನಿಮ್ಮ ಲೇಖನ ಓದಿದೆ' ಎಂಬ ಮಾತು ಕೇಳಿದಾಗ ದೊಡ್ಡ ಪ್ರಶಸ್ತಿ ಲಭಿಸಿದಷ್ಟೇ ಖುಷಿಯಾಗುತ್ತಿತ್ತು. ಹಾಗೆಯೇ ರೇಶ್ಮಾ ಅವರಿಗೂ ಖುಷಿಯಾಗುತ್ತದೆ ಎಂದು ಭಾವಿಸಿ ಮಾತಾಡಿದಾಗ ಆದದ್ದೇ ಬೇರೆ. ನನ್ನ ವಯಸ್ಸಿನ ಹಿರಿತನಕ್ಕೆ ಮಣಿದು ಈ ಕೃತಿಗೆ ಎರಡು ಮಾತುಗಳ ಮುನ್ನುಡಿ ಬರೆಯಿರಿ ಎಂದಾಗ ನಾನು ದಂಗಾದೆ. ಕನ್ನಡ ಸಾಹಿತ್ಯದ ಪ್ರೀತಿ ಮತ್ತು ಲೇಖಕಿಯ ಮೇಲಿನ ಅಭಿಮಾನದಿಂದಾಗಿ ಒಪ್ಪಿಕೊಂಡೆ. ಅವರ ಪುಸ್ತಕದ ಬಗ್ಗೆ ಬರೆಯುವ ಬದಲು ಇಷ್ಟೊಂದು ಉದ್ದ ಪೀಠಿಕೆ ಯಾಕೆಂದು ನಿಮಗೆ ಅರ್ಥವಾಯಿತೇ? ಮೂಗಿಗಿಂತ ಮೂಗುತಿಯೇ ಭಾರವೆಂದು ನಿಮಗನಿಸಿದರೆ ಅದರಲ್ಲಿ ನನ್ನದೇನು ತಪ್ಪಿದ್ದರೂ ಹಂಸಕ್ಷೀರ ನ್ಯಾಯದಂತೆ ಸ್ವೀಕರಿಸುತ್ತೀರಿ ಎಂದು ನಂಬಿದ್ದೇನೆ.

ಕನ್ನಡ ಸಾಹಿತ್ಯದಲ್ಲಿ ಲಲಿತಪ್ರಬಂಧಗಳ ಪ್ರಕಾರಕ್ಕೆ ವಿಶೇಷ ಮನ್ನಣೆ ಇದೆ. ಹಾಸ್ಯ, ವಿಡಂಬನೆಯ ಕಥಾನಕಗಳೆಂಬ ಪ್ರಬಂಧ ಪ್ರಕಾರದಲ್ಲೂ ಸಾಕಷ್ಟು ಕೃತಿಗಳು ಬಂದಿವೆ. ರೇಶ್ಮಾ ಅವರ ಈ ಸಂಕಲನದಲ್ಲಿ ಹೆಚ್ಚಿನವು ಲಲಿತ ಪ್ರಬಂಧಗಳ ಪ್ರಕಾರದವುಗಳು. ಕೆಲವು ಹಾಸ್ಯ ಪ್ರಬಂಧಗಳ ಪ್ರಕಾರಕ್ಕೆ ಉತ್ತಮ ಮಾದರಿಯಾಗಿವೆ. ಅಡುಗೆ ಮನೆಯೊಳಗಿನ ಸಣ್ಣ ಕಿಟಕಿಯಿಂದಲೇ ವಿಶ್ವದರ್ಶನ ಮಾಡಿಸುವ ಜಾದೂ ಕಲೆಯಲ್ಲಿ ಲೇಖಕಿ ಪಳಗಿದ್ದಾರೆ. ಇಲ್ಲಿ ರಾಜಕೀಯ ವಿಡಂಬನೆಗಳಿವೆ, ತನ್ನ ವೃತ್ತಿ ಬದುಕಿನ ಬೋಳೇತನ ಶಾಣ್ಯಾತನಗಳಿವೆ. ಸಮಾಜ ವಿಜ್ಞಾನವಿದೆ. ಸಮಾಜಮುಖಿಯಾದ ಜೀವಪರವಾದ ಚಿಂತನೆಗಳಿವೆ. ಇವೆಲ್ಲವನ್ನೂ ನವಿರಾದ ಶೈಲಿಯಲ್ಲಿ ಬರೆದ ರೀತಿಗೆ ಓದುಗರು ಕ್ಲೀನ್ ಬೌಲ್ಡ್ ಆಗಿದ್ದಾರೆ. ನಾನೂ ಆಗಿದ್ದೇನೆ. ಆದುದರಿಂದ ಇಷ್ಟು ಗಟ್ಟಿ ದನಿಯಲ್ಲಿ ಘೋಷಿಸುತ್ತಿದ್ದೇನೆ. ಹೆಂಗಸರು ಬರೆದದ್ದೆಲ್ಲ ಕೊತ್ತಂಬರಿ ಜೀರಿಗೆ ಸಾಹಿತ್ಯವೆಂದು ಮೂಗು ಮುರಿವ ಮಂದಿಯ ಮುಖಕ್ಕೆ ತಿವಿದು ಒಮ್ಮೆ ಅಡುಗೆ ಮನೆಯತ್ತ ಕಣ್ಣು ಹಾಯಿಸುವಂತೆ ಮಾಡುತ್ತದೆ ಈ ಕೃತಿ. ಅಡುಗೆ ಮನೆಯನ್ನು ಅಡುಗೆ ಮನೆಯ ಒಡತಿಯನ್ನು ಮತ್ತವಳ ಪಾಕ ವೈವಿಧ್ಯಗಳನ್ನು ಮೆಚ್ಚಿ

ಕೊಂಡಾಡದೆ ಸುಮ್ಮನಿರಲು ಸಾಧ್ಯವಿಲ್ಲ. ಉಪ್ಪು, ಹುಳಿ, ಖಾರ, ಒಗರು, ಸಿಹಿ, ಕಹಿ ಮುಂತಾದ ಷಡ್ರಸಗಳು ಸಮನಾಗಿ ಹದಗೊಳಿಸಿದ ಪಾಕದ ರುಚಿಯನ್ನು ಸವಿದೇ ಹೇಳಬೇಕಾಗುತ್ತದೆ. ಅಡುಗೆ ಮನೆಯನ್ನು ಕೇಂದ್ರವಾಗಿಟ್ಟುಕೊಂಡೇ ಯೂ ಟ್ಯೂಬ್ಯೋ ನಮಃ ಎಂದು ಅಂತರ್ಜಾಲದ ತಂತ್ರಗಳನ್ನೂ ಕುತಂತ್ರಗಳನ್ನೂ ನಮಗೆ ಪರಿಚಯ ಮಾಡಿಕೊಡುವ ಲೇಖಕಿ ಯೋಗನಿದ್ರೆಯ ಫಲಶ್ರುತಿಗಳನ್ನೂ ಹೇಳಬಲ್ಲರು. ಒಂದು ತ್ಯಾಗದ ಕತೆಯಲ್ಲಿ ಲೇಖಕನ ಅಹಂ ಹೇಗೆ ಕೆಲಸ ಮಾಡುತ್ತದೆಂದು ಹೇಳುತ್ತಲೇ ಸೈಕಲ್ ಬಳಸುತ್ತಾ ಇಂಧನ ಉಳಿಸುವ ಕಸರತ್ತಿನ ಬಗ್ಗೆಯೂ ಹೇಳಬಲ್ಲರು. ಮಕ್ಕಳ ಮುಗ್ಧತೆ ಅವರ ಶಿಕ್ಷಣ, ಹೆತ್ತವರ ಜವಾಬ್ದಾರಿ, ಮನುಷ್ಯರ ಅಂತರಂಗದ ತುಡಿತಗಳು, ಸಣ್ಣತನಗಳು, ಗರ್ವ, ಅಹಂಕಾರ ಮುಂತಾದ ಸಕಲ ವಿಷಯವಸ್ತುಗಳೂ ಸುಲಲಿತ ವಾದ ಪ್ರಬಂಧಗಳಾಗಿ ರೂಪುಗೊಂಡಿವೆ. ಎಲ್ಲಕ್ಕಿಂತ ಹೆಚ್ಚಾಗಿ ಲೇಖಕಿಯ ಬಾಲ್ಯದ ಘಟನೆಗಳ ಅನುಭವ ಕಥನಗಳಾದ ಹಾದಿಪುರಾಣ, ರೈಡ್ ದಾಳಿ, ಉಪ್ಪಿಟ್ಟಿಗೆ ಜಯವಾಗಲಿ, ಒಂದು ತ್ಯಾಗದ ಕತೆ, ಮನೆಹರಟೆ, ಸ್ವೈರ ವಿಹಾರ, ಗೊರಖೋಪಖ್ಯಾನ ಮುಂತಾದವುಗಳು ಕಚಗುಳಿಯಿಡುತ್ತಾ ಓದಿಸಿಕೊಂಡು ಹೋಗುತ್ತದೆ. ಲೇಖಕಿಯ ತವರಿನ ಮಮತೆಯ ಒಡಲಿನ ಸುಗಂಧವನ್ನು ಓದುಗರು ಆಹಾ ಎನ್ನುತ್ತಾ ಆಘ್ರಾಣಿಸುವಂತೆ ಮಾಡಿದ್ದಾರೆ. ತನ್ನ ಸುತ್ತುಮುತ್ತಲ ಪ್ರಪಂಚವನ್ನು ತನ್ನ ಎಕ್ಸರೇ ಕಣ್ಣಿನಿಂದ ಕಾಣುತ್ತಾ ಅದರ ಹುಳುಕುಗಳನ್ನು ಅನಾವರಣ ಮಾಡುವ ಕೌಶಲವು ಬೆರಗುಗೊಳಿಸುತ್ತದೆ. ವಿಡಂಬನೆ ಹಾಸ್ಯಗಳು ತಲೆಯಿಂದ ಹುಟ್ಟದೆ ಹೃದಯದಿಂದ ಹುಟ್ಟಬೇಕು ಎಂಬುದಕ್ಕೆ ಮಾದರಿಯಾದ ಹಲವಾರು ಲೇಖನಗಳು ಈ ಸಂಕಲನದಲ್ಲಿವೆ. ತನ್ನ ಸುತ್ತಲ ಪ್ರಪಂಚವನ್ನು ತಿದ್ದುವ ಮೊದಲು ತನ್ನನ್ನು ತಾನೇ ವಿಡಂಬನೆ ಮಾಡುತ್ತಾ ವಿಮರ್ಶಿಸುವ ಪರಿಯೇ ಆಪ್ಯಾಯಮಾನವಾಗಿದೆ. ಈ ಆಪ್ಯಾಯಮಾನ ಎಂಬ ಪದದ ಜಾಡು ಹಿಡಿದು ಸಂಶೋಧನೆ ಮಾಡಿದ ಲೇಖನವೂ ಈ ಸಂಕಲನದಲ್ಲಿದೆ. ರೇಶ್ಮಾ ಅವರು ಲೇಖನದ ಮಧ್ಯೆ ಮಧ್ಯೆ ಹೊರಹೊಮ್ಮಿಸಿದ ಕವನದ ಸಾಲುಗಳು ರಸನೇಂದ್ರಿಯಗಳನ್ನು ಕೆರಳಿಸುವ ಒಗ್ಗರಣೆಯಂತಿದೆ. ಅವುಗಳು ಲೇಖನಕ್ಕೆ ಗಟ್ಟಿತನವನ್ನೂ ವಿಶೇಷ ಸೌಂದರ್ಯವನ್ನೂ ನೀಡಿವೆ.

ಉದಾ: 1) ಅಚ್ಛ ಮನಸ್ಸಿನ ಓನರಿರೆ
ಸ್ವಚ್ಛವಾಗಿಹ ವಠಾರವಿರೆ
ವೆಚ್ಚ ಮಾಡಿದಷ್ಟು ನೀರು ಬರುತಿರೆ
ಕಿಚ್ಚು ಹಚ್ಚಿಬಿಡು ನಿನ್ನ ವಿದೇಶೀ ಮನೆಗೆಂದ ಸಾಮಾನ್ಯ॥

2) ಉಸಿರಿರುವ ತನಕ ಹೆಸರುಳಿವುದಾದರೂ
ಉಸಿರಳಿದಮೇಲೂ ಹೆಸರುಳಿಯುವಂತೆ॥

ಲೇಖಕಿ ಇಂತಹ ಸಣ್ಣ ಸಣ್ಣ ಜೀರಿಗೆ ಮಿಠಾಯಿಗಳನ್ನು ಅಲ್ಲಲ್ಲಿ ಉದುರಿಸಿ ನಮಗೆ ಸವಿಯುವ ಅವಕಾಶ ನೀಡಿದ್ದಾರೆ. ಹೊಸ ರೂಪಕಗಳು ಈ ಕೃತಿಯಲ್ಲಿ

ಸಾಕಷ್ಟು ಸಮೃದ್ಧವಾಗಿವೆ. ಸೌಟಿಂಗ್ ಎಂಬ ಹೊಸ ಪದವನ್ನು ಲೇಖಕಿಯೇ ಸೃಷ್ಟಿಸಿದ್ದಾರೆ. ವೈಚಾರಿಕತೆ ಮತ್ತು ಭಾವನಾತ್ಮಕ ಚಿಂತನೆಗಳನ್ನು ಲಲಿತ ಪ್ರಬಂಧಗಳಲ್ಲಿ ಎರಕ ಹೊಯ್ದು ಒಂದೊಂದು ಲೇಖನವೂ ಪ್ರತ್ಯೇಕ ಪ್ರತಿಮೆಯಾಗುವಂತೆ ಕಡೆದು ನಿಲ್ಲಿಸಿದ ರೀತಿಯೇ ಸೊಗಸಾಗಿದೆ. ಪೂರ್ಣವಿರಾಮ, ಅರ್ಧವಿರಾಮಗಳನ್ನು ಬಳಸುವುದರಲ್ಲಿ ಲೇಖಕಿ ಸ್ವಲ್ಪ ಕಂಜೂಸಿತನ ತೋರಿಸಿದ್ದಾರೇನೋ ಎಂದು ಅನಿಸುತ್ತದೆ. ಇರಲಿ ಅದೊಂದು ಕೊರತೆಯಲ್ಲ.

ಕೃತಿಯನ್ನು ಕೈಗೆತ್ತಿಕೊಂಡರೆ ಕೆಳಗಿಡಲಾರದ ಆಪ್ತತೆ ನಮ್ಮ ಅಂತರಂಗವನ್ನು ಆವರಿಸುತ್ತದೆ. ಸಣ್ಣ ಕತೆಗಳ ಪ್ರಕಾರದಲ್ಲೂ ಲೇಖಕಿಯ ಪ್ರತಿಭೆ ಇಲ್ಲಿ ಮಿಂಚಿದೆ. ಮುಖ್ಯವಾಗಿ ಲಲಿತ ಪ್ರಬಂಧದಲ್ಲಿ ಕೈ ಪಳಗಿದ ಕಾರಣ ಲೇಖಕಿಯ ಮೊದಲ ಸಂಕಲನವಿದು ಎಂದು ಊಹಿಸಲೂ ಸಾಧ್ಯವಿಲ್ಲ. ಈ ಸಂಕಲನವನ್ನು ಹೊರ ತರುತ್ತಿರುವ ಲೇಖಕಿಗೆ ಶುಭ ಹಾರೈಸುತ್ತೇನೆ. ಈ ಕೃತಿಯನ್ನು ಸಹೃದಯರಾದ ಓದುಗರು ಕೊಂಡು ಓದುತ್ತಾರೆಂದು ಭಾವಿಸುತ್ತೇನೆ. ಸಣ್ಣಕಥೆ, ಕಾವ್ಯ, ಲಲಿತ ಪ್ರಬಂಧ ಈ ಮೂರೂ ಪ್ರಕಾರಗಳಲ್ಲಿ ಲೇಖಕಿಯ ಸಾಹಿತ್ಯ ಕೃಷಿ ನಿರಂತರವಾಗಿ ಮುಂದುವರಿಯಲಿ ಎಂದು ಹರಸುತ್ತೇನೆ.

✠✠✠

ನೀರು ಅಲೆಯಾಗಿ
ಗಾಳಿ ಕಂಡಿತು
ಅಲೆಯ ಮೊರೆತದಿ
ಮೌನ ಕೇಳಿತು

* ಚಿಂತನ ಬಯಲು ತ್ರೈಮಾಸಿಕ ಪತ್ರಿಕೆಯನ್ನು ವೃತ್ತಿಪರವಾಗಿ ನಡೆಸಿಕೊಂಡು ಹೋಗ ಬೇಕೆಂಬುದು ನಮ್ಮ ಅಪೇಕ್ಷೆ.
* ಈ ಪತ್ರಿಕೆ ISSN ಮಾನ್ಯತೆ ಪಡೆದಿರುತ್ತದೆ. ISSN 2278-2192
* ಗಂಭೀರ ಚಿಂತನೆಯನ್ನೊಳಗೊಂಡ ಲೇಖನಗಳು, ವಿಮರ್ಶಾ ಲೇಖನಗಳು ಹಾಗೂ ಸಂಶೋಧನಾತ್ಮಕ ಲೇಖನಗಳನ್ನು ಪ್ರಕಟಣೆಗಾಗಿ ಆಹ್ವಾನಿಸುತ್ತಿದ್ದೇವೆ.
* ಇಲ್ಲಿ ಪ್ರಕಟವಾಗುವ ಲೇಖನಗಳ ಗುಣಮಟ್ಟವನ್ನು ಉಳಿಸಿ ಬೆಳೆಸುವುದಕ್ಕಾಗಿ, ಲೇಖನಗಳನ್ನು ಆಯಾ ಕ್ಷೇತ್ರಗಳಲ್ಲಿ ಪರಿಣತರಾದವರಿಂದ ಸಮೀಕ್ಷೆ ಮಾಡಿಸಿ, ಅಂದರೆ, ಅನಾಮಿಕ ಸಂಪಾದಕರಿಂದ ಅಭಿಪ್ರಾಯ ಪಡೆದು ಪ್ರಕಟಿಸಲಾಗುವುದು. ತಜ್ಞರ ಸೂಚನೆಗಳನ್ನು ಅನುಸರಿಸಿ, ಅವಶ್ಯವೆನಿಸಿದರೆ, ಸೂಕ್ತ ಪರಿಷ್ಕರಣೆಗಳನ್ನು ಮಾಡುವಂತೆ ಲೇಖಕರನ್ನು ಕೋರಲಾಗುವುದು.
* ಎಲ್ಲಾ ಪ್ರಕಟಿತ ಲೇಖನಗಳಿಗೆ ಸಂಭಾವನೆ ನೀಡಲಾಗುವುದು.
* ಲೇಖನಗಳಿಗೆ ಬಹಳ ಕಟ್ಟುನಿಟ್ಟಾದ ಪದಗಳ ಮಿತಿ ಇಲ್ಲ.
* ಯಾವುದೇ ಆಧಾರಗಳಿಲ್ಲದೆ, ಕೇವಲ ಹೇಳಿಕೆ, ಅಭಿಪ್ರಾಯ ರೂಪದ ಬರಹಗಳನ್ನು ದಯವಿಟ್ಟು ಕಳುಹಿಸುವುದು ಬೇಡ. ಅಗತ್ಯವಿರುವ ಕಡೆಗಳಲ್ಲಿ ಟಿಪ್ಪಣಿ, ಪರಾಮರ್ಶನ ಗ್ರಂಥಗಳು ಇತ್ಯಾದಿ ಮಾಹಿತಿಗಳನ್ನು ಲೇಖನಗಳು ಹೊಂದಿರಲಿ.
* ಲೇಖನಗಳು ಬೇರೆ ಕಡೆ ಪ್ರಕಟವಾಗಿರಬಾರದು. ಜಾಲಲೇಖ (ಬ್ಲಾಗ್)ಗಳಲ್ಲಿ ಪ್ರಕಟವಾಗಿದ್ದರೆ ವಿವರಗಳನ್ನು ನೀಡಬೇಕು. ಅನುವಾದಿತ ಲೇಖನಗಳಾದರೆ ಮೂಲದ ಬಗ್ಗೆ ಪೂರ್ಣ ವಿವರ ಹಾಗೂ ಮೂಲಲೇಖಕರ ಅನುಮತಿ ಇತ್ಯಾದಿ ತಾಂತ್ರಿಕ ಆವಶ್ಯಕತೆಗಳನ್ನು ಪೂರೈಸಿರಬೇಕು. ಲೇಖನಗಳನ್ನು ನುಡಿ ತಂತ್ರಾಂಶದಲ್ಲಿ ಸಿದ್ಧಪಡಿಸಿ ಮಿಂಚಂಚೆ ಮೂಲಕ ಕೆಳಗೆ ನೀಡಿರುವ ವಿಳಾಸಕ್ಕೆ ಕಳುಹಿಸಬೇಕು. ಟಿಪ್ಪಣಿಗಳು ಲೇಖನದ ಕೊನೆಗೇ ಇರಬೇಕು.
* ಲೇಖಕರು ತಮ್ಮ ಲೇಖನಗಳ ಪ್ರತಿಗಳನ್ನು ಇಟ್ಟುಕೊಳ್ಳಬೇಕಾಗಿ ಕೋರಿಕೆ.
* ಲೇಖಕರು ತಮ್ಮ ಪೂರ್ಣ ಅಂಚೆ ವಿಳಾಸ, ಮಿಂಚಂಚೆ ವಿಳಾಸ ಹಾಗೂ ದೂರವಾಣಿ ಸಂಖ್ಯೆಗಳನ್ನು ಕಡ್ಡಾಯವಾಗಿ ನಮೂದಿಸಿರಬೇಕು.
* ಓದುಗರ ಪ್ರತಿಕ್ರಿಯೆಗಳನ್ನು ಸ್ವಾಗತಿಸುತ್ತೇವೆ.
* ಚಂದಾದಾರರಿಗೆ ವಂಚನೆಯಾಗುವಂತೆ ಪತ್ರಿಕೆಯನ್ನು ಅರ್ಧದಲ್ಲಿ ನಿಲ್ಲಿಸುವುದಿಲ್ಲ.
* ಸಂಪರ್ಕ ವಿಳಾಸ : ಸಂಪಾದಕರು, ಚಿಂತನ ಬಯಲು, ನಂ. 15–109
ಮೊಡಂಕಾಪು ಅಂಚೆ, ಬಂಟ್ವಾಳ ತಾಲೂಕು, ದಕ್ಷಿಣ ಕನ್ನಡ – 574 219.
ಮಿಂಚಂಚೆ : chinthanabayalu@gmail.com
ದೂರವಾಣಿ : 9449772651

RNI Reg No. : KARKAN /2012/49251

CHINTHANA BAYALU **A Peer Reviewed Journal** **ISSN 2278-2192**
Kannada Quarterly, Volume 8, Issue 3, January - March 2020
Edited, Published, Printed & Owned by

Reshma G. Bhat
Door No. 15-109, Modankapu Post
Bantwal Taluk, Dakshina Kannada - 574 219

Printed at

Aakrithi Prints
Light House Hill Road, Mangaluru - 575 001

Pages : 64

ವಾರ್ಷಿಕ ಚಂದಾ : ರೂಪಾಯಿ ಇನ್ನೂರು

(ಅಂಚೆ ವೆಚ್ಚ ಸೇರಿ)

ಮೂರು ವರ್ಷಗಳಿಗೆ : ರೂಪಾಯಿ ಆರುನೂರು

ಐದು ವರ್ಷಗಳಿಗೆ : ರೂಪಾಯಿ ಒಂದು ಸಾವಿರ

ಆಜೀವ (ಪೋಷಕ) ಚಂದಾ : ರೂಪಾಯಿ ಐದು ಸಾವಿರ

ಮಹಾಪೋಷಕ ಚಂದಾ : ರೂಪಾಯಿ ಹತ್ತು ಸಾವಿರ

ಬಿಡಿ ಪ್ರತಿ : ರೂಪಾಯಿ ಐವತ್ತು

ದಯವಿಟ್ಟು ಡಿ.ಡಿ./ ಎಂ.ಓ.ಗಳನ್ನು 'ಚಿಂತನ ಬಯಲು' ಹೆಸರಿನಲ್ಲಿ ಪತ್ರಿಕೆಯ ವಿಳಾಸಕ್ಕೆ ಕಳುಹಿಸಿ. ಚೆಕ್/ಡಿ.ಡಿ. ಮಂಗಳೂರಿನಲ್ಲಿ ಸಂದಾಯವಾಗುವಂತಿರಲಿ. ದಯವಿಟ್ಟು ಹೊರ ಊರಿನ ಚೆಕ್ ಕಳುಹಿಸಬೇಡಿ. ಎಲ್ಲಕ್ಕಿಂತ ಸುಲಭವಾಗಿ ಈ ಕೆಳಗಿನ ಖಾತೆಗೆ ನೇರವಾಗಿ ಸಂದಾಯ ಮಾಡಿ ಪೂರ್ಣವಿಳಾಸ ಹಾಗೂ ದೂರವಾಣಿ ಇತ್ಯಾದಿ ವಿವರಗಳೊಂದಿಗೆ ಸಂದಾಯದ ವಿವರಗಳನ್ನು ಬರೆಯಬಹುದು ಅಥವಾ ಮಿಂಚಂಚೆ ಮೂಲಕ ತಿಳಿಸಬಹುದು. ಬ್ಯಾಂಕ್ ಚಾರ್ಜನ್ನು ಚಂದಾದಾರರೇ ದಯವಿಟ್ಟು ಭರಿಸಬೇಕು.

ಕರ್ನಾಟಕ ಬ್ಯಾಂಕ್
ಬಂಟ್ವಾಳ ಮೂಡ ಶಾಖೆಯಲ್ಲಿ
ಚಿಂತನ ಬಯಲು ಹೆಸರಿನಲ್ಲಿರುವ

ಕರೆಂಟ್ ಅಕೌಂಟ್ ಸಂಖ್ಯೆ : 0712000100041401

IFSC : KARB0000071

ಸುಲಭ ಬ್ಯಾಂಕಿಂಗ್ ಸೇವೆಗಾಗಿ ನಿಮ್ಮ ಹತ್ತಿರದ ಶಾಖೆಯನ್ನು ಸಂಪರ್ಕಿಸಿ ಅಥವಾ 1800 425 1444 ಗೆ ಕರೆ ಮಾಡಿರಿ.

ಕರ್ನಾಟಕ ಬ್ಯಾಂಕ್ ಲಿ.
ನಿಮ್ಮ ಕುಟುಂಬದ ಬ್ಯಾಂಕ್. ಭಾರತದಾದ್ಯಂತ.
ನೋಂದಾಯಿತ ಹಾಗೂ ಪ್ರಧಾನ ಕಚೇರಿ: ಮಂಗಳೂರು - 575 002 ಇಮೇಲ್: info@ktkbank.com ವೆಬ್‌ಸೈಟ್: www.karnatakabank.com